ತಾತ್ಪರ್ಯಾರ್ಥ: ಕಾವ್ಯದ ಪ್ರಾರಂಭದಲ್ಲಿ ಮಂಗಳಕರವಾದ ''ಭದ್ರಂ'' ಎಂಬ ಪದಪ್ರಯೋಗ ಮಾಡಿರುವುದರಿಂದ ಕಾವ್ಯಕ್ಕೂ, ಕವಿಗಳಿಗೂ ಶುಭವು ಸೂಚಿತವಾಗುತ್ತದೆ/ ''ಭದ್ರ'' ಶಬ್ದವು ''ಭದಿ ಕಲ್ಯಾಣೇ ಸುಖೇ ಚ'' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ''ಭದ್ರಂ ಕಲ್ಯಾಣಸೌಖ್ಯಯೋಃ'' (ವೈಜಯಂತೀ), ''ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ, ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ----'' - ''ನಾವು ಯಾವಾಗಲೂ ನಮ್ಮ ಕಿವಿಗಳಿಂದ ಮಂಗಳಕರವಾದುದನ್ನೇ ಕೇಳುವಾ, ಕಣ್ಣುಗಳಿಂದ ಯಾವಾಗಲೂ ಶುಭಕರವಾದುದನ್ನೇ ನೋಡುವಾ,'' ಇತ್ಯಾದಿಯಾಗಿ ಋಗ್ವೇದದಲ್ಲಿ ''ಭದ್ರ'' ಶಬ್ದವು ಮಂಗಳಕರವೆಂಬ ಅರ್ಥದಲ್ಲಿ ಅನೇಕ ಸಲ ಪ್ರಯೋಗಿಸಲ್ಪಟ್ಟಿದೆ. ಈ ಶ್ಲೋಕದ ಮೊದಲ ಪಂಕ್ತಿಯಲ್ಲಿ ಗಣಗಳಲ್ಲಿ ಶ್ರೇಷ್ಠವಾದ ದೇವಗಣದ ನಿರ್ದೇಶವಿದ್ದುದರಿಂದಲೂ ಕಾವ್ಯಕ್ಕೂ, ಕವಿಗೂ ಅಭ್ಯುದಯವಿದೆಯೆಂದು ಸೂಚಿತವಾಗಿದೆ.

ಗೃಣಾತಿ - ಉಪದಿಶತಿ ಇತಿ ಗುರುಃ ಎಂಬ ವ್ಯುತ್ಪತ್ತಿಯಿಂದ ಬಂದಿರುವ ಗುರು ಶಬ್ದದಿಂದಲೇ ಶ್ರೇಷ್ಠರಾದ ಗುರುಗಳಾಗಲು ಯಾರು ಅರ್ಹರು ಎಂಬುದು ವಿದಿತವಾಗುತ್ತದೆ. ತಮ್ಮನ್ನು ನಂಬಿ ಶ್ರದ್ಧೆಯಿಂದ, ''**ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ**

Rarest Archiver

ಪ್ರಪನ್ನಂ'' ಎಂದು ಶರಣಾಗತಿ ಭಾವದಿಂದ ಹಾಗೂ ಜಿಜ್ಞಾಸೆಯಿಂದ ಆತುರರಾದ ಯೋಗ್ಯಜೀವರುಗಳಿಗೆ, ಅವರಿಗೆ ಆತ್ಯಂತಿಕವಾದ ಕಲ್ಯಾಣವನ್ನು ದಯಪಾಲಿಸುವ ಜ್ಞಾನದ ಹಾಗೂ ಸಾಧನಮಾರ್ಗದ ಉಪದೇಶವನ್ನು ನಿರಂತರವಾಗಿ ಮಾಡುವವರೇ ಶ್ರೇಷ್ಠರಾದ ಗುರುಗಳು. ಶ್ರೀಯೋಗೀಂದ್ರತೀರ್ಥರು ತಾವು ರಚಿಸಿದ್ದ ಗ್ರಂಥಗಳಿಂದಾಗಿ ಹಾಗೂ ಶಿಷ್ಯರಿಗೆ ಮಾಡಿದ ಸದುಪದೇಶದಿಂದಾಗಿ ಶ್ರೇಷ್ಠ ಗುರುಗಳಾಗಿದ್ದಾರೆ. ಇಂಥ ಗುರುಗಳು ತಮ್ಮ ಜ್ಞಾನಭಂಡಾರದ ಹಾಗೂ ವಾದವೈಖರಿಯ ವರ್ಚಸ್ಸಿನಿಂದಲೇ ದುರ್ವಾದಿಗಳನ್ನು ಯಾವಾಗಲೂ ಜಯಿಸುತ್ತಾರೆ. ಮನೋರೋಗಗಳ ನಿವಾರಣೆಗೆ ಮುಖ್ಯವಾದ ಉಪಾಯಗಳೆಂದರೆ ಇಂದ್ರಿಯ ಜಯ, ಬುದ್ಧಿ ವಿಕಾಸ, ಸಾತ್ವಿಕ ಜ್ಞಾನ ಇತ್ಯಾದಿಗಳು. ಇವೆಲ್ಲ ಶ್ರೀಯೋಗೀಂದ್ರತೀರ್ಥರ ಉಪದೇಶದಿಂದ ಪ್ರಾಪ್ತವಾಗಿ ಮಿಥ್ಯಾಜ್ಞಾನ, ವಿಪರೀತಜ್ಞಾನ, ಸಂಶಯ ಇತ್ಯಾದಿ ಮನೋರೋಗಗಳು ದೂರವಾಗುತ್ತವೆ. ದೈಹಿಕ ರೋಗಗಳೂ ಕೂಡ ಇವರ ಅನುಗ್ರಹದಿಂದ ನಾಶಹೊಂದುತ್ತವೆ.

ಶ್ರೀಯೋಗೀಂದ್ರತೀರ್ಥರು ಅಶ್ವಿನೀದೇವತೆಗಳಂತೆ ಕೇವಲ ದೈಹಿಕ ರೋಗಗಳನ್ನು ನಿವಾರಣೆ ಮಾಡುವ ಕಾರ್ಯದಲ್ಲಿ ದಕ್ಷರಾಗಿರದೇ ದೇವಗುರುವಾದ ಬೃಹಸ್ಪತಿಯಂತೆ ತತ್ತ್ವಜ್ಞಾನೋಪದೇಶದಲ್ಲಿಯೂ, ದೇವೇಂದ್ರನಂತೆ ಪರರನ್ನು ನಿಗ್ರಹಿಸುವುದರಲ್ಲಿಯೂ ಮನೋರೋಗ ನಿವಾರಣೆ ಮಾಡುವುದರಲ್ಲಿಯೂ ನಿಷ್ಣಾತರಾಗಿದ್ದಾರೆ. ಗುರುತ್ವ, ಜಯಶೀಲತ್ವ, ವೈದ್ಯತ್ವ ಇತ್ಯಾದಿ ಎಲ್ಲ ಗುಣಗಳನ್ನು ಪಡೆದಿರುವ ಶ್ರೀಯೋಗೀಂದ್ರತೀರ್ಥರು ಅಶ್ವಿನೀದೇವತೆಗಳಿಗಿಂತ ನಿಜವಾಗಿಯೂ ಉತ್ತಮರಾಗಿದ್ದಾರೆ.

ತಾರಾವಲೀ ಎಂದರೆ ನಕ್ಷತ್ರಗಳ ಸಾಲು, ಒಂದೊಂದು ಶ್ಲೋಕದಲ್ಲಿ ಒಂದೊಂದು ನಕ್ಷತ್ರದ ಹೆಸರು ಬರುವಂತೆ 27 ನಕ್ಷತ್ರಗಳ ಹೆಸರುಗಳುಳ್ಳ ಶ್ಲೋಕಗಳಿಗೆ ''ತಾರಾವಲೀ'' ಎಂದು ಕರೆಯಲಾಗುತ್ತದೆ. ಸ್ತುತಿಪರವಾದ ಕಾವ್ಯವನ್ನು ತಾರಾವಲೀ ಪದ್ಧತಿಯಲ್ಲಿ ಬರೆಯುವ ಪರಿಪಾಠವಿದೆ. ''ತಾರ್ಯತೇ ಸಂಸಾರಾರ್ಣವಾತ್ ಅನೇನ'' ಎಂಬ ವ್ಯುತ್ಪತ್ತಿಯಿಂದ ತಾರಾ ಎಂದರೆ ಸಂಸಾರಸಾಗರದಿಂದ ಪಾರು ಮಾಡಲು ಅನುಕೂಲವಾದ ಉಪಾಯ ಎಂದು ಅರ್ಥ ಮಾಡಬಹುದು. ತಾರಾವಲೀ ಸ್ತೋತ್ರ ಕಾವ್ಯದಲ್ಲಿ ಇಂಥ ಸಾಧನೋಪಾಯಗಳು ವಿಶೇಷವಾಗಿ

Rarest Archiver

ಪ್ರತಿಪಾದಿತವಾಗಿರುತ್ತವೆ ಎಂಬುದು ತಾತ್ಪರ್ಯ.

ಶ್ರೀಯೋಗೀಂದ್ರತೀರ್ಥರನ್ನು ಶ್ರೇಷ್ಠರಾದ ಗುರುಗಳೆಂದು ಸ್ವೀಕರಿಸಿ ಅವರು ಉಪದೇಶಿಸಿದ ಸಾಧನಮಾರ್ಗವನ್ನು ನಿಷ್ಠೆಯಿಂದ ಪಾಲಿಸಿ, ಮನಸ್ಸಿನ ಬಾಧೆಯನ್ನು ದೂರವಾಗಿಸಿ, ಚಿತ್ತಶುದ್ಧಿಯನ್ನು ಪಡೆಯಬೇಕೆಂಬ ಸಾಧನೋಪಾಯವನ್ನು ಈ ಮೊದಲನೆಯ ಶ್ಲೋಕದಲ್ಲಿ ಪ್ರತಿಪಾದಿಸಲಾಗಿದೆ.

ವಿಗ್ರಹವಾಕ್ಯಗಳು: ವಿನಿದ್ರಂ - ವಿಗತಾ ನಿದ್ರಾ, ಯಥಾ ಸ್ಯಾತ್ ತಥಾ, **ನಿಜವಿಬುಧಗಣಾನ್** - ನಿಜಾಶ್ಚ ತೇ ವಿಬುಧಾಶ್ಚ ನಿಜವಿಬುಧಾಃ ತೇಷಾಂ ಗಣಾನ್, **ನಿಸ್ಸೀಮಭೂಮ್ನಾ** - ನಿರ್ಗತಾ ಸೀಮಾ ಯಸ್ಮಾತ್ ಸಃ ನಿಸ್ಸೀಮಃ, ನಿಸ್ಸೀಮಃ ಭೂಮಾ ಯಸ್ಯ ತತ್ ತೇನ, **ವಿಮತಮಹಿಭೃತಃ** - ವಿರುದ್ಧಾಃ ಮತಾಃ ಏಷಾಂ ತೇ, ಮಹೀಂ ಬಿಭ್ರತಿ ಇತಿ ಮಹಿಭೃತಃ, ವಿಮತಾ ಏವ ಮಹಿಭೃತಃ; **ಉನ್ಮಾರ್ಗಧೃಷ್ಣೂನ್** - ಮಾರ್ಗಾತ್ ಉದ್ಗತಾಃ ಉನ್ಮಾರ್ಗಾಃ, ಉನ್ಮಾರ್ಗಾಶ್ಚ ಅತ ಏವ ಧೃಷ್ಣವಶ್ಚ ಅಥವಾ ಉನ್ಮಾರ್ಗೇಣ ಧೃಷ್ಣವಃ; **ದಾನವಾನಾದರಭರಕೃತ್** - ದಾನವೇಷು ಅನಾದರಭರಂ ಕರೋತಿ ಇತಿ, **ಅನಂತಾಮರಾಣಾಂ** - ಅನಂತಾಶ್ಚತೇ ಅಮರಾಶ್ಚ ತೇಷಾಂ, **ಶ್ರೀಮಾನ್ -ಶ್ರೀಃ ಅಸ್ಯ ಅಸ್ತೀತಿ ಶ್ರೀಮಾನ್, ಯೋಗೀಂದ್ರಧೀಮಾನ್** - ಯೋಗೀಂದ್ರ ಇತಿ ಧೀಮಾನ್, **ಸಾಶ್ವಿನೀತಿಂ** - ಅಶ್ವಿನೋಃ ನೀತ್ಯಾ ಸಹಿತಾ, ತಾಮ್.

ಕೋಶಗಳು: ಭದ್ರಂ - ''ಶ್ವಃ ಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಳಂ ಶುಭಂ'' (ಅಮರ), **ವಿಬುಧ** - ''ವಿಬುಧೋ ಜ್ಞೇ ಸುರೇ'' (ಮೇದಿನೀ), ''ಅಮರಾ ನಿರ್ಜರಾ ದೇವಾಃ ತ್ರಿದಶಾ ವಿಬುಧಾಃ ಸುರಾಃ ।'' (ಅಮರ), **ಧಾಮಃ** -''ಧಾಮ ಶಕ್ತೌ ಪ್ರಭಾವೇ ಚ ತೇಜೋಮಂದಿರಜನ್ಮಸು'' (ವಿಶ್ವ), **ದೀನಃ** -''ನಿಃಸ್ವಸ್ತು ದುರ್ವಿಧೋ ದೀನೋ ದರಿದ್ರೋ ದುರ್ಗತೋಪಿ ಸಃ'' (ಅಮರ).

ವ್ಯಾಕರಣ ವಿಚಾರಗಳು: ಶಾಸ್ ಧಾತುವು ದ್ವಿಕರ್ಮಕವಾಗಿದೆ. ''ಅಕಥಿತಂ ಚ'' (1-4-51) ಎಂಬ ಸೂತ್ರದಲ್ಲಿ ಅಪಾದಾನ, ಇತ್ಯಾದಿ ಕಾರಕ ವಿಶೇಷಗಳ ವಿವಕ್ಷೆ ಇಲ್ಲದೇ ಕೇವಲ ಸಂಬಂಧ ಸಾಮಾನ್ಯದ ವಿವಕ್ಷೆಯಿದ್ದಲ್ಲೆಲ್ಲ ಒಂದು ಪ್ರಧಾನ

Rarest Archiver

ಕರ್ಮ, ಇನ್ನೊಂದು ಅಪ್ರಧಾನ ಕರ್ಮ ಎಂದು ಎರಡು ಕರ್ಮಗಳು ಬರುತ್ತವೆ. ''**ದುಹ್ಯಾಚ್ ಪ್ರಚಂಡರುಧಿ ಪ್ರಚ್ಛಿ ಚಿ ಬ್ರೂ ಶಾಸು ಜಿ, ಮಥ ಮುಷಾಂ। ಕರ್ಮಯುಕ್ ಸ್ಯಾದಕಥಿತಂ ತಥಾ ಸ್ಯಾನ್ನೀಹೃಕೃಷ್ ವಹಾಮ್**'' ಎಂಬ ವಾರ್ತಿಕಾರ್ಥಪರವಾದ ಶ್ಲೋಕದಿಂದ ದುಹ್, ಯಾಚ್------- ಶಾಸ್------'' ಇತ್ಯಾದಿ ಧಾತುಗಳ ಪ್ರಯೋಗದಲ್ಲಿ ಎರಡು ಕರ್ಮಗಳು ಬರುತ್ತವೆಯೆಂದು ಹೇಳಲಾಗಿದೆ. ಉನ್ಮಾರ್ಗ ಧೃಷ್ಣೂನ್ ಜಿಷ್ಣುಃ ಎಂಬಲ್ಲಿ ಜಿಷ್ಣುಃ ಪದದೊಡನೆ ದ್ವಿತೀಯಾ ವಿಭಕ್ತಿಯ ಪ್ರಯೋಗ ಮಾಡಲಾಗಿದೆ. ಯಾರ ಬಗ್ಗೆ ಜಯಶೀಲನಾಗುವದು ಎಂಬಲ್ಲಿ ಷಷ್ಠೀಕಾರಕ ಬರಬೇಕಾಗಿತ್ತು. ಆದರೆ ''**ನ ಲೋಕಾವ್ಯಯನಿಷ್ಠಾಖಲರ್ಥತೃನಾಂ**'' (2-6-69) ಎಂಬ ಸೂತ್ರದ ಪ್ರಕಾರ, ಲಾದೇಶ (ಕುರ್ವನ್), ಉ (ದಿದೃಕ್ಷುಃ ಜಿಷ್ಣುಃ) ಉಕ (ಘಾತುಕ), ಅವ್ಯಯ(ಸೃಷ್ಟ್ವಾ), ನಿಷ್ಠಾ(ಹತವಾನ್),- ಇತ್ಯಾದಿಗಳಲ್ಲಿ ದ್ವಿತೀಯಾಕಾರಕದ ಪ್ರಯೋಗವಾಗುತ್ತದೆ. **ಜಯತಿ** - ಜಿ ಧಾತು (ಭ್ವಾದಿಗಣ ಅನಿಟ್), ಜಯತಿ ಜಯತಃ ಜಯಂತಿ, ಜಯಸಿ ಜಯಥಃ ಜಯಥ, ಜಯಾಮಿ ಜಯಾವಃ ಜಯಾಮಃ. ''ಜಯೇರ್ಜಯಾಭಿಭವಯೋಃ ಆದ್ಯೇರ್ಥೇ ಅಸಾವಕರ್ಮಕಃ। ಉತ್ಕರ್ಷಪ್ರಾಪ್ತಿರಾದ್ಯೋರ್ಥೋ ದ್ವಿತೀಯೇರ್ಥೇ ಸಕರ್ಮಕಃ ॥'' - ಜಿ ಧಾತುವಿಗೆ ಉತ್ಕರ್ಷ ಪ್ರಾಪ್ತಿ ಹಾಗೂ ಸೋಲಿಸುವುದು ಎಂದು ಎರಡು ಅರ್ಥಗಳಿದ್ದು ಮೊದಲನೆಯ ಅರ್ಥವಿದ್ದಲ್ಲಿ ಅಕರ್ಮಕವಾಗಿಯೂ ಎರಡನೆಯ ಅರ್ಥದಲ್ಲಿ ದ್ವಿಕರ್ಮಕವಾಗಿಯೂ ಇರುತ್ತದೆ. ಇಲ್ಲಿ ಮೊದಲನೆಯ ಅರ್ಥವಿದೆ.

ಇಲ್ಲಿ ಶ್ಲೇಷ ಸಹಿತವಾದ ರೂಪಕಾಲಂಕಾರವಿದೆ. ''ವಿಶೇಷ್ಯಸ್ಯಾಪಿ ಸಾಮ್ಯೇ ದ್ವಯೋರ್ವಾಚ್ಯತ್ವೇ ಶ್ಲೇಷಃ'' (ಅಲಂಕಾರರತ್ನಾಕರ). ''ಆರೋಪೋ ರೂಪಕಂ'' (ಅಲಂಕಾರರತ್ನಾಕರ) ಎಂದು ಶ್ಲೇಷ ಹಾಗೂ ರೂಪಕಗಳ ಲಕ್ಷಣಗಳಾಗಿವೆ. ಇಲ್ಲಿ ವಿಶೇಷಣ, ವಿಶೇಷ್ಯಗಳು ಶ್ರೀಯೋಗೀಂದ್ರರಿಗೂ ಹಾಗೂ ಬೃಹಸ್ಪತಿ, ಇಂದ್ರ, ಅಶ್ವಿನೀದೇವತೆಗಳಿಗೂ ಅನ್ವಯಿಸುತ್ತವೆ. 'ಗುರು, ಜಿಷ್ಣು, ಭಿಷಜ್ಯಸ್' ಇವು ಉಭಯಸಮಾನವಾಗಿವೆ. ಇದಲ್ಲದೇ ಇಲ್ಲಿ ಅಶ್ವಿನೀ ಪದಪ್ರಯೋಗದಿಂದ ತಾರಾವಲಿಯಲ್ಲಿಯ ಮೊದಲನೆಯ ನಕ್ಷತ್ರವಾದ ಅಶ್ವಿನೀ ನಕ್ಷತ್ರವು ಸೂಚಿತವಾಗಿರುವುದರಿಂದ ಮುದ್ರಾಲಂಕಾರವೆಂಬ ಅಲಂಕಾರವೂ ಇದೆ.

Rarest Archiver

ವಾಚಾಂ ಗುಂಭೈರದಂಭೈರ್ಜಯತಿ
ಯತಿವರೋಽಕದ್ವದೋ ವಿದ್ವದೋಘಮ್ ।
ಗರ್ಜಂತಂ ತಂತನೀತಿ ದ್ವಿಷಮಪಿ
ಜಿತಧೀಮಚ್ಚಮೂಕಂ ಚ ಮೂಕಮ್ ।।
ಭೀಮಂ ಭೌಮೋದ್ಭವಾದಿಗ್ರಥನಮಿಭರಣೀಯಂತಮನ್ವೇತಿ ಧಿನ್ವನ್ ।
ಶ್ರೀಯೋಗೀಂದ್ರೋ ವಿತಂದ್ರಸ್ಸಮಿತಿಷು ವಿಜಯೋಜ್ಜೃಂಭ
ಭಾಸ್ವಾನ್ ಸತಸ್ಸ್ವಾನ್ ।।2।।

ಅನ್ವಯಾರ್ಥಃ - ವಿತಂದ್ರಃ - ಆಲಸ್ಯರಹಿತರಾದ, **ಯತಿವರಃ** - ಯಮನಿಯಮಾದಿ ಗುಣಗಳಿಂದ ಯುಕ್ತರಾದುದರಿಂದ ಶ್ರೇಷ್ಠ ಯತಿಗಳಾದ, **ಶ್ರೀಯೋಗೀಂದ್ರಃ** - ಯೋಗಧ್ಯಾನಾದಿ ಸಂಪತ್ತುಗಳಿಂದ ವಿರಾಜಮಾನರಾದ ಶ್ರೀಯೋಗೀಂದ್ರತೀರ್ಥರು, **ಅಕದ್ವದಃ - ಕದ್** - ಕುತ್ಸಿತವಾದ, ಹೇಯವಾದ, **ವದಃ** - ಮಾತುಗಳನ್ನಾಡುವವರು, **ಅ** - ಆಗದೇ ಇದ್ದವರಾಗಿ, (ಅ+ಕದ್ವದಃ)- ಅಂದರೆ ಯಾವಾಗಲೂ ಯೋಗ್ಯವಾದ, ಮಾನನೀಯವಾದ ಮಾತುಗಳನ್ನೇ ಆಡುವವರಾಗಿ, **ಅದಂಭೈಃ** - ಡಂಭ, ಮೋಸ ಇತ್ಯಾದಿ ದೋಷಗಳಿಂದ ರಹಿತವಾದ, **ವಾಚಾಂ** - ತಮ್ಮ ಮಾತುಗಳ ಅಂದರ ವಾದದ ವಾಕ್ಯಗಳ, **ಗುಂಭೈಃ** - ಜೋಡಣೆಗಳಿಂದ, ಅಂದರೆ ಸಮೀಚೀನವಾದ ಪದವಾಕ್ಯವಿನ್ಯಾಸಗಳಿಂದ, **ಜಿತಧೀಮಚ್ಚಮೂಕಂ - ಜಿತ್** - ಗೆಲ್ಲಲ್ಪಟ್ಟಂಥ, **ಧೀಮತ್** - ಬುದ್ಧಿಶಾಲಿಗಳಾದ ಪಂಡಿತರುಗಳ, **ಚಮೂಕಂ** - ಸೇನೆ ಅಂದರೆ ಸಮೂಹವುಳ್ಳಂಥ, **ಅಪಿ** - ಅಂಥದಾದರೂ ಕೂಡ, **ವಿದ್ವದೋಘಂ** - ಪಂಡಿತರುಗಳ ಸಮೂಹವನ್ನು, **ಜಯತಿ** - ವಾದದಲ್ಲಿ ಗೆದ್ದು ಜಯಶಾಲಿಗಳಾಗುತ್ತಾರೆ. **ದ್ವಿಷಂ** - ತಮ್ಮ ಸಿದ್ಧಾಂತವನ್ನು ವಿರೋಧಿಸಿ ದ್ವೇಷ ಮಾಡುವವರನ್ನು, **ಗರ್ಜಂತಂ** - ಅವರು ಬೇಕಾದಷ್ಟು ಆರ್ಭಟದಿಂದ ವಾದ ಮಾಡುವವರು, **ಅಪಿ** - ಆದರೂ ಕೂಡ, **ಮೂಕಂ** - ಚೆನ್ನಾಗಿ ಬಾಯಿ ಮುಚ್ಚಿಸಿ ಮೂಕರನ್ನಾಗಿ, **ತಂತನೀತಿ** - ಮಾಡಿಯೇ ಬಿಡುತ್ತಾರೆ. **ಸಮಿತಿಷು** - ಶಾಸ್ತ್ರೀಯವಾದದ ಸಭೆಗಳಲ್ಲಿ, **ವಿಜಯೋಜ್ಜೃಂಭಭಾಸ್ವಾನ್ - ವಿಜಯ** - ವಾದದಲ್ಲಿಯ ಜಯದ, **ಉಜ್ಜೃಂಭ** - ವ್ಯಾಪಕತೆಯಿಂದ, **ಭಾಸ್ವಾನ್** - ವಿಶೇಷವಾಗಿ ಶೋಭಿಸುತ್ತಿರುವವರಾಗಿ, **ಸ್ವಾನ್** - ತಮಗೆ ಆತ್ಮೀಯರಾಗಿ ತಮ್ಮ ಮತಾನುಯಾಯಿಗಳಾದ, **ಸತಃ** - ಸಜ್ಜನರುಗಳನ್ನು, **ಧಿನ್ವನ್**- ತಮ್ಮ

Rarest Archiver

ಉಪದೇಶ ಪ್ರಸಾದವಚನ ಹಾಗೂ ಅನುಗ್ರಹಗಳಿಂದ ಸಂತೋಷಪಡಿಸುತ್ತ, **ಭೌಮೋದ್ಭವಾದಿಗ್ರಥನಂ -ಭೌಮ** - ನರಕಾಸುರನಿಂದ, **ಉದ್ಭವ** - ಹುಟ್ಟಿದ, ಅಂದರೆ ನರಕಾಸುರನ ಮಕ್ಕಳಾದ ಭಗದತ್ತ, **ಆದಿ** - ಇತ್ಯಾದಿ ಅಸುರರನ್ನು, **ಗ್ರಥನಂ** - ಮರ್ದಿಸಿ ಸಂಹಾರಮಾಡುವವನಾದ, **ಇಭರಣೇಯಂತಂ** - **ಇಭ** - ಆನೆಗಳ ಸೈನ್ಯಗಳೊಡನೆ, **ರಣೇಯಂತಂ** - ಕಾದಾಡಿ ಸೆಣಸಬೇಕೆಂಬ ಕ್ಷಾತ್ರಾಕಾಂಕ್ಷೆಯುಳ್ಳ, **ಭೀಮಂ** - ಭೀಮಸೇನನನ್ನು, **ಅನ್ವೇತಿ** - ಅನುಸರಿಸುತ್ತಾರೆ. ಭೀಮಸೇನನೂ ಕೂಡ, **ಸಮಿತಿಷು** - ಯುದ್ಧಗಳಲ್ಲಿ, **ವಿಜಯೋಜ್ಜೃಂಭಭಾಸ್ವಾನ್** - **ವಿಜಯ** - ಅರ್ಜುನನ, **ಉಜ್ಜೃಂಭ** - ವಿಜಯದ ವ್ಯಾಪಕತೆಯಿಂದ, **ಭಾಸ್ವಾನ್** - ಒಳ್ಳೇ ಹೆಮ್ಮೆಯ ವರ್ಚಸ್ಸಿನಿಂದ ಮೆರೆಯುವವನಾಗಿ, **ಸ್ವಾನ್** - ತನ್ನ ಅನುಯಾಯಿಗಳಾದ, **ಸತಃ**- ಸಜ್ಜನರನ್ನು, **ಧಿನ್ವನ್** - ತನ್ನ ದುಷ್ಟನಿಗ್ರಹ ಹಾಗೂ ಶಿಷ್ಟ ಪರಿಪಾಲನೆಯ ಕಾರ್ಯಗಳಿಂದ ಸಂತೋಷಪಡಿಸುವವನಾಗಿದ್ದಾನೆ. ಇದರಂತೆಯೇ ಶ್ರೀಯೋಗೀಂದ್ರರು ಪ್ರತಿವಾದಿಗಳನ್ನು ಜಯಿಸಿ ತಮ್ಮವರಿಗೆ ಸದುಪದೇಶ ಮಾಡಿ ಸಂತೋಷಪಡಿಸುತ್ತಾರೆ.

ತಾತ್ಪರ್ಯಾರ್ಥ : ಈ ಶ್ಲೋಕದಲ್ಲಿ ಶ್ರೀಯೋಗೀಂದ್ರತೀರ್ಥರ ಅಮೋಘವಾದ ವಾದವೈಖರಿಯ ಹಾಗೂ ವಾದಿದಿಗ್ವಿಜಯದ ವರ್ಣನೆಯಿದೆ. ಶ್ರೀಯೋಗೀಂದ್ರತೀರ್ಥರು ತಮ್ಮ ಪ್ರತಿವಾದಿಗಳನ್ನು ಪ್ರೌಢವಾದ, ಶಾಸ್ತ್ರೀಯವಾದ ಹಾಗೂ ತರ್ಕಬದ್ಧವಾದ ವಾಕ್ಯಗಳಿಂದಲೇ ಸೋಲಿಸುತ್ತಿದ್ದರು. ವಾದಪ್ರಸಂಗಗಳಲ್ಲಿ ಅವಾಚ್ಯವೂ ನಿಂದನೀಯವೂ ಆದ ಪದಗಳನ್ನು ಸರ್ವಥಾ ಪ್ರಯೋಗಿಸುತ್ತಿರಲಿಲ್ಲ. ಅನೇಕ ಪರಮತೀಯ ಪಂಡಿತರುಗಳನ್ನು ವಾದದಲ್ಲಿ ಸೋಲಿಸಿ ಜಯಪತ್ರಗಳನ್ನು ಪಡೆದಿರುವ ಸ್ವಮತಾನುಯಾಯಿಗಳಾದ ವಿದ್ವಾಂಸರುಗಳಿಗೆ ಗುರುಗಳಾಗಿದ್ದುದರಿಂದ ಅವರುಗಳಿಗಿಂತ ಉತ್ತಮರಾಗಿದ್ದರು. ಪರಮತೀಯರಾದ ಅನೇಕ ದಿಗ್ದಂತಿ ಪಂಡಿತರುಗಳನ್ನು ಅವರ ಶುಷ್ಕವಾದ ಆರ್ಭಟಕ್ಕೆ ಬೆರಗಾಗದೇ ತಮ್ಮ ಪಾಂಡಿತ್ಯದ ಚಾತುರ್ಯದಿಂದ ಬಾಯಿಮುಚ್ಚಿಸಿ ಅವರಿಂದ ಜಯಪತ್ರವನ್ನು ಗಳಿಸುತ್ತಿದ್ದರು. ಇಲ್ಲಿ ಶ್ರೀಯೋಗೀಂದ್ರತೀರ್ಥರಿಗೆ ಭೀಮಸೇನನೊಡನೆ ಸಾಮ್ಯವನ್ನು ಹೇಳಲಾಗಿದೆ. ಭೀಮಸೇನನು ಯುದ್ಧಗಳಲ್ಲಿ ಆನೆಗಳ ಸೈನ್ಯಗಳೊಡನೆ ಸೆಣಸಾಡಿ ಅನೇಕ ಶತ್ರುಗಳನ್ನು ಸಂಹಾರ ಮಾಡಿದ್ದಾನೆ. ಭೀಮಸೇನನ ಮೂಲ ರೂಪವಾದ ವಾಯು

Rarest Archiver

ದೇವರ ಅವತಾರರಾದ ಶ್ರೀಮಧ್ವಾಚಾರ್ಯರ ಅನುಗ್ರಹಕ್ಕೆ ಪಾತ್ರರಾದ ಶ್ರೀಯೋಗೀಂದ್ರತೀರ್ಥರಲ್ಲಿ ಭೀಮಸೇನನ ಶತ್ರುನಿಗ್ರಹದ ವಿಶೇಷಶಕ್ತಿಯು ಪ್ರಾಪ್ತವಾಗಿರುವುದು ಆಶ್ಚರ್ಯವೇನಲ್ಲ.

ಈ ಶ್ಲೋಕದಲ್ಲಿ ನಕ್ಷತ್ರಗಳಲ್ಲಿ ಎರಡನೆಯ ನಕ್ಷತ್ರವಾದ ಭರಣೀ ನಕ್ಷತ್ರದ ಉಲ್ಲೇಖವಿದೆ. ಈ ಹಿಂದೆ ಹೇಳಿದಂತೆ ತಾರಾವಲೀ ಎಂಬಲ್ಲಿಯ 'ತಾರಾ' ಶಬ್ದಕ್ಕೆ ಶ್ಲೇಷದಿಂದ, **'ಸಂಸಾರಸಾಗರದಿಂದ ತಾರಣ ಮಾಡುವ ಉಪಾಗಳು'** ಎಂದು ಅರ್ಥವಾಗುತ್ತದೆ. ಇಂಥ ಅನೇಕ ಉಪಾಯಗಳು ಈ ಸತೇತ್ರದಲ್ಲಿ ನಿರೂಪಿಸಲ್ಪಟ್ಟಿವೆ. ಪ್ರಕೃತ ಶ್ಲೋಕದಲ್ಲಿ ಕೆಳಗಿನ ಉಪಾಯಗಳು ಸೂಚಿತವಾಗಿವೆ. 1) ಸಾಧಕನು ಮೋಸ, ಕಪಟತನದ ಪ್ರವೃತ್ತಿಗಳಿಂದ ದೂರನಾಗಿದ್ದು ಕುತ್ಸಿತವಾದ ವಚನಗಳನ್ನು ಬಿಟ್ಟು ದೈಹಿಕ, ಮಾನಸಿಕ, ಹಾಗೂ ವಾಙ್ಮಯ ತಪಸ್ಸನ್ನು ಆಚರಿಸಬೇಕು. 2) ದುಷ್ಟರನ್ನು ಹಾಗೂ ದುಷ್ಟ ವಿಚಾರಗಳನ್ನು ಅವುಗಳು ಎಷ್ಟೇ ಆಕರ್ಷಕವಾಗಿ ಕಂಡರೂ, ಸದೆಬಡೆದು, ಆ ವಿಚಾರಗಳ ಪ್ರಭಾವವು ಕಡಿಮೆಯಾಗುವಂತೆ ಮಾಡಿಕೊಂಡು, ಸಾತ್ವಿಕ ಗುಣಗಳನ್ನು ಬೆಳೆಸುವುದು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಷಡ್ರಿಪುಗಳಿಗೆ ಕಾರಣೀಭೂತವಾದ ರಜೋಗುಣ, ತಮೋಗುಣಗಳನ್ನು ಹಾಗೂ ಅವುಗಳಿಂದಾಗುವ ಪ್ರವೃತ್ತಿಯನ್ನೂ ನಾಶಮಾಡಿ ಸತ್ವಗುಣವನ್ನು ಬೆಳೆಸಿಕೊಳ್ಳಬೇಕೆಂದು ಶ್ರೀಭಗವದ್ಗೀತೆಯಲ್ಲಿ ಉಪದೇಶಿಸಲ್ಪಟ್ಟಿದೆ. 3) ಆಲಸ್ಯ, ಚಾಂಚಲ್ಯ, ಅನಾಸ್ಥೆ, ಇತ್ಯಾದಿ ಮನೋದೋಷಗಳನ್ನು ಪ್ರಯತ್ನಪೂರ್ವಕವಾಗಿ ನಿವಾರಿಸಿಕೊಂಡು ಸತ್ಸಿದ್ಧಾಂತ, ವೇದಾಂತ ನಿಷ್ಕರ್ಷೆ, ಗುರೂಪದೇಶ ಇವುಗಳಲ್ಲಿ ಅಚಲವಾದ ಶ್ರದ್ಧೆಗಳನ್ನು ಬೆಳೆಸಿಕೊಳ್ಳಬೇಕು. ಈ ಪ್ರಕಾರವಾದ-ಉಪಾಯಗಳು ಈ ಶ್ಲೋಕದಲ್ಲಿ ಸೂಚಿತವಾಗಿವೆ.

ವಿಗ್ರಹವಾಕ್ಯಗಳು- ಅಕದ್ವದಃ - ಕದ್ ವದತೀತಿ ಕದ್‌ವದಃ, ನ ಕದ್ವದಃ ಅಕದ್ವದಃ. **ವಿದ್ವದೋಘಂ** - ವಿದುಷಾಂ ಓಘಂ, **ಜಿತಧೀಮಚ್ಚಮೂಕಂ** - ಧೀಮತಾಂ ಚಮೂಃ ಧೀಮಚ್ಚಮೂಃ, ಜಿತಾ ಧೀಮಚ್ಚಮೂಃ ಏನ ಸ್ಸಃ, ಸ ಏವ ಜಿತಧೀಮಚ್ಚಮೂಕಃ, **ಭೌಮೋದ್ಭವಾದಿಗ್ರಥನಮ್** - ಭೌಮಾತ್ ಉದ್ಭವಃ ಯಸ್ಯ ಸಃ ಭೌಮೋದ್ಭವಃ, ಸ ಏವ ಆದಿಃ ಏಷಾಂ ತೇ ಭೌಮೋದ್ಭವಾದಯಃ, ತೇಷಾಂ ಗ್ರಥನಂ ಏನ ಸಃ ತಮ್ (ಭೀಮಂ ಇದಕ್ಕೆ ವಿಶೇಷಣವಾಗಿದೆ). **ವಿತಂದ್ರಃ** - ವಿಗತಾ

Rarest Archiver

ತಂದ್ರಾ ಯಸ್ಮಾತ್ ಸಃ, **ವಿಜಯೋಜ್ಜೃಂಭಭಾಸ್ವಾನ್** - ವಿಜಯಸ್ಯ ಉಜ್ಜೃಂಭಃ, ತೇನ ಭಾಸ್ವಾನ್.

ಕೋಶಗಳು- ಗುಂಭ ಶಬ್ದವು ಹಾಗೂ ಗುಂಫ ಶಬ್ದವು ಏಕಾರ್ಥಕವಾಗಿವೆ. ಕೋಶದಲ್ಲಿ ''ಗುಂಫಃ ಸ್ಯಾತ್ ಗುಂಫನೇ ಬಾಹೋರಲಂಕಾರೇ ಚ ಕೀರ್ತಿತಃ'' (ಅಮರ). ''ವಾಕ್ಯೇ ಶಬ್ದಾರ್ಥಯೋಃ ಸಮ್ಯಗ್ರಚನಾ ಗುಂಫನಾ ಮತಾ'' ಎಂಬ ಉಕ್ತಿಯು ಇದೆ. ಗುಂಫನಾ ಎಂದರೆ ವಾಕ್ಯದಲ್ಲಿ ಸರಿಯಾದ ಪ್ರೌಢವಾದ ರೀತಿಯಲ್ಲಿ ಅರ್ಥವಾಗುವಂತೆ ಶಬ್ದಗಳನ್ನು ಜೋಡಿಸುವುದು ಎಂದರ್ಥ. ದಂಭಃ- ''ಕಪಟೋಸ್ತ್ರೀ ವ್ಯಾಜದಂಭೋಪಧಯಶ್ಛದ್ಮ ಕೈತವೇ ಚ'' (ವೈಜಯಂತೀ). ಓಘಂ - ''ಸಮೂಹನಿವಹವ್ಯೂಹ ಸಂದೋಹ ವಿಸರವ್ರಜಾಃ । ಸ್ತೋಮೌಘನಿಕರ ವ್ರಾತವಾರಸಂಘಾದಸಂಚಯಾಃ'' (ಅಮರ). ಚಮೂಃ - ''ಚಮೂಃ ಸೇನಾವಿಶೇಷೇ ಚ ಸೇನಾಮಾತ್ರೇ ಚ ಯೋಷಿತಿ'' (ಮೇದಿನೀ). ಚಮತಿ ಶತ್ರೂನ್ ಇತಿ, ''ಕೃಷಿಚಮಿತ ನಿ'' (ಉಣಾದಿ 1/80) ಇತ್ಯೂಃ, ಇಭಃ - ''ದಂತೀ ದಂತಾವಲೋ ಹಸ್ತೀ ದ್ವಿರದೋನೇಕಪೋದ್ವಿಪಃ । ಮತಂಗಜೋ ಗಜೋ ನಾಗಃ ಕುಂಜರೋ ವಾರಣೋ ಕರೀ ॥ ಇಭಃ ಸ್ತಂಭೇರಮಃ ಪದ್ಮೀ''(ಅಮರ). ತಂದ್ರಃ - ''ತಂದ್ರೀ ತಂದ್ರೇತ್ಯುಭೌ ಶಬ್ದೌ ಸ್ಯಾತಾಂ ನಿದ್ರಾಪ್ರಮೀಲಯೋಃ'' (ನಾನಾರ್ಥರತ್ನಮಾಲಾ -880). ''ಅಥ ಸಂಗರೇ । ಸಂಗೇ ಸಭಾಯಾಂ ಸಮಿತಿಃ'' (ಅಮರ). ''ಸಮಿತಿಃ ಸಾಂಪರಾಯೇ ಸ್ಯಾತ್ ಸಭಾಯಾಂ ಸಂಗಮೇಪಿ ಚ'' (ಮೇದಿನೀ).

ವ್ಯಾಕರಣ ವಿಚಾರಗಳು: ತಂತನೀತಿಃ ತನು ವಿಸ್ತಾರೇ, 8ನೇಯ ಗಣ ಉಭಯಪದೀ. ಈ ಧಾತುವಿನಿಂದ ಪುನಃ ಪುನಃ ಮತ್ತು ಅತಿಶಯವಾಗಿ ವಿಸ್ತಾರ ಮಾಡುವುದು ಎಂಬ ಅರ್ಥಧಲ್ಲಿ ತಂತನೀತಿ ಎಂಬ ರೂಪವಾಗುತ್ತದೆ. ''ಧಾತೋರೇಕಾಚೋ ಹಲಾದೇಃ ಕ್ರಿಯಾಸಮಭಿಹಾರೇ ಯಙ'' (3/1/22) ಪೌನಃಪುನ್ಯೇ ಭೃಶಾರ್ಥೇ ಚ ದ್ಯೋತ್ಯೇ ಧಾತೋರೇಕಾಚೋ ಹಲಾದೇರ್ಯಙ ಸ್ಯಾತ್. ಮತ್ತೆ ಮತ್ತೆ ಆಗುವುದು, ಅಥವಾ ಅತಿಶಯವಾಗಿ ವಿಶೇಷವಾಗಿ ಆಗುವುದು ಈ ಅರ್ಥದಲ್ಲಿ ಒಂದೇ ಸ್ವರವುಳ್ಳ ಹಾಗೂ ವ್ಯಂಜನದಿಂದ ಪ್ರಾರಂಭವಾಗುವ ಧಾತುವಿನ ಎದುರು ''ಯಙ'' ಎಂಬ ಪ್ರತ್ಯಯವು ಬರುತ್ತದೆ. ''ಸನ್ ಙೋಃ''(6/1/9) ಎಂಬ ಸೂತ್ರದ ಪ್ರಕಾರ ಸನ್ನಂತ, ಯಙಂತವಾದ ರೂಪಗಳಿದ್ದಾಗ ಒಂದೇ ಸ್ವರವುಳ್ಳ

Rarest Archiver

ಧಾತುವಿನ ಮೊದಲನೆಯ ಅಕ್ಷರವು ಎರಡು ಸ್ವರಗಳುಳ್ಳ ಧಾತುವಿನ ಎರಡನೇಯ ಸ್ವರದ ಅಕ್ಷರವು ಎರಡು ಸಲ ಪಠಿತವಾಗುತ್ತದೆ. ತನ್+ ಯಙ ಎಂದು ಪ್ರಾಪ್ತವಾದಾಗ ''ತ'' ಅಕ್ಷರಕ್ಕೆ ದ್ವಿತ್ವವಾಗುತ್ತದೆ. ''ಯಙಚಿತ್'' (2/4/24) ಎಂಬ ಸೂತ್ರದಿಂದ ಯಙ ಪ್ರತ್ಯಯದ ಲೋಪವೂ ನಂತರ ''ಯ ಙೋ ವಾ'' (7/3/94) ಎಂಬ ಸೂತ್ರದಿಂದ ಈಙ ಪ್ರತ್ಯಯವೂ ಉಂಟಾಗುತ್ತವೆ. ಇದರಿಂದ ತಂತನೀತಿ ಎಂಬ ರೂಪವು ಪ್ರಾಪ್ತವಾಗುತ್ತದೆ. ಈಙ ಪ್ರತ್ಯಯವು ವಿಕಲ್ಪದಿಂದ ಹತ್ತುವುದರಿಂದ, ಅದಿಲ್ಲದಿದ್ದ ಪಕ್ಷದಲ್ಲಿ, ''ತಂತನ್ಯತೇ'' ಎಂಬ ರೂಪವೂ, ''ತಂತಂತಿ'' ಎಂಬ ರೂಪವೂ ಪ್ರಾಪ್ತವಾಗುತ್ತವೆ. ಇಭರಣೇಯಂತಂ - ಇಭರಣಂ - ಗಜಯುದ್ಧಂ ಆತ್ಮನಃ ಇಚ್ಛನ್ ಇಭರಣೇಯನ್ ತಂ, ''ಸುಪಆತ್ಮನಃ ಕ್ಯಚ್'' (2/1/8) ಇಷಿಕರ್ಮಣಃ ಏಷಿತುಃ ಸಂಬಂಧಿನಃ ಸುಬಂತಾದ್ ಇಚ್ಛಾಯಾಮರ್ಥೇ ಕ್ಯಚ್ ಪ್ರತ್ಯಯೋ ವಾ ಸ್ಯಾತ್ - ಇಚ್ಛೆ ಮಾಡುವುದು ಎಂಬ ಧಾತುವಿಗೆ ಕರ್ಮವಾಗಿರುವ ಸುಬಂತಕ್ಕೆ ಅಂದರೆ ನಾಮಾತ್ಮಕ ಶಬ್ದಕ್ಕೆ, ಅಥವಾ ಇಚ್ಛೆ ಮಾಡುವವನ ಇಚ್ಛಾಸಂಬಂಧಿಯಾದ ವಸ್ತುವನ್ನು ನಿರ್ದೇಶಿಸುವ ಶಬ್ದಕ್ಕೆ ವಿಕಲ್ಪದಿಂದ ಕ್ಯಚ ಪ್ರತ್ಯಯವೂ ಹತ್ತುತ್ತದೆ. ''ಸುಪೋ ಧಾತುಃ ಪ್ರಾತಿಪದಿಕಯೋಃ'' (3/4/71) ಎಂಬ ಸೂತ್ರದಿಂದ ಸುಪ್ ಪ್ರತ್ಯಯದ ಲೋಪವಾಗಿ ''ಕ್ಯಚಿ ಚ'' (7/4/33) ಅವರ್ಣಸ್ಯ ಈಃ, ಎಂಬ ಸೂತ್ರದಿಂದ ಶಬ್ದದ ಕೊನೆಗಿರುವ ಅವರ್ಣಕ್ಕೆ ಈಕಾರದ ಆದೇಶವಾಗುತ್ತದೆ. ಆತ್ಮನಃ ಪುತ್ರಂ ಇಚ್ಛತಿ - ತನ್ನ ಪುತ್ರನನ್ನು ಇಚ್ಛಿಸುತ್ತಾನೆ ಎಂಬ ಅರ್ಥದಲ್ಲಿ ಪುತ್ರೀಯತಿ ಎಂಬ ರೂಪ ಉಂಟಾಗುತ್ತದೆ. ಪುತ್ರ + ಅಮ್ + ಯ ಎಂದು ನಿಷ್ಪನ್ನವಾದಾಗ ಅಮ್ ಲೋಪವಾಗಿ ಪುತ್ರ + ಯ ಎಂದಾಗುತ್ತದೆ. ಪುತ್ರದಲ್ಲಿ ಅಕಾರಕ್ಕೆ ಈಕಾರದೇಶವಾಗಿ ಪುತ್ರೀಯ ಎಂಬ ಧಾತು ಪ್ರಾಪ್ತವಾಗುತ್ತದೆ. ಇದರಂತೆಯೇ ಇಭರಣ + ಅಮ್ + ಯ ಎಂದು ಇದ್ದಾಗ, ಅಮ್ ಎಂಬ ಸುಪ್ ಪ್ರತ್ಯಯದ ಲೋಪವಾಗಿ ಇಭರಣದಲ್ಲಿಯ ಅಕಾರಕ್ಕೆ ಈಕಾರಾದೇಶವಾಗಿ ಇಭರಣೀಯ ಎಂಬ ಧಾತುವು ಪ್ರಾಪ್ತವಾಗುತ್ತದೆ. ಈ ಧಾತುವಿನ ಶತೃಂತದ ರೂಪವು ಇಭರಣೀಯನ್ ಎಂದು ಉಂಟಾಗುತ್ತದೆ. ಅನ್ವೇತಿ - ಅನು+ಏತಿ, ಇಣ್‌ಗತೌ ಅದಾದಿಗಣ ಪರಸ್ಮೈಪದ, ಏತಿ, ಹೋಗುತ್ತಾನೆ, ಅನು ಉಪಸರ್ಗದಿಂದ ಅನುಸರಿಸಿ ಹೋಗುತ್ತಾನೆ ಅಂದರೆ ಅನುಸರಿಸುತ್ತಾನೆ ಎಂಬ ಅರ್ಥವು ಬರುತ್ತದೆ. ಅನ್ವೇತಿ ಅನ್ವಿತಃ ಅನುಯಂತಿ, ಅನ್ವೇಷಾ ಅನ್ವಿಥಃ ಅನ್ವಿಥ, ಅನ್ವೇಮಿ ಅನ್ವಿವಃ ಅನ್ವಿಮಃ.

Rarest Archiver

ಇಲ್ಲಿ ಭರಣೀ ಶಬ್ದವಿರುವುದರಿಂದ 'ಭರಣೀ' ನಕ್ಷತ್ರದ ಉಲ್ಲೇಖ ಮಾಡಿದಂತಾಯಿತು. ಇಲ್ಲಿ ಮುದ್ರಾಲಂಕಾರವೆಂಬ ಅಲಂಕಾರವಿದೆ. ''ಮುದ್ರಾ ಪದ್ಯೈಃ ಪ್ರಸ್ತುತಾರ್ಥೈಃ ಸೂಚ್ಯಾರ್ಥೋ ಯದಿ ಸೂಚ್ಯತೇ । ವದಾನ್ಯೋ ವಿಪುಲಾರ್ಥಾನಾಂ ನಾನ್ಯೋಽಸ್ತಿ ವಿಜಯೀಂದ್ರತಃ'' ಎಂದು ಅಲಂಕಾರಮಂಜರಿಯಲ್ಲಿ ಶ್ರೀಸುಧೀಂದ್ರತೀರ್ಥರು ಮುದ್ರಾಲಂಕಾರದ ಲಕ್ಷಣವನ್ನು ಹೇಳುತ್ತಾರೆ. ಇಲ್ಲಿ ಭೀಮಂ ಅನ್ವೇತಿ ಎಂದು ಭೀಮನೊಡನೆ ಸಾದೃಶ್ಯ ಹೇಳಿರುವುದರಿಂದ ಉಪಮಾಲಂಕಾರವೂ ಇದೆ. ಒಂದು ಅಥವಾ ಎರಡು ಅಕ್ಷರಗಳು ಪುನಃ ಪುನಃ ಪಠಿತವಾಗಿವೆ. ಉದಾ. -- ಗುಂಭೈಃ, ಅದಂಭೈಃ, ಜಯತಿ, ಯತಿವರೋ, ಭೀಮಂ, ಭೌಮೋ ---'' ಇತ್ಯಾದಿ. ಇದರಿಂದ ಇಲ್ಲಿ ಅನುಪ್ರಾಸವೆಂಬ ಶಬ್ದಾಲಂಕಾರವಿದೆ. ಇದರ ಲಕ್ಷಣವನ್ನು ಶ್ರೀಸುಧೀಂದ್ರತೀರ್ಥರು ಹೀಗೆ ಹೇಳಿದ್ದಾರೆ. ''ಏಕದ್ವಿತ್ರ್ಯಾದಿವರ್ಣಾನಾಂ ಸಾಮ್ಯೇ ಅನುಪ್ರಾಸ ಇಷ್ಯತೇ । ವೃತ್ತ್ಯನುಪ್ರಾಸ ಏಕಸ್ಯಾಪ್ಯಾವೃತ್ತಿರಸಕೃದ್ಯದಾ । ವಿಜಯೀಂದ್ರೋ ವಿಲೋಲಾಕ್ಷೀ ವೀಕ್ಷಣಾಕ್ಷತ ಹೃತ್ಕ್ಷಿತೌ'' (ಅಲಂಕಾರಮಂಜರೀ) ।

ಕ್ಲೃಪ್ತಾಮಾಮ್ನಾನಭೂಮ್ನಾ ಕೃತಮಿತಪದಸಂದರ್ಭಣಾಂ
ದುರ್ಭಣಾಂ ಗಾಮ್ ।
ಪ್ರತ್ಯರ್ಥಿಪ್ರಾಜ್ಞಸಾರ್ಥೈಃ ಪ್ರಸಭಮಧಿಸಭಂ
ಕಥ್ಯಮಾನಾಮತಥ್ಯಮ್ ।।
ವ್ಯಾಘ್ರೀಂ ಜೇಘ್ರೀಯಮಾಣಾ ಭುವಮಿವ ತವ
ನಿಷ್ಕೃತ್ತಿಕಾಮಂ ಚಿಕಿತ್ಸುಃ ।
ಸ್ವಂತರ್ವಾಣೀ ಚ ವಾಣೀ ಶಕಲಯತಿ ಸತಾಂ
ಚಂದ್ರಯೋಗೀಂದ್ರಯೋಗಿನ್ ।। 3।।

ಅನ್ವಯಾರ್ಥಃ - **ಭೋ ಸತಾಂ** - ಸಜ್ಜನರುಗಳಿಗೆ, **ಚಂದ್ರ** - ಚಂದ್ರನಂತೆ ಆಹ್ಲಾದಕರರಾಗಿರುವ, **ಯೋಗೀಂದ್ರಯೋಗಿನ್** - ಯೋಗೀಂದ್ರರೆಂಬ ಯೋಗಿಗಳೇ, **ತವ** - ನಿಮ್ಮ, **ವಾಣೀ** - ವಾದಗಳಲ್ಲಿ ಪ್ರಯುಕ್ತವಾಗುವ ಮಾತು, **ಚ** - ಮತ್ತು, **ಸ್ವಂತರ್ವಾಣೀ** - **ಸು** - ಶೋಭನಕರವಾದ, **ಅಂತಃ** - ಆಂತರಿಕವಾದ, **ವಾಣೀ** - ಧ್ವನಿಯು ಅಂದರೆ ತಾತ್ತ್ವಿಕವಾದ ಅಭಿಪ್ರಾಯವು, **ಆಮ್ನಾನಭೂಮ್ನಾ**

Rarest Archiver

- **ಆಮ್ನಾನ್** - ಅಭ್ಯಾಸದ, **ಭೂಮ್ನಾ** - ಪ್ರಾಚುರ್ಯದಿಂದ, ಅಭ್ಯಾಸದ ಬಲದಿಂದ, **ಕ್ಲೃಪ್ತಾಂ** - ಪ್ರಯೋಗಿಸಲ್ಪಟ್ಟಿರುವ, **ಕೃತಮಿತಪದಸಂದರ್ಭಾಣಾಂ** - ಕೃತ - ರಚಿಸಲ್ಪಟ್ಟಿರುವ, **ಮಿತ** - ಸ್ವಲ್ಪವೇ ಆದ, **ಪದ** - ಶಬ್ದಗಳ, **ಸಂದರ್ಭಾಣಾಂ** - ಜೋಡಣೆಯುಳ್ಳ, **ದುರ್ಭಾಣಾಂ** - ಬೇರೆಯವರಿಂದ ಹೇಳಲ್ಪಡಲು ಅಯೋಗ್ಯ ವಾದ, **ಪ್ರತ್ಯರ್ಥಿಪ್ರಾಜ್ಞಸಾರ್ಥೈಃ** - **ಪ್ರತ್ಯರ್ಥಿ** - ಪ್ರತಿವಾದಿಗಳಾದ, **ಪ್ರಾಜ್ಞ** - ವಿದ್ವಾಂಸರುಗಳ, **ಸಾರ್ಥೈಃ** - ಸಮೂಹಗಳಿಂದ, **ಅಧಿಸಭಂ** - ಪ್ರತಿಯೊಂದು ಸಭೆಯಲ್ಲಿಯೂ, **ಪ್ರಸಭಂ** - ಬಲಾತ್ಕಾರದಿಂದ, **ಅತಥ್ಯಂ** - ಅಸತ್ಯವಾದ ರೀತಿ ಯಲ್ಲಿ, **ಕಥ್ಯಮಾನಾಂ** - ಹೇಳಲ್ಪಡುತ್ತಿರುವ, **ಗಾಂ** - ಮಾತನ್ನು, **ಕಾಮಂ** - ಚೆನ್ನಾಗಿ, **ನಿಷ್ಕೃತ್ತಿ** - - (ಆಕಳ ಮೈ) ಮೇಲಿನ ಚರ್ಮವು ಸುಲಿದು ಹೋಗುವಂತೆ, **ಚಿಕಿತ್ಸುಃ** - ಮಾಡುವ ಇಚ್ಛೆಯುಳ್ಳಂಥ, **ಭುವಂ** - ಭೂಮಿಯನ್ನು, **ಜೇಘ್ರೀಯಮಾಣಾ** - ಮೇಲಿಂದ ಮೇಲೆ ಮೂಸಿ ನೋಡುತ್ತಿರುವ, **ವ್ಯಾಘ್ರೀ** - ಹೆಣ್ಣು ಹುಲಿಯು, **ಗಾಂ** - ಆಕಳನ್ನು ಮಾಡುವಂತೆ, **ಶಕಲಯತಿ** - ಹೊಡೆದು ತುಂಡು ತುಂಡು ಮಾಡಿಬಿಡು ತ್ತದೆ.

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರು ಸಿದ್ಧಾಂತದ ವಾದಗಳಲ್ಲಿ ಪ್ರತಿವಾದಿಗಳನ್ನು ರಭಸದಿಂದ ಸೋಲಿಸಿಬಿಡುತ್ತಿದ್ದರು. ಅವರ ಮಾತುಗಳು, ಹಸಿವೆ ಯಿಂದ ಹಾಗೂ ಕ್ರೋಧದಿಂದ ರೊಚ್ಚಿಗೆದ್ದ ಹೆಣ್ಣುಹುಲಿಯಂತೆ ಆಕ್ರಾಮಕಾರಿ ಯಾಗಿ ಶಕ್ತಿಶಾಲಿಯಾಗಿ ಇರುತ್ತಿದ್ದವು. ಪ್ರತಿವಾದಿಗಳು ತಮ್ಮ ಪ್ರಮೇಯದಲ್ಲಿ ಹುರುಳಿಲ್ಲದ್ದರಿಂದ, ಅದನ್ನು ಮುಚ್ಚಿಕೊಳ್ಳಲು, ಅವಾಚ್ಯವಾದ ಶಬ್ದಗಳನ್ನು ಪ್ರಯೋಗಿಸಿ ಸುಮ್ಮನೆ ಗದ್ದಲ ಮಾಡುವ ಪರಿಪಾಠದಲ್ಲಿ ಇದ್ದರು. ಪ್ರತಿವಾದಿಗಳ ವಾದದ ಮೇಲಿನ ಆವರಣವನ್ನು ಕಿತ್ತೊಗೆದು ಒಳಗಿನ ನಿಸ್ಸಾರತೆಯನ್ನು ಸಜ್ಜನರಿಗೆ ತೋರಿಸಿಕೊಟ್ಟು ನಿಜವಾದ ಸಿದ್ಧಾಂತವನ್ನು ಬೋಧಿಸುವುದು, ಇದರಿಂದ ಸಜ್ಜನ ರಿಗೆ ಇಹದಲ್ಲಿಯೂ ಪರದಲ್ಲಿಯೂ ಆಹ್ಲಾದವನ್ನು ಉಂಟು ಮಾಡುವುದು ಶ್ರೀಯೋಗೀಂದ್ರತೀರ್ಥರ ಸ್ವಭಾವವಾಗಿದ್ದಿತು, ಶ್ರೀಯೋಗೀಂದ್ರತೀರ್ಥರ ಮುಖದಿಂದ ಹೊರಹೊಮ್ಮುವ ವಾಣಿಯು ಹಾಗೂ ಅವರ ಆಂತರಿಕವಾದ ಇಂಗಿ ತದ ಧ್ವನಿಯೂ ಒಂದೇ ರೀತಿಯ ಅರ್ಥವನ್ನು ಪ್ರಕಟಿಸುತ್ತಿದ್ದವು. ಇದರಿಂದಲೇ ಅವರ ಬಾಹ್ಯವಾಣಿಗೆ ಒಂದು ವಿಶೇಷವಾದ ಶಕ್ತಿಯು ಪ್ರಾಪ್ತವಾಗಿತ್ತು. ಪ್ರತ್ಯುತ

Rarest Archiver

ಪ್ರತಿವಾದಿಗಳ ಬಾಹ್ಯವಾಣಿಯು ಅಸಹ್ಯವಾಗಿದ್ದುದಲ್ಲದೇ ಆಂತರದಲ್ಲಿ ತಥ್ಯವಿಲ್ಲದ್ದಾಗಿದ್ದಿತು. ಆದ್ದರಿಂದಲೇ ಮೇಲಿನ ಆಡಂಬರದ ಕವಚವನ್ನು ಕಿತ್ತೊಗೆಯಲಾಗಿ ಆಂತರಿಕವಾದ ಅವರ ಪ್ರಮೇಯಗಳು ತ್ಯಾಜ್ಯವಾದವುಗಳೆಂದು ಸ್ಪಷ್ಟವಾಗುತ್ತಿದ್ದಿತು.

ಈ ಶ್ಲೋಕದಲ್ಲಿ ಮೂರನೇಯದಾದ ಕೃತ್ತಿಕಾನಕ್ಷತ್ರದ ಉಲ್ಲೇಖವಿದೆ.

ಈ ಹಿಂದೆ ಹೇಳಿದಂತೆ ಸಂಸಾರಸಾಗರದಿಂದ ತಾರಣ ಮಾಡುವ ಉಪಾಯಗಳ ಆವಲಿಯೇ ತಾರಾವಲೀ ಎಂಬ ವ್ಯುತ್ಪತ್ತಿಯಂತೆ, ಈ ಶ್ಲೋಕದಲ್ಲಿ ಕೆಳಗಿನ ಸಾಧನೋಪಾಯಗಳು ಉಪದಿಷ್ಟವಾಗಿವೆಯೆಂದು ತೋರುತ್ತದೆ.

1) ಸಜ್ಜನರಿಗೆ ಇಹದಲ್ಲಿಯೂ ಪರದಲ್ಲಿಯೂ ಆನಂದಪ್ರದವಾದುದು ಶ್ರೀಯೋಗೀಂದ್ರತೀರ್ಥರು ಉಪದೇಶಿಸುವ ಮಧ್ವಸಿದ್ಧಾಂತವೇ ಆಗಿದೆ. ಈ ಸಿದ್ಧಾಂತದಲ್ಲಿ ದೃಢವಾದ ಶ್ರದ್ಧೆಯನ್ನು ಇಟ್ಟುಕೊಂಡಿರುವುದು ಅವಶ್ಯವಾಗಿದೆ. ಇದು ಒಂದು ಸಾಧನೋಪಾಯ.

2) ಬಾಹ್ಯವಾಣಿಯೂ ಆಂತರಿಕ ಅಭಿಪ್ರಾಯವೂ ಒಂದೇ ರೀತಿಯಾಗಿರಬೇಕು. ಇದರಿಂದಲೇನೇ ದುಷ್ಟ ವಿಚಾರಗಳನ್ನು ಹಾಗೂ ದುಷ್ಟ ಪ್ರವೃತ್ತಿಗಳನ್ನು ಮೂಲಸಹಿತವಾಗಿ ಕಿತ್ತೊಗೆಯಲು ವಿಶೇಷವಾದ ವರ್ಚಸ್ಸು ಪ್ರಾಪ್ತವಾಗುತ್ತದೆ.

3) ದುಷ್ಟ ಸಿದ್ಧಾಂತಗಳಲ್ಲಿ ಶ್ರದ್ಧೆ ತೋರಿಸಿದರೆ ಅಭ್ಯಾಸ ಬಲದಿಂದ ಮಾತುಗಳಲ್ಲಿಯೂ ಪ್ರವೃತ್ತಿಯಲ್ಲಿಯೂ ಅಶ್ಲೀಲತೆಯು ಬರುವುದರಿಂದ ಅವುಗಳಿಂದ ಮನಸ್ಸನ್ನು ದೂರವಿಡಬೇಕು. ''ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಸದಾತ್ಮನಾಂ'' ಎಂಬ ಸೂಕ್ತಿಯು ಇಲ್ಲಿ ಸೂಚಿತವಾಗಿದೆ.

ವಿಗ್ರಹವಾಕ್ಯಗಳು– ಆಮ್ನಾನಭೂಮ್ನಾ – ಆಮ್ನಾನಸ್ಯ ಭೂಮಾ ತೇನ. **ಕೃತಮಿತಪದಸಂದರ್ಭಣಾಂ** – ಮಿತಾನಿ ಚ ತಾನಿ ಪದಾನಿ ಮಿತಪದಾನಿ, ತೇಷಾಂ ಸಂದರ್ಭಣಂ, ಕೃತಂ ಮಿತಪದಸಂದರ್ಭಣಂ ಯಯಾ ಸಾ, ತಾಂ. **ದುರ್ಭಣಾಂ**

Rarest Archiver

- ದುಃಖೇನ ಭಣಿತುಂ ಶಕ್ಯಾಂ ಅರ್ಹಾಂ. **ಪ್ರತ್ಯರ್ಥಿಪ್ರಾಜ್ಞಸಾರ್ಥೈಃ** - ಪ್ರತ್ಯರ್ಥಿನಶ್ಚ ತೇ ಪ್ರಾಜ್ಞಾಶ್ಚ ಪ್ರತ್ಯರ್ಥಿಪ್ರಾಜ್ಞಾಃ, ತೇಷಾಂ ಸಾರ್ಥಾಃ ತೈಃ. **ಅಧಿಸಭಂ** - ಸಭಾಯಾಂ ಅಧಿಕೃತ್ಯ ಅಧಿಸಭಂ. **ನಿಷ್ಕೃತ್ತಿ** - ನಿರ್ಗತಾ ಕೃತ್ತಿಃ ಯಥಾ ಸ್ಯಾತ್ ತಥಾ.

ಕೋಶಗಳು- ಪ್ರತ್ಯರ್ಥಿಃ - ''ರಿಪೌ ವೈರಿಸಪತ್ನಾರಿ ದ್ವಿಷದ್ ದ್ವೇಷಣದುರ್ಹೃದಃ। ದ್ವಿಡ್ ವಿಪಕ್ಷಾಹಿತಾಮಿತ್ರದಸ್ಯುಶಾತ್ರವಶತ್ರವಃ। ಅಭಿಘಾತಿ ಪರಾರಾತಿ ಪ್ರತ್ಯರ್ಥಿ ಪರಿಪಂಥಿನಃ।''(ಅಮರ). ಪ್ರತಿಕೂಲಮರ್ಥಯಿತುಂ ಶೀಲಃ, ಅರ್ಥ ಯಾಂಚಾಯಾಂ ಚುರಾದಿಗಣ ಉಭಯಪದೀ. ''ಸುಪಿ'' (ಪಾಣಿನೀ ಸೂತ್ರ 3-2-78) ಎಂಬ ಸೂತ್ರದಂತೆ 'ಣಿನಿ' ಪ್ರತ್ಯಯವಾಗುತ್ತದೆ. ಯಾವಾಗಲೂ ಪ್ರತಿಕೂಲವಾದುದನ್ನೇ ಬಯಸುವ ಸ್ವಭಾವವುಳ್ಳವನು ನಮಗೆ ಶತ್ರುವೇ ಆಗಿರುತ್ತಾನೆ. ''ವೃಂದಭೇದಾಃ ಸಮೈರ್ವರ್ಗಃ ಸಂಘಸಾರ್ಥೌ ತು ಜಂತುಭಿಃ'' (ಅಮರ). ಒಂದೇ ಜಾತಿಯ ಪ್ರಾಣಿಗಳ ಇಲ್ಲವೇ ಇತರ ವಸ್ತುಗಳ ಸಮೂಹಕ್ಕೆ ''ವರ್ಗ'' ಎಂಬ ಶಬ್ದವನ್ನು ಪ್ರಯೋಗಿಸಬೇಕು. ಮನುಷ್ಯವರ್ಗ, ಬ್ರಾಹ್ಮಣವರ್ಗ, ಶೈಲವರ್ಗ ಎಂಬಂತೆ ಏಕಜಾತೀಯ ಇಲ್ಲವೇ ಭಿನ್ನ ಭಿನ್ನ ಪ್ರಕಾರಗಳ ಪ್ರಾಣಿಮಾತ್ರಗಳ ಸಮೂಹಕ್ಕೆ ''ಸಂಘ'' ಇಲ್ಲವೇ ''ಸಾರ್ಥ'' ಎಂಬ ಶಬ್ದ ಪ್ರಯೋಗ ಮಾಡಬೇಕು. ಸರತಿ, ಸ್ರಿಯತೇ ವಾ. ಸೃ-ಗತೌ(ಭ್ವಾದಿಗಣ, ಪರಸ್ಮೈಪದ) ಧಾತುವಿಗೆ ''ಸೃತೇರ್ಣಿತಃ'' (ಉಣಾದಿ, 2-5) ಎಂಬ ಉಣಾದಿ ಸೂತ್ರದಿಂದ ಥನ್‌ದೆದೆವಾಗುತ್ತದೆ. ಸಾರ್ಥಪದಪ್ರಯೋಗದಿಂದ ಪ್ರತಿವಾದಿಗಳಲ್ಲಿ ಪಂಡಿತರು, ಎಂದೆನಿಸಿಕೊಂಡವರ ಸಮೂಹದಲ್ಲಿ ಮಾಯಾವಾದಿಗಳು(ಪ್ರಚ್ಛನ್ನ ಬೌದ್ಧರು), ಬೌದ್ಧರು, ಜೈನರು, ತಾರ್ಕಿಕರು ಇತ್ಯಾದಿ ಭಿನ್ನ ಭಿನ್ನ ಮತಾನುಯಾಯಿಗಳೆಲ್ಲರೂ ಸೇರಿದ್ದಾರೆಂದು ಸೂಚಿತವಾಗುತ್ತದೆ. ''ಪ್ರಸಭಂ ತು ಬಲಾತ್ಕಾರೋ ಹಠಃ''(ಅಮರ). ಪ್ರಗತಾ ಸಭಾ ವಿಚಾರೋಸ್ಮಾತ್, ಸಭಾಯಾಃ ಪ್ರಗತೋ ವಾ. ಸರಿಯಾದ ರೀತಿಯಲ್ಲಿ ವಿಚಾರ ಮಾಡದೇ ಆಡಿದ ಮಾತುಗಳು ಅಲ್ಲದೇ ಸಭೆಯ ನಿಯಮಗಳನ್ನು ಲಕ್ಷಿಸದೇ ಯದ್ವಾ ತದ್ವಾ ಆಡಿದ ಮಾತುಗಳು ಎಂಬ ವ್ಯಂಗ್ಯವು ಸೂಚಿತವಾಗುತ್ತದೆ.

ಕೃತ್ತಿಶ್ಚರ್ಮತ್ವಚೋರ್ಭೂರ್ಜೇ ಕೃತ್ತಿಕಾಯಾಂ ದ್ವಯಂ ಸ್ತ್ರಿಯಾಂ''(ಮೇದಿನಿ). ''ಅಂತರ್ವಾಣಿಸ್ತು ಶಾಸ್ತ್ರವಿತ್'' (ಅಮರ 3-1-6) ಎಂಬಲ್ಲಿ ಅಂತ

Rarest Archiver

ರ್ವಾಣಿ ಎಂದರೆ ಶಾಸ್ತ್ರಜ್ಞಾನವುಳ್ಳವನು ಎಂದು ಅರ್ಥವಿದೆ. ಅಂತರ್ವಾಣೀ ಎಂದರೆ ಶಾಸ್ತ್ರಜ್ಞಾನಿಗಳ ಮುಖದಿಂದ ಹೊರಡುವ ಶಾಸ್ತ್ರಾರ್ಥ ಪರಿಪ್ಲುತವಾದ ಗಂಭೀರವಾದ ಮಾತು ಎಂದು ತಾತ್ಪಾರ್ಯಾರ್ಥ. ''ಬ್ರಾಹ್ಮೀ ತು ಭಾರತೀ ಭಾಷಾ ಗೀರ್ವಾಗ್ವಾಣೀ ಸರಸ್ವತೀ'' (ಅಮರ).

ವ್ಯಾಕರಣ ವಿಚಾರಗಳು-ಶಕಲಯತಿ - ಶಕಲ ಎಂಬ ನಾಮಪದದಿಂದ ಶಕಲವನ್ನು ಮಾಡು ಎಂಬ ಅರ್ಥದಲ್ಲಿ ಉಂಟಾದ ನಾಮಧಾತುವಿನ ರೂಪ. ''ತತ್ಕರೋತಿ ತದಾಚಷ್ಟೇ'' ಇತಿ ಣಿಚ್ ಎಂಬ ಗಣಸೂತ್ರದ ಪ್ರಕಾರ, ''ಅದನ್ನು ಮಾಡುತ್ತಾನೆ'', ''ಅದನ್ನು ಅನ್ನುತ್ತಾನೆ'' ಎಂಬ ಅರ್ಥಗಳಲ್ಲಿ ನಾಮರೂಪದ ಮುಂದೆ ಣಿಚ್ ಪ್ರತ್ಯಯವು ಬರುತ್ತದೆ. ಘಟಂ ಕರೋತಿ, ಘಟಮಾಚಷ್ಟೇ ವಾ ಘಟಯತಿ ಎಂಬ ರೂಪದಂತೆ ಇದಾಗಿದೆ. ಶಕಲ + ಇ ಎಂಬಲ್ಲಿ ಶಕಲದಲ್ಲಿಯ 'ಅ'ಕಾರವು ''ಯಚಿಭಮ್''(165), ಹಾಗೂ ''ಯಸ್ಯೇತಿ ಚ''(236) ಎಂಬ ಸೂತ್ರಗಳ ಪ್ರಕಾರ ಲೋಪವಾಗಿ ಶಕಲೀ ಎಂದಾಗುತ್ತದೆ. ಈ ಧಾತುವಿನ ಮುಂದೆ ಬೇರೆ ಬೇರೆ ಕಾಲಗಳ ಪ್ರತ್ಯಯವು ಬಂದಾಗ ಇಕಾರಕ್ಕೆ ಗುಣವಾಗಿ ಏಕಾರವು ನಂತರ ಏಕಾರಕ್ಕೆ ಆಯಾದೇಶವೂ ಉಂಟಾಗಿ ವರ್ತಮಾನ ಕಾಲದಲ್ಲಿ ಶಕಲಯತಿ ಎಂಬ ರೂಪವು ನಿಷ್ಪನ್ನವಾಗುತ್ತದೆ. ಶಕಲಯತಿ ಶಕಲಯತಃ ಶಕಲಯಂತಿ, ಶಕಲಯಸಿ ಶಕಲಯಥಃ ಶಕಲಯಥ, ಶಕಲಯಾಮಿ ಶಕಲಯಾವಃ ಶಕಲಯಾಮಃ. ಜೇಘ್ರೀಯಮಾಣಾ - ಘ್ರಾ - ಜಿಘ್ರತಿ ಎಂಬ ಧಾತುವಿನ ಪುನಃ ಪುನಃ ಆಘ್ರಾಣಿಸುವುದು ಎಂಬ ಅರ್ಥದಲ್ಲಿ ಯಙಂತ ರೂಪವಾಗಿದೆ. ''ಧಾತೋರೇಕಾಚೋ ಹಲಾದೇಃ ಕ್ರಿಯಾಸಮಭಿಹಾರೇ ಯಙ್'' (711, 3-1-22). ಪೌನಃ ಪುನ್ಯೇ ಭೃಶಾರ್ಥೇ ಚ ದ್ಯೋತ್ಯೇ ಧಾತೋರೇಕಾಚೋ ಹಲಾದೇರ್ಯಙ ಸ್ಯಾತ್ ಮತ್ತು ''ಗುಣೋ ಯಙಲುಕೋಃ'' ಇತ್ಯಾದಿ ಸೂತ್ರಗಳಿಂದ ಜೇಘ್ರೀಯತೇ ಎಂಬ ಆತ್ಮನೇ ಪದದ ರೂಪವಾಗಿ ಜೇಘ್ರೀಯಮಾಣಾ ಎಂಬ ರೂಪವಾಗುತ್ತದೆ. ''ತಾಚ್ಛೀಲ್ಯವಯೋವಚನಶಕ್ತಿಷು ಚಾನಶ್'' (ಪಾಣಿನೀ 3-2-126) ಎಂಬ ಸೂತ್ರದಂತೆ ಆನಶ್ ಎಂಬ ಪ್ರತ್ಯಯವು ಹತ್ತುತ್ತದೆ. ''ಆನ'' ಪ್ರತ್ಯಯವು ''ಮಾನ'' ಎಂದು ವಿಪರಿಣಾಮ ಹೊಂದುತ್ತದೆ. ಪುನಃ ಪುನಃ ಮೂಸಿ ನೋಡುವ ಸ್ವಭಾವವುಳ್ಳದ್ದಾಗಿರುವ ಎಂಬ ಅರ್ಥವು ಪ್ರಾಪ್ತವಾಗುತ್ತದೆ.

Rarest Archiver

ಇಲ್ಲಿ ''ಕೃತ್ತಿಕಾ'' ಎಂಬ ಶಬ್ದವಿರುವುದರಿಂದ ನಕ್ಷತ್ರಗಳ ಮಾಲೆಯಲ್ಲಿ ಮೂರನೆಯದಾದ ಕೃತ್ತಿಕಾ ನಕ್ಷತ್ರದ ಉಲ್ಲೇಖ ಮಾಡಿದಂತಾಗಿದೆ. ಹಿಂದಿನ ಶ್ಲೋಕದಲ್ಲಿಯಂತೆ ಉಪಮಾ ಹಾಗೂ ಮುದ್ರಾ ಅಲಂಕಾರಗಳ ಸಂಮಿಶ್ರವಿದೆ. ಈ ಅಲಂಕಾರಗಳ ವ್ಯಾಖ್ಯೆಗಳನ್ನು ಈ ಹಿಂದೆಯೇ ಕೊಡಲಾಗಿದೆ.

ಮಂದಾದ್ವೇಶಂತತುಂದಾದ್ಘಟಿತಪೃಥುಘಟೀಯಂತ್ರದಂಡಾಗ್ರಭಾಂಡಾ-
ತ್ಕೇದಾರದ್ವಾರಿ ವಾರಿ ಕ್ಷಿಪತಿ ಕತಿ ಕಿರನ್ನುಕ್ಷಣಾಯ ಕ್ಷಣಾನ್ವಾ ।।
ಯಾವತ್ಕ್ಲುಪ್ತಂ ಚ ತಾವದ್ವಿರಮತಿ ವಿಮತಃ ಪ್ರೋದ್ಗಿರನ್ನಿರ್ಗಿರಂತಮ್।
ಶ್ರೀಯೋಗೀಂದ್ರವ್ರತೀಂದ್ರ ತ್ಯಜತಿ ಗುರುಜಯಾರೋಹಿಣೀ
ತೇ ಹಿ ವಾಣೀ ।।4।।

ಅನ್ವಯಾರ್ಥಃ - (ಯಥಾ) - ಹೇಗೆ ಓರ್ವ ಒಕ್ಕಲಿಗನು, **ಘಟಿತಪೃಥುಘಟೀಯಂತ್ರದಂಡಾಗ್ರಭಾಂಡಾತ್ - ಪೃಥು** ಬಹು ದೊಡ್ಡದಾದ, **ಘಟೀಯಂತ್ರ** - ನೀರು ಜಗ್ಗಲು ಉಪಯೋಗಿಸುವ 'ಯಾತ'ವೆಂಬ ಸಾಧನದಲ್ಲಿರುವ, **ದಂಡಾಗ್ರ** - ಕೋಲಿನ ತುದಿಗೆ, **ಘಟಿತ** - ಇಡಲ್ಪಟ್ಟಂಥ, **ಭಾಂಡಾತ್** - ನೀರಿನ ಪಾತ್ರೆಯುಳ್ಳದ್ದಾಗಿರುವ, **ಮಂದಾತ್** - ಅಲ್ಪವಾಗಿರುವ, **ವೇಶಂತತುಂದಾತ್- ವೇಶಂತ** - ಚಿಕ್ಕದಾದ ನೀರಿನ ಮಡುವಿನ, **ತುಂದಾತ್** - ಉದರದಿಂದ, **ಕೇದಾರದ್ವಾರಿ - ಕೇದಾರ** - ತನ್ನ ಹೊಲದ, **ದ್ವಾರಿ** - ಮುಂಭಾಗದಲ್ಲಿ, **ವಾರಿ** - ನೀರನ್ನು, **ಕಿರನ್** - ಸಿಂಪಡಿಸುತ್ತ, **ಉಕ್ಷಣಾಯ** - ಹೊಲದ ಸೇಚನೆಗೋಸ್ಕರ, **ಕತಿ ವಾ ಕ್ಷಣಾನ್** - ಎಷ್ಟು ಕ್ಷಣಗಳವರೆಗಾದರೂ **ಕ್ಷಿಪತಿ** - ನೀರನ್ನು ಹರಿಸಿಯಾನು? ದೊಡ್ಡ ಪಾತ್ರೆಯ ಮೂಲಕ ಚಿಕ್ಕದಾದ ಮಡುವಿನಿಂದ ನೀರನ್ನು ತೆಗೆಯುತ್ತಿರುವುದರಿಂದ ಸ್ವಲ್ಪ ಕಾಲದವರೆಗೆ ಮಾತ್ರ ನೀರಿನ ಸೇಚನೆ ಮಾಡುವುದು ಸಾಧ್ಯವಿದೆ, **ತಥಾ** - ಹಾಗೆಯೇ, **ವಿಮತಃ** - ಸಿದ್ಧಾಂತಕ್ಕೆ ವಿರುದ್ಧವಾದ ಮತವನ್ನು ಹೇಳುವ ಪ್ರತಿವಾದಿಯು, **ಯಾವತ್** - ಎಷ್ಟರ ಮಟ್ಟಿಗೆ, **ಕ್ಲುಪ್ತಂ** - ಮುಖೋದ್ಗತ ಮಾಡಿ ಇಟ್ಟುಕೊಂಡಿದ್ದಾನೆಯೋ, **ತಾವತ್ ಚ** - ಅಷ್ಟರ ಮಟ್ಟಿಗೆ ಮಾತ್ರ , **ಪ್ರೋದ್ಗಿರನ್** - ಉಗುಳುವವನಾಗಿ, **ವಿರಮತಿ** - ಮುಂದೆ ಸ್ವಲ್ಪೇ ಕಾಲದಲ್ಲಿ ನಿಂತುಬಿಡುತ್ತಾನೆ. **ಹೇ ಶ್ರೀಯೋಗೀಂದ್ರವ್ರತೀಂದ್ರ** - ಸನ್ಯಾಸಿಗಳಲ್ಲಿ ಶ್ರೇಷ್ಠರಾದ ಹೇ ಶ್ರೀಯೋಗೀಂದ್ರವ್ರತೀಂದ್ರರೇ, **ಗುರುಜಯಾರೋಹಿಣೀ - ಗುರು** - ದೇವಗುರುಗಳಾದ ಬೃಹಸ್ಪತ್ಯಾಚಾರ್ಯರ

Rarest Archiver

ಮೇಲೆಯೂ, **ಜಯಾರೋಹಿಣ** - - ತನ್ನ ಕೌಶಲ್ಯದಿಂದ ಜಯವನ್ನು ಸಂಪಾದಿಸುವ ದಾದ, **ತೇ ವಾಣೀ** - ನಿಮ್ಮ ವಾಣಿಯು, **ನಿರ್ಗಿರಂ** - ಮುಂದೆ ಮಾತಾಡಲೇ ಬರದಂತಿರುವ, **ತಂ** - ಆ ಪ್ರತಿವಾದಿಯನ್ನು, **ತ್ಯಜತಿ** - ತಾತ್ಸಾರ ಮಾಡಿ ಬಿಟ್ಟು ಬಿಡುತ್ತದೆ. ಹಿ - ಇದು ಅನುಭವ ಸಿದ್ಧವಾಗಿ ಪ್ರಸಿದ್ಧವಾಗಿದೆ.

ತಾತ್ಪರ್ಯಾರ್ಥ - ಹಳ್ಳಿಗಳಲ್ಲಿ ಹೊಲಗಳಿಗೆ ದೊಡ್ಡದಾದ ಆಳವಾದ ಕೊಳದಲ್ಲಿಂದ ಯಾತವೆಂಬ ಸಾಧನದಿಂದ ನೀರನ್ನು ಜಗ್ಗಿ ಸಣ್ಣ ಸಣ್ಣ ಕಾಲುವೆಗಳ ಮೂಲಕ ನೀರನ್ನು ಹರಿಸುವುದು ವಾಡಿಕೆಯಾಗಿದೆ. ಯಾತವನ್ನು ದೊಡ್ಡ ಕೊಳಕ್ಕೆ ಹಚ್ಚದೇ ಒಂದು ಸಣ್ಣದಾದ ನೀರಿನ ಮಡುವಿಗೆ ಹಚ್ಚಿದರೆ ಸ್ವಲ್ಪೇ ಸಮಯದಲ್ಲಿ ನೀರು ಮುಗಿದು ಯಾತ ಹೊಡೆಯುವುದನ್ನು ನಿಲ್ಲಿಸಬೇಕಾಗುತ್ತದೆ. ಅದರಂತೆಯೇ ಪ್ರತಿವಾದಿಯ ಹತ್ತಿರ ಜ್ಞಾನಭಂಡಾರವೆಂಬ ದೊಡ್ಡ ಕೊಳವಿಲ್ಲ. ಅವನಿಗೆ ವಾದಕ್ಕೆ ಅನುಕೂಲವಾಗಿರುವ ತರ್ಕಪ್ರಕ್ರಿಯೆಯು ಬಹಳ ಸೀಮಿತವಾಗಿದೆ. ಅವನು ಅಷ್ಟರ ಮಟ್ಟಿಗೆ ಬಾಯಿಘಾತ ಮಾಡಿ ಇಟ್ಟುಕೊಂಡಿರುತ್ತಾನೆ. ಸಿದ್ಧಾಂತಿಯ ಪ್ರಶ್ನೆಗಳ ಸುರಿಮಳೆಗೆ ಉತ್ತರವಾಗಿ ತಾನು ಮುಖಸ್ಥ ಮಾಡಿಕೊಂಡಿದ್ದನ್ನು ಮಾತ್ರ ಹೇಳಿ ಮುಂದೆ ನಿರುತ್ತರನಾಗಿ ಸುಮ್ಮನೇ ಕೂಡುತ್ತಾನೆ. ಶ್ರೀಯೋಗೀಂದ್ರತೀರ್ಥರು ತಮ್ಮ ವಾದ ಕೌಶಲದಿಂದ ಪ್ರತಿವಾದಿಯನ್ನು ಸ್ವಲ್ಪೇ ಸಮಯದಲ್ಲಿ ನಿರುತ್ತರನನ್ನಾಗಿ ಮಾಡಿ ಬಿಡುತ್ತಾರೆ. ದೇವಗುರುವಾದ ಬೃಹಸ್ಪತಿಯನ್ನೂ ಕೂಡ ಜಯಿಸುವ ಸಾಮರ್ಥ್ಯವುಳ್ಳ ಅವರ ವಾಣಿಯು ಈ ಅಲ್ಪಜ್ಞಾನಿಗಳಾದ ಪ್ರತಿವಾದಿಗಳನ್ನು ನಿರುತ್ತರಗೊಳಿಸಿದ್ದೇನು ಆಶ್ಚರ್ಯ ! ಈ ರೀತಿ ಶ್ರೀಯೋಗೀಂದ್ರತೀರ್ಥರು ಅನೇಕ ಪ್ರತಿವಾದಿಗಳನ್ನು ವಾದದಲ್ಲಿ ಸೋಲಿಸಿ ತಮ್ಮ ವಿಜಯ ಪತಾಕೆಯನ್ನು ಹಾರಿಸಿ ಶ್ರೀಮಧ್ವಸಿದ್ಧಾಂತದ ಹಿರಿಮೆಯನ್ನು ಎತ್ತಿ ತೋರಿಸಿರುವುದು ಬಹು ಪ್ರಸಿದ್ಧವಾದ ವಿಷಯವಾಗಿದೆ.

ಈ ಶ್ಲೋಕದಲ್ಲಿ ಸಂಸಾರತಾರಕೋಪಾಯಗಳು ಈ ಕೆಳಗಿನಂತೆ ಪ್ರತಿಪಾದಿಸಲ್ಪಟ್ಟಿವೆ. 1) ಇಲ್ಲಿ ನೀರಿನ ನಿರ್ದೇಶವಿರುವುದರಿಂದ ನೀರಿನಲ್ಲಿರುವ ಸ್ನೇಹಗುಣವು ಸೂಚಿಸಲ್ಪಟ್ಟಿದೆ. ಶ್ರೀಬ್ರಹ್ಮಸೂತ್ರಗಳಲ್ಲಿ ಸಾಧನಾಧ್ಯಾಯವಾದ ತೃತೀಯಾಧ್ಯಾಯದಲ್ಲಿಯ ಭಕ್ತಿಪಾದದಲ್ಲಿ ಬರುವ "**ಓಂ ಅಂಬುವದಗ್ರಹಣಾತ್ತು ನ ತಥಾತ್ವಂ**" ಎಂಬ ಸೂತ್ರದ ವ್ಯಾಖ್ಯಾನ ಮಾಡುವಾಗ ಶ್ರೀರಾಘವೇಂದ್ರಸ್ವಾಮಿಗಳು- "ಅತ್ರ

Rarest Archiver

ಅಂಬುಪದೇನ ತದ್ಗತಸ್ನೇಹಗುಣಃ ಲಕ್ಷ್ಯತೇ--'' ಎಂದು ವಿಶದಗೊಳಿಸಿದ್ದಾರೆ. ''ನೀರಿನ ಪ್ರವಾಹವೆಂದರೆ ಭಕ್ತಿರಸದ ಪ್ರವಾಹವೆಂದು ಅರ್ಥ''. ನೀರಿನ ಪ್ರವಾಹವು ನಿರಂತರವಾಗಿ ಹರಿಯಬೇಕಾದರೆ ಅದು ಒಂದು ಚಿಕ್ಕದಾದ ನೀರಿನ ಮಡುವಿನಿಂದ ಪ್ರಾರಂಭವಾಗದೇ ಒಂದು ಆಳವಾದ ನೀರಿನ ಕೊಳದಿಂದ ಹೊರಟಿದ್ದಾಗಿರಬೇಕು. ಅದರಂತೆಯೇ ಭಕ್ತಿರಸವು ನಿರಂತರವಾಗಿ ಪ್ರವಹಿಸಬೇಕಾದರೆ ಅದು ಗಾಢವಾದ ಜ್ಞಾನಭಾಂಡಾರದ ತಳಹದಿಯ ಮೇಲೆ ಶುದ್ಧವಾದ ಅಂತಃಕರಣದ ಆಗರದಿಂದ ಹೊರಹೊಮ್ಮುವ ಭಾವೋದ್ರೇಕವಾಗಿರಬೇಕು. ಶ್ರೀಮನ್ಮಧ್ವಾಚಾರ್ಯರು ಶ್ರೀಮಹಾಭಾರತತಾತ್ಪರ್ಯನಿರ್ಣಯದಲ್ಲಿ ಭಕ್ತಿಯ ವಾಖ್ಯೆಯನ್ನು ಹೀಗೆ ಕೊಟ್ಟಿದ್ದಾರೆ - ''ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ । ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥'' - ''ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಹಾಗೂ ಎಲ್ಲದಕ್ಕಿಂತ ಹೆಚ್ಚಿನದಾದ ಸ್ನೇಹಕ್ಕೆ ಭಕ್ತಿಯೆನ್ನುತ್ತಾರೆ. ಅದರಿಂದಲೇ ಮುಕ್ತಿಸಾಧ್ಯವಿದೆ. ಬೇರೆ ಯಾವ ಉಪಾಯಗಳಿಂದಲೂ ಅಲ್ಲ''. ಶ್ರೀಟೀಕಾರಾಯರು ಶ್ರೀಮನ್ ನ್ಯಾಯಸುಧೆಯಲ್ಲಿ ಭಕ್ತಿರಸವನ್ನು ಹೀಗೆ ವಿವರಿಸಿದ್ದಾರೆ - ''ಪರಮೇಶ್ವರ ಭಕ್ತಿರ್ನಾಮ ನಿರವಧಿಕಾನಂತ ಅನವದ್ಯ ಕಲ್ಯಾಣಗುಣತ್ವಜ್ಞಾನಪೂರ್ವಕ ಸ್ವಾತ್ಮಾತ್ಮೀಯಸಮಸ್ತವಸ್ತುಭ್ಯೋ ಅನೇಕಗುಣಾಧಿಕಃ ಅಂತರಾಯಸಹಸ್ರೇಣಾಪಿ ಅಪ್ರತಿಬದ್ಧಃ ನಿರಂತರಪ್ರೇಮಪ್ರವಾಹಃ'' - ''ಪರಮೇಶ್ವರನಲ್ಲಿ ಭಕ್ತಿಯೆಂದರೆ ಪರಮೇಶ್ವರನು ನಿರವಧಿಕವಾದ ಅನಂತವಾದ ದೋಷರಹಿತವಾದ ಕಲ್ಯಾಣಗುಣಗಳಿಂದ ಪೂರ್ಣನಾದವನು ಎಂಬ ಜ್ಞಾನಪೂರ್ವಕವಾಗಿ ಇರುವ, ತಾನು, ತನ್ನವರು, ತನ್ನದು ಎಂಬ ಎಲ್ಲ ಪ್ರಕಾರದ ವಸ್ತುಗಳಲ್ಲಿ ಇರುವುದಕ್ಕಿಂತಲೂ ಅನೇಕ ಪಟ್ಟು ಹೆಚ್ಚಾಗಿರುವ, ಹಾಗೂ ಎಷ್ಟೇ ವಿಘ್ನಗಳು ಬಂದರೂ ಅಡೆತಡೆಯಿಲ್ಲದೇ ಪ್ರವಹಿಸಬಲ್ಲದಾದ ನಿರಂತರವಾದ ಪ್ರೇಮಪ್ರವಾಹ''. ಅದೆಷ್ಟು ಸೊಗಸಾದ ವ್ಯಾಖ್ಯೆಯನ್ನು ಕೊಟ್ಟಿದ್ದಾರೆ ! ಪ್ರಕೃತ ಶ್ಲೋಕದಲ್ಲಿ, ಇಂಥ ಹಿನ್ನೆಲೆಯಿಂದ ಕೂಡಿದ ಭಕ್ತಿರಸಪ್ರವಾಹವು ಈ ಸಂಸಾರಸಾಗರದಿಂದ ತರಣ ಮಾಡಲು ಉಪಯುಕ್ತವಾದ ಉಪಾಯವೆಂದು ಸೂಚಿಸಲಾಗಿದೆ. ಮಾನವ ಜನ್ಮದ ದೇಹವೇ ಕ್ಷೇತ್ರವು(ಹೊಲ), ಜೀವಾತ್ಮನೇ ಕೃಷಿಕನು, ಸುಖದುಃಖಗಳ ಏರಿಳಿತಗಳಿಂದ ಕೂಡಿದ ಸಂಸಾರವೇ ಘಟೀಯಂತ್ರವು.

Rarest Archiver

2) ಭಾವಪ್ರಧಾನವಾದ ಭಕ್ತಿರಸಕ್ಕೆ ಶ್ರೀಯೋಗೀಂದ್ರತೀರ್ಥರು ಉಪದೇಶಿಸಿದ ತತ್ವಜ್ಞಾನದ ತಳಹದಿಯು ಬೇಕು. ದುರ್ಮತವನ್ನು ತಾತ್ಸಾರ ಮಾಡಿ ತ್ಯಜಿಸುವ ಪ್ರವೃತ್ತಿಯೂ ಬೇಕು. ಈ ಸಂಸಾರದ ದಮನ ಮಾಡಲು ಯೋಗ್ಯವಾದ ಹಾಗೂ ಉತ್ತಮವಾದ ಪಾತ್ರವೆಂದರೆ ಭಕ್ತಿರಸದಿಂದ ದೇಹರೂಪ ಕ್ಷೇತ್ರದ ಸೇಚನೆ ಮಾಡುವುದು. ಇಂಥ ಸೇಚನೆಯು ಅನೂಚಾನವಾಗಿ ನಡೆದರೇನೆ ಅಂತಃಕರಣಶುದ್ಧಿಯುಂಟಾಗಿ ಈ ಭಾರವಾದ (ಗುರುವಾದ) ಸಂಸಾರವನ್ನು ಜಯಿಸುವ ಆಂತರಿಕವಾದ ನಾದವೊಂದು - ಶಕ್ತಿಯೊಂದು ದೊರೆಯುತ್ತದೆ ಎಂಬುದು ತಾತ್ವಿಕವಾದ ತಾತ್ಪರ್ಯಾರ್ಥ.

ವಿಗ್ರಹವಾಕ್ಯಗಳು- **ವೇಶಂತತುಂದಾತ್** - ವೇಶಂತಸ್ಯ ತುಂದಂ ತಸ್ಮಾತ್. **ಘಟಿತಪೃಥುಘಟೀಯಂತ್ರದಂಡಾಗ್ರಭಾಂಡಾತ್** - ಪೃಥು ಚ ತತ್ ಘಟೀಯಂತ್ರಂ ಚ, ಪೃಥುಘಟೀಯಂತ್ರಸ್ಯ ದಂಡಃ, ತಸ್ಯ ಅಗ್ರಂ, ಪೃಥುಘಟೀಯಂತ್ರದಂಡಾಗ್ರೇ ಭಾಂಡಂ, ಘಟಿತಂ ಪೃಥುಘಟೀಯಂತ್ರದಂಡಾಗ್ರಭಾಂಡಂ ಯಸ್ಮಿನ್ ತತ್, ತಸ್ಮಾತ್. **ವೇಶಂತತುಂದಾತ್** ಇದಕ್ಕೆ ವಿಶೇಷಣವಾಗಿದೆ. **ನಿರ್ಗಿರಂ** - ನಿರ್ಗತಾ ಗಿರಾ ಯಸ್ಮಾತ್ ಸಃ ತಮ್. **ಗುರುಜಯಾರೋಹಿಣೀ-** ಜಯಂ ಆರೋಹತಿ ಇತಿ ಜಯಾರೋಹಿಣೀ, ಗುರೋಃ (ಪಂಚಮೀ) ಜಯಾರೋಹಿಣೀ. **ವ್ರತೀಂದ್ರ** - ವ್ರತಿಷು ಇಂದ್ರಃ ತಸ್ಯ ಸಂಬೋಧನಂ.

ಕೋಶಗಳು- ವೇಶಂತಂ - ''ವೇಶಂತಃ ಪಲ್ವಲಂ ಚಾಲ್ಪಸರಃ''(ಅಮರ 1-10-28). ತುಂದಂ - ''ಪಿಚಂಡಕುಕ್ಷೀ ಜಠರೋದರಂ ತುಂದಂ''(ಅಮರ 2-6-77). ''ಉದ್ಘಾಟನಂ ಘಟೀಯಂತ್ರಂ ಸಲಿಲೋದ್ವಾಹನಂ ಪ್ರಹೇಃ''(ಅಮರ, 2-10-27). ಬಾವಿಯಿಂದ ನೀರನ್ನು ಮೇಲೆತ್ತಲು ಉಪಯೋಗಿಸುವ ಸಾಧನಕ್ಕೆ 'ಉದ್ಘಾಟನ' ಹಾಗೂ 'ಘಟೀಯಂತ್ರ' ಎಂಬ ಎರಡು ಹೆಸರುಗಳಿವೆ. ಕೇದಾರಃ- ಕೇನ ಜಲೇನ ದೀರ್ಯತೇ, ಕೇ ಜಲೇ ಶಿರಸಿ ವಾ ದಾರಃ ಅಸ್ಯ ಇತಿ ವಾ ಕೇದಾರಃ. ನೀರು ಪ್ರವಹಿಸುವುದರಿಂದ ಹೊಲದಲ್ಲಿ ಸೀಳುಗಳು ಆಗಿರುತ್ತವೆ. ಅಂಥ ಸೀಳುಗಳುಳ್ಳದ್ದು ಕೇದಾರ ಅಂದರೆ ಕ್ಷೇತ್ರ. ದ್ವಾರ - ''ಸ್ತ್ರೀ ದ್ವಾರ್ದ್ವಾರಂ ಪ್ರತೀಹಾರಃ''(ಅಮರ 2-2-16). ವಾರಿ - ''ಆಪಃ ಸ್ತ್ರೀ ಭೂಮ್ನಿ ವಾರ್ವಾರಿ ಸಲಿಲಂ ಕಮಲಂ ಜಲಂ'' (ಅಮರ 1-10-3). ಗಿರಾ - ''ಬ್ರಹ್ಮಾಣೀ ವಚನಂ

Rarest Archiver

ವಾಚಾ ಜಲ್ಪಿತಂ ಗದಿತಂ ಗಿರಾ'' ಇತಿ ಶಬ್ದಾರ್ಣವಃ.

ವ್ಯಾಕರಣ ವಿಚಾರಗಳು- ತ್ಯಜತಿ - ತ್ಯಜ ಹಾನೌ, ಭ್ವಾದಿಗಣ ಪರಸ್ಮೈಪದ, ತ್ಯಜತಿ ತ್ಯಜತಃ ತ್ಯಜಂತಿ, ತ್ಯಜಸಿ ತ್ಯಜಥಃ ತ್ಯಜಥ, ತ್ಯಜಾಮಿ ತ್ಯಜಾವಃ ತ್ಯಜಾಮಃ. ದುರ್ವಾದಿಗಳನ್ನು ನಿರುತ್ತರರನ್ನಾಗಿ ಮಾಡಿ ತಾತ್ಸಾರ ಮಾಡುವ ಪ್ರಸಂಗಗಳು ಮೇಲಿಂದ ಮೇಲೆ ಆಗುತ್ತಿದ್ದವಾದ್ದರಿಂದ ವರ್ತಮಾನಕಾಲದ ರೂಪವನ್ನು ಪ್ರಯೋಗಿಸಿದ್ದಾರೆ. ತ್ಯಾಗಮಾಡುತ್ತಲೇ ಇರುತ್ತಿದ್ದರು ಎಂಬುದು ತಾತ್ಪರ್ಯಾರ್ಥ. ಕ್ಷಿಪತಿ - ಕ್ಷಿಪ್ ಪ್ರೇರಣೇ, ತುದಾದಿಗಣ 6, ಉಭಯಪದಿ. ವಿರಮತಿ - ವಿ ಉಪಸರ್ಗಪೂರ್ವಕ ರಮ್ ಧಾತು. ರಮು ಕ್ರೀಡಾಯಾಂ ಎಂಬ ಧಾತುವು ಭುವಾದಿಗಣ ಆತ್ಮನೇಪದವಾಗಿದೆ. ರಮತೇ, ಆದರೆ ವಿ, ಆ, ಪರಿ ಹಾಗೂ ಉಪ ಎಂಬ ಉಪಸರ್ಗಗಳ ಜೊತೆಗೆ ಇದ್ದರೆ ಪರಸ್ಮೈಪದವಾಗುತ್ತದೆ. ''ವ್ಯಾಙಪರಿಭ್ಯೋ ರಮಃ'' (1-3-83, ಪಾಣಿನೀ ಸೂತ್ರ) ಹಾಗೂ ''ಉಪಾಚ್ಚ'' (1-3-84) ಎಂಬ ಸೂತ್ರಗಳ ಬಲದಿಂದ ವಿ, ಆ, ಪರಿ, ಉಪ ಈ ಉಪಸರ್ಗಗಳನ್ನು ಹಚ್ಚಿದಾಗ, ಅನುದಾತ್ತೇತ್ ಆಗಿದ್ದರಿಂದ ನಿತ್ಯಆತ್ಮನೇ ಪದವಾಗಿರುವ ರಮು - ರಮತೇ ಧಾತುವು ಪರಸ್ಮೈಪದವಾಗಿ ಪರಿಣಮಿಸುತ್ತದೆ. ಪ್ರೋದ್ಗಿರನ್ - ಪ್ರ ಹಾಗೂ ಉತ್ ಉಪಸರ್ಗಪೂರ್ವಕವಾದ ಗೃ- ನಿಗರಣೇ ತುದಾದಿಗಣ (6ನೇಯ ಗಣ) ಪರಸ್ಮೈಪದದ ಧಾತುವಿನ ಶತೃಂತ ರೂಪ - ಜೋರಾಗಿ ಹೊರಗೆ ಕಾರುತ್ತ ಎಂಬ ಅರ್ಥವು ಪ್ರಾಪ್ತವಾಗುತ್ತದೆ.

ಇಲ್ಲಿ ಘಟೀಯಂತ್ರ, ಚಿಕ್ಕ ನೀರಿನ ಮಡುವು, ಸೇಚನದ ನೀರು, ಹೀಗೆ ದೃಷ್ಟಾಂತಗಳನ್ನು ಕೊಟ್ಟಿರುವುದರಿಂದ ದೃಷ್ಟಾಂತಾಲಂಕಾರ, ಅದರಂತೆ ರೋಹಿಣೀ ನಕ್ಷತ್ರದ ಉಲ್ಲೇಖವಿರುವುದರಿಂದ ಮುದ್ರಾಲಂಕಾರಗಳು ಇವೆ. ದೃಷ್ಟಾಂತಾಲಂಕಾರದ ಲಕ್ಷಣವನ್ನು ಶ್ರೀಸುಧೀಂದ್ರಸ್ವಾಮಿಗಳು ತಮ್ಮ ''ಅಲಂಕಾರಮಂಜರೀ'' ಎಂಬ ಕೃತಿಯಲ್ಲಿ ಹೀಗೆ ಮಾಡಿದ್ದಾರೆ - ''ದೃಷ್ಟಾಂತೋ ವಾಕ್ಯಯೋರ್ಬಿಂಬಪ್ರತಿಬಿಂಬತಯಾ ವಚಃ । ಜಯೀಂದ್ರ ಏವ ವಾಗ್ಧಾಟೀ ಕಪರ್ದೀ ಚ ವಿಯದ್ಧುನೀ''.

ಆಸ್ಥಾಂ ಪ್ರಸ್ಥಂಪಚಾನಾಂ ಪರಿಹಸತಿ ಧನೀ
ಭೂರಿ ಖಾರಿಂಪಚೋನ್ಯೋ ।

Rarest Archiver

ಗಂಗಾಗಂ ಗಾಢಮಧ್ವನ್ಯತಿ ಪತತಿ ತಯಾ ಕಿಂನು ಕುಲ್ಯಾಪಿ ತುಲ್ಯಾ ।।
ಕುಂಭೀಂದ್ರೋಜ್ಜೃಂಭಕುಂಭಭಿದಪಿ ಮೃಗಶಿರಃ ಕಿಂಚರೇತ್ಪಂಚವಕ್ತ್ರೋ ।
ಧೀರೋ ಯೋಗೀಂದ್ರಯೋಗೀ
ಭೃಶಮವಗಣಯತ್ಯಪ್ರಸಿದ್ಧಾನ್ ಪ್ರಬುದ್ಧಾನ್ ।।5।।

ಅನ್ವಯಾರ್ಥ: ಖಾರಿಂಪಚಃ - ಒಂದು ಖಾರೀ ಪ್ರಮಾಣದಷ್ಟು ಕಾಳುಗಳನ್ನೂ (16 ದ್ರೋಣಗಳಿಗೆ ಸಮಾನವಾದ ಪ್ರಮಾಣ) ಅಡಿಗೆ ಮಾಡುವ (ಮಾಡಿಸುವ ಸಾಮರ್ಥ್ಯವುಳ್ಳ). **ಅನ್ಯಃ** - ಬೇರೆ, **ಧನೀ** - ಧನಿಕನೊಬ್ಬನು, **ಪ್ರಸ್ಥಂಪಚಾನಾಂ** - ಪ್ರಸ್ಥವೆಂಬ ಪ್ರಮಾಣದಷ್ಟು (ಖಾರೀ ಪ್ರಮಾಣಕ್ಕಿಂತ ಬಹು ಕಡಿಮೆಯದು) ಕಾಳುಗಳ ಅನ್ನ ಬೇಯಿಸುವವರ, **ಆಸ್ಥಾಂ** - ಪ್ರಯಾಸವನ್ನು ಕಂಡು, **ಭೂರಿ** - ಬಹಳಷ್ಟು, **ಪರಿಹಸತಿ** - ಅದೇನು ಮಹಾ ಎಂದು ಪರಿಹಾಸ ಮಾಡುತ್ತಾನೆ. **ಗಂಗಾ** - ಗಂಗಾ ನದಿಯು, **ಅಧ್ವನಿ** - ತನ್ನ ಪ್ರವಾಹದ ಮಾರ್ಗದಲ್ಲಿ ಬಂದಿರುವ, **ಗಾಢಂ** - ಬಹು ಭದ್ರವಾಗಿರುವ, **ಅಗಂ** - ಪರ್ವತವನ್ನು, **ಅತಿಪತತಿ** - ಕೆಡವಿಹಾಕಿ ದಾಟಿ ಹೋಗುತ್ತದೆ. **ತಯಾ** - ಆ ಗಂಗಾನದಿಗೆ, **ಕುಲ್ಯಾ** - ಕೃತ್ರಿಮವಾದ ಚಿಕ್ಕ ನೀರಿನ ಝರಿಯು, **ತುಲ್ಯಾ ಕಿಂ ನು** - ಸರಿಸಮಾನವಾದೀತೇ ? ಈ ಸಣ್ಣ ನೀರಿನ ಪ್ರವಾಹವೆಲ್ಲಿ ! ಗಂಗಾನದಿಯೆಲ್ಲಿ ! ಇನ್ನು, **ಕುಂಭೀಂದ್ರೋಜ್ಜೃಂಭಕುಂಭಭಿತ್** - ಕುಂಭೀಂದ್ರ - ಆನೆಗಳಲ್ಲಿ ಶ್ರೇಷ್ಠವಾದ ಆನೆಯ, **ಉಜ್ಜೃಂಭ** - ಅತ್ಯುನ್ನತವಾದ, **ಕುಂಭ** - ಕುಂಭಸ್ಥಳವನ್ನು, **ಭಿತ್** - ತುಂಡರಿಸಿ ಒಗೆಯುವ ಪ್ರವೃತ್ತಿಯುಳ್ಳ, **ಪಂಚವಕ್ತ್ರಃ -ಅಪಿ** - ಸಿಂಹವು ಕೂಡ, **ಮೃಗಶಿರಃ** - ಒಂದು ಚಿಗರೆಯ ಶಿರಸ್ಸನ್ನು, **ಚರೇತ್ ಕಿಂ** - ತಿಂದೀತೆ ? ತಿನ್ನಲು ತವಕಿಸೀತೆ ? ಹಾಗೆಯೇ, **ಧೀರಃ** - ವಾದಿನಿಗ್ರಹದಲ್ಲಿ ನಿಸ್ಸೀಮ ಪರಾಕ್ರಮಿಗಳಾದ, **ಯೋಗೀಂದ್ರಯೋಗೀ** - ಯೋಗೀಂದ್ರರೆಂಬ ಯೋಗಿಯು, **ಅಪ್ರಸಿದ್ಧಾನ್** - ಪಾಂಡಿತ್ಯದಲ್ಲಿಯಾಗಲೀ, ವಾದಕೌಶಲದಲ್ಲಿಯಾಗಲೀ ಏನೂ ಹೆಸರು ಗಳಿಸದಿರುವ ಆದ್ದರಿಂದ ಸಾಮಾನ್ಯರಾದ, **ಪ್ರಬುದ್ಧಾನ್** - ಪ್ರತಿವಾದಿಪಂಡಿತರನ್ನು, **ಭೃಶಂ** - ಅತಿಶಯವಾಗಿ, **ಅವಗಣಯತಿ** - ಅವಹೇಳನ ಮಾಡಿ ಉದಾಸೀನ ಮಾಡುತ್ತಾರೆ.

ತಾತ್ಪರ್ಯಾರ್ಥ : ಬಹಳ ದೊಡ್ಡ ಕಾರ್ಯಗಳನ್ನು ಮಾಡುವ ಅರ್ಹತೆಯುಳ್ಳ ಧೀರರು ಬಹಳ ಸಾಮಾನ್ಯವಾದ ಕಾರ್ಯಗಳ ಬಗ್ಗೆ ತಾತ್ಸಾರಭಾವವನ್ನು ತಾಳು

Rarest Archiver

ವುದು ಸಹಜ. ಸಹಸ್ರಾರು ಜನರಿಗೆ ಪಕ್ವಾನ್ನ ಮಾಡಿಸಿ ಉಣಿಸಿ ತಣಿಸುವ ಯೋಗ್ಯತೆಯುಳ್ಳ ಧನಿಕನು ಒಂದು ಸಣ್ಣ ಪ್ರಮಾಣದ ಮೇಜವಾನಿಗೆಗಾಗಿ ಪರಿಶ್ರಮಿಸುತ್ತಿರುವ ಯಜಮಾನನನ್ನು ಉದಾಸೀನ ಮಾಡುತ್ತಾನೆ. ದೊಡ್ಡ ದೊಡ್ಡ ಪರ್ವತಗಳನ್ನು ಬಂಡೆಗಳನ್ನು ತನ್ನ ಭೋರ್ಗರೆಯುವ ಪ್ರವಾಹಕ್ಕೆ ಸಿಲುಕಿಸಿ ತುಂಡು ತುಂಡು ಮಾಡಿ ಆರ್ಭಟದಿಂದ ಮುಂದೆ ಸಾಗುತ್ತಿರುವ ಗಂಗಾಪ್ರವಾಹದೆದುರು ನಮ್ಮ ಹಿತ್ತಲದಲ್ಲಿಯ ಒಂದು ಸಣ್ಣ ಕಾಲುವೆಯ ಪ್ರವಾಹ ಅವಹೇಳನೀಯ. ಅದರಂತೆ ವನರಾಜನೆಂದು ಪ್ರಸಿದ್ಧನಾದ ಸಿಂಹವು, ತನ್ನ ಸ್ಥಾನಮಾನಕ್ಕೆ ತಕ್ಕಂತೆ ಶಕ್ತಿಶಾಲಿಯಾದ ಆನೆಯೊಡನೆ ಸೆಣಸಾಡಿ ಅದರ ಮಸ್ತಕವನ್ನು ಚೂರು ಚೂರು ಮಾಡಿ ಸೂರೆ ಮಾಡುತ್ತದೆ. ಒಂದು ಸಣ್ಣ ಚಿಗರೆಯೊಡನೆ ಸೆಣಸಾಡುವ ಗೊಡವೆಗೆ ಹೋಗುವುದಿಲ್ಲ. ಅದರಂತೆಯೇ ತತ್ವಜ್ಞಾನ, ತರ್ಕಶಾಸ್ತ್ರ, ವ್ಯಾಕರಣ, ಮೀಮಾಂಸಾ ಇತ್ಯಾದಿ ಜ್ಞಾನಾಂಗಗಳಲ್ಲಿ ಅಮೋಘವಾದ ಪರಿಣತಿಯ ಪರಾಕಾಷ್ಠೆಯನ್ನು ಪಡೆದು ವಾದಿ ಮಲ್ಲರಾಗಿರುವ ಶ್ರೀಯೋಗೀಂದ್ರರು ತಮಗೆ ಸಮಾನರಾದ ಪಾಂಡಿತ್ಯವುಳ್ಳ ಪ್ರತಿವಾದಿಗಳು ಎದುರು ಬಂದರೆ ಮಾತ್ರ ಅವರೊಡನೆ ವಾದ ಯುದ್ಧವನ್ನು ಹೂಡಿ ಅವರನ್ನು ವಾದದಲ್ಲಿ ಮಣ್ಣು ಮುಕ್ಕಿಸಿ ತಮ್ಮ ವಿಜಯದುಂದುಭಿಯನ್ನು ದಶದಿಕ್ಕುಗಳಲ್ಲಿ ಮೊಳಗಿಸುತ್ತಿದ್ದರು. ಶ್ರೀಯೋಗೀಂದ್ರತೀರ್ಥರು ಅಂಥ ಇಂಥ ಸಾಮಾನ್ಯ ಪ್ರತಿವಾದಿಗಳನ್ನು ಲೆಕ್ಕಿಸುತ್ತಿದ್ದಿಲ್ಲ ಎಂಬ ಹೇಳಿಕೆಯ ತಾತ್ಪರ್ಯವೆಂದರೆ ಅವರ ಹೆಸರು ಕೇಳುತ್ತಲೇ ಸಾಮಾನ್ಯ ಪ್ರತಿವಾದಿಗಳು ವಾದದ ಗೊಡವೆಗೆ ಹೋಗದೇ ಪಲಾಯನ ಹೇಳುತ್ತಿದ್ದರು ಇಲ್ಲವೇ ಅವರಿಗೆ ಶರಣಾಗತರಾಗಿ, ಶಿಷ್ಯರಾಗಿ ಅವರಿಂದ ನಿಜವಾದ ತತ್ವಜ್ಞಾನ ಬೋಧನೆಯನ್ನು ಆತ್ಮೋದ್ಧಾರಕ್ಕಾಗಿ ಹೇಳಬೇಕೆಂದು ಪ್ರಾರ್ಥಿಸುತ್ತಿದ್ದರು. ಇನ್ನು ಕೆಲವು ವಿಶೇಷ ಪಾಂಡಿತ್ಯವುಳ್ಳ ಪ್ರತಿವಾದಿಮಲ್ಲರು ವಾದಕಣಕ್ಕೆ ಇಳಿದು ಇವರ ವಾದಕೌಶಲದಿಂದ ಪರಾಜಿತರಾಗಿ ಪಲಾಯನ ಹೇಳುತ್ತಿದ್ದರು ಇಲ್ಲವೇ ಶಿಷ್ಯರಾಗುತ್ತಿದ್ದರು. ಈ ರೀತಿಯಾಗಿ ಅಪ್ರತಿಮಪ್ರತಿಭಾ ಸಂಪನ್ನರಾದ ಶ್ರೀಯೋಗೀಂದ್ರತೀರ್ಥರು ವೇದಾಂತ ಸಾಮ್ರಾಜ್ಯದಲ್ಲಿ ಏಕೈಕ ಸಾರ್ವಭೌಮರಾಗಿ ವಿರಾಜಿಸುತ್ತಿದ್ದರೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ಶ್ರೀಯೋಗೀಂದ್ರತೀರ್ಥರಲ್ಲಿ ಅನೇಕ ರೀತಿಯ ವಿಶೇಷ ಸಾಮರ್ಥ್ಯಗಳಿವೆ. ಅಸಂಖ್ಯ ಸುಜೀವಿಗಳಿಗೆ ನಿಜವಾದ ತತ್ವಜ್ಞಾನವೆಂಬ ಅನ್ನವನ್ನು ಉಣಿಸುವ

Rarest Archiver

ಸಾಮರ್ಥ್ಯ, ಗಂಗೆಯಂತೆ ಬಾಹ್ಯಶುದ್ಧಿಗಳನ್ನು ಅನುಗ್ರಹಿಸುವ ಸಾಮರ್ಥ್ಯವಲ್ಲದೆ ಆಂತರಿಕ ಅಂತಃಕರಣ ಶುದ್ಧಿಯನ್ನು ಅನುಗ್ರಹಿಸುವ ಸಾಮರ್ಥ್ಯ ಇವರಲ್ಲಿದೆ. ಶ್ರೀಯೋಗೀಂದ್ರತೀರ್ಥರು ಸಿಂಹದಂತೆ ಗಾಂಭೀರ್ಯ, ಔದಾರ್ಯ ಮತ್ತು ವೇದಾಂತ ಸಾಮ್ರಾಜ್ಯದ ಆಧಿಪತ್ಯ ಹೀಗೆ ಅಸಾಮಾನ್ಯವಾದ ಗುಣಗಳಿಂದ ಭೂಷಿತರಾಗಿದ್ದಾರೆ.

ಇಲ್ಲಿ ಮೃಗಶಿರ ನಕ್ಷತ್ರದ ಉಲ್ಲೇಖವಿದೆ. ಈ ಕೆಳಗಿನ ಸಂಸಾರ ತಾರಕವಾದ ಸಾಧನಗಳು ಸೂಚಿತವಾಗಿವೆ.

1) ಅಪಾರವಾದ ತತ್ವಜ್ಞಾನದ ಊಟದ ಎದುರು ಮಿಥ್ಯಾಜ್ಞಾನದ ಊಟವು ಹೇಯವಾದುದು, ನಿಜವಾದ ತತ್ವಜ್ಞಾನವನ್ನು ಸಂಪಾದಿಸಿದರೆ ಸ್ವರೂಪಾನಂದಾವಿರ್ಭಾವರೂಪವಾದ ಅಪಾರವಾದ ಫಲವಿದೆ. ಮಿಥ್ಯಾಜ್ಞಾನದಿಂದ ಕ್ಷಣಿಕವಾದ ತೃಪ್ತಿಯುಂಟಾಗುತ್ತದೆ, ಕ್ಷಣಿಕವಾದ ಅಲ್ಪ ಸುಖ ಕೊಡುವ ವಿಷಯಗಳಲ್ಲಿ ವೈರಾಗ್ಯ ತಾಳಬೇಕು.

2) ಜ್ಞಾನ ಹಾಗೂ ವೈರಾಗ್ಯ ಇವುಗಳಿಂದ ಉಪೋದ್ಬಲಿತವಾದ ಭಕ್ತಿರಸಪ್ರವಾಹವೇ ಯಾವ ಅಡೆತಡೆಯಿಲ್ಲದೆ ಮೋಕ್ಷದ ಗುರಿಯತ್ತ ಕರೆದೊಯ್ಯುತ್ತದೆ. ಅಂಥ ಇಂಥ ಸಾಮಾನ್ಯ ದೇವತೆಗಳಲ್ಲಿ ಅಲ್ಪ ಫಲಗಳ ಸಲುವಾಗಿ ಭಕ್ತಿಯನ್ನು ತೋರುವ ಪ್ರವೃತ್ತಿಯನ್ನು ಬಿಡಬೇಕು. ಕಾಮ್ಯಕರ್ಮಗಳನ್ನೂ, ಕಾಮ್ಯದೇವತೆಗಳ ಆರಾಧನೆಯನ್ನೂ ತ್ಯಜಿಸುವುದೇ ಸಾಧನಮಾರ್ಗದ ಮುಖ್ಯ ಲಕ್ಷಣಗಳಲ್ಲೊಂದಾಗಿದೆ.

3) ಸಾಧನಜೀವಿಯು ಸಿಂಹದಂತೆ ಗಾಂಭೀರ್ಯ, ಔದಾರ್ಯ, ಪ್ರೌಢಿಮೆ ಇತ್ಯಾದಿ ಸದ್ಗುಣಗಳನ್ನು ಅಳವಡಿಸಿಕೊಳ್ಳಬೇಕು. ಆನೆಯಂತೆ ವಿಶಾಲಕಾಯದ ಈ ಸಂಸಾರದ ಕರ್ಮಬಂಧವನ್ನು ತುಂಡರಿಸಬೇಕಾದರೆ ಪುರುಷಸಿಂಹನಾದ (ಪುರುಷೋತ್ತಮನಾದ) ನರಸಿಂಹನನ್ನೂ, ಪಂಚವಕ್ತ್ರನಾದ ಹನುಮಂತನನ್ನೂ ಶರಣು ಹೋಗುವುದು ಅವಶ್ಯವಾಗಿದೆ.

4) ಶ್ರೀಯೋಗೀಂದ್ರತೀರ್ಥರನ್ನೇ ಗುರುಗಳನ್ನಾಗಿ ಸ್ವೀಕರಿಸಿ ಅವರಿಂದ

Rarest Archiver

ಬೋಧನೆಯನ್ನು ಪಡೆದು ಉಳಿದ ಅಲ್ಪ ಜ್ಞಾನಿಗಳು ಉಪದೇಶಿಸಿದ ತತ್ವಗಳನ್ನು ತಾತ್ಸಾರ ಭಾವದಿಂದ ತ್ಯಜಿಸಬೇಕು.

ವಿಗ್ರಹವಾಕ್ಯಗಳು- **ಪ್ರಸ್ಥಂಪಚಾನಾಂ** - ಪ್ರಸ್ಥಂ ಪಚಂತೀತಿ ಪ್ರಸ್ಥಂಪಚಾಃ ತೇಷಾಂ । ಖಾರಿಂ ಪಚತೀತಿ **ಖಾರಿಂಪಚಃ** । **ಕುಂಭೀಂದ್ರಃ** - ಕುಂಭಿಷು ಇಂದ್ರಃ । **ಉಜ್ಜೃಂಭಕುಂಭಚ್ಛಿತ್** - ಉಜ್ಜೃಂಭಶ್ಚಾಸೌ ಕುಂಭಶ್ಚ ಉಜ್ಜೃಂಭಕುಂಭಃ । ತಂ ಛಿನತ್ತೀತಿ । **ಮೃಗಶಿರಃ** - ಮೃಗಸ್ಯ ಶಿರಃ ತತ್ ।

ಕೋಶಗಳು- ''ಪ್ರಸ್ಥೋಕ್ತೀ ಸಾನುಮಾನಯೋಃ'' (ಅಮರ 3-3-88). ''ಆಸ್ಥಾತ್ವಾಲಂಭನಾಸ್ಥಾನ ಯತ್ನಾಪೇಕ್ಷಾಸು ಯೋಷಿತಿ'' ಇತಿ ಮೇದಿನೀ (72-3). ''ಅಸ್ತ್ರಿಯಾಮಾಢಕದ್ರೌಣೌ ಖಾರೀ ವಾಹೋ ನಿಕುಂಚಕಃ । ಕುಂಡವಃ ಪ್ರಸ್ಥ ಇತ್ಯಾದ್ಯಾಃ ಪರಿಮಾಣಾರ್ಥಕಾಃ ಪೃಥಕ್'' (ಅಮರ 2-9-880). ''ಅಗಃ ಸ್ಯಾನ್ನಗ ವತ್ತರೌ ಶೈಲೇ ಸರೀಸೃಪೇ ಭಾನೌ'' ಇತಿ ಹೇಮಃ । ''ಕುಲ್ಯಾಲ್ಪಾ ಕೃತ್ರಿಮಾ ಸರಿತ್'' (ಅಮರ 1-10-34). ''ಕುಂಭಃ ಸ್ಯಾತ್ಕುಂಭಕರ್ಣಸ್ಯ ಸುತೇ ವೇಶ್ಯಾಪತೌ ಘಟೇ । ರಾಶಿಭೇದೇ ದ್ವಿಪಾಂಗೇ ಚ ಕುಂಭಂ ತ್ರಿವೃತಿ ಗುಗ್ಗುಲೇ'' ವಿಶ್ವಃ (108-19). ಪಂಚವಕ್ತ್ರವೆಂದರೆ ಪಂಚಾಸ್ಯವು. ಪಂಚಾಸ್ಯಕ್ಕೆ ಕೋಶವು ಹೀಗಿದೆ - ''ಸಿಂಹೋ ಮೃಗೇಂದ್ರಃ ಪಂಚಾಸ್ಯೋ ಹರ್ಯಕ್ಷಃ ಕೇಸರೀ ಹರಿಃ'' (ಅಮರ 2-5-1). ಪಂಚಂ ವಿಸ್ತೃತಂ ಆಸ್ಯಂ ಅಸ್ಯ, ಇಲ್ಲವೇ ಮುಖಂ ಪಾದಾಶ್ಚ ಪಂಚ ಆಸ್ಯಾನಿ ಇವ ಯಸ್ಯ,ಎದುದಧೀ ಮ ಮುಖ್ಯತ್ವಾತ್.

ವ್ಯಾಕರಣ ವಿಚಾರಗಳು- ಖಾರಿಂಪಚಃ ಪ್ರಸ್ಥಂಪಚಃ ಎಂಬಲ್ಲಿ ''ಪರಿಮಾಣೇ ಪಚಃ''(3-2-33)-2948 ಎಂಬ ಪಾಣಿನೀ ಸೂತ್ರದ ಪ್ರಕಾರ, ಖಾರಿಂ ಪ್ರಸ್ಥಂ ಎಂಬ ಪರಿಮಾಣದ ಶಬ್ದಗಳು ಕರ್ಮದಲ್ಲಿ ಉಪಪದಗಳಾಗಿದ್ದಲ್ಲಿ ಪಚ್ ಧಾತುವಿಗೆ ಖಶ್ ಪ್ರತ್ಯಯದ ಆದೇಶವಾಗುತ್ತದೆ. ''ಖಿತ್ಯನವ್ಯಯಸ್ಯ'' (6-3-66, - 2943) ಖಿದಂತೇ ಪರೇ ಪೂರ್ವಪದಸ್ಯ ಹ್ರಸ್ವಃ ಸ್ಯಾತ್, ''ಅರುರ್ದ್ವಿಷದಜಂತಸ್ಯ ಮುಮ್'' (2942, 6-3-67) ಇತಿ ಮುಮಾಗಮಃ. ಇಲ್ಲಿ ಖಾರಿಂ ಪಚತಿ ಎಂಬ ವಿಗ್ರಹದಿಂದ ಖಾರಿಂಪಚಃ ಎಂದು ಆಗುತ್ತದೆ. ಅದರಂತೆ ಪ್ರಸ್ಥಂಪಚಃ ಎಂಬ ರೂಪವು ಪ್ರಾಪ್ತವಾಗುತ್ತದೆ. ಅವಗಣಯತಿ- ಅವ ಉಪಸರ್ಗಪೂರ್ವಕವಾದ ಗಣ - ಸಂಖ್ಯಾನೇ

Rarest Archiver

ದಶಮಗಣ ಉಭಯಪದೀ, ಅವಗಣಯತಿ ಅವಗಣಯತಃ ಅವಗಣಯಂತಿ, ಅವಗಣಯಸಿ ಅವಗಣಯಥಃ ಅವಗಣಯಥ, ಅವಗಣಯಾಮಿ ಅವಗಣಯಾವಃ ಅವಗಣಯಾಮಃ. ಪರಿಹಸತಿ - ಪರಿ ಉಪಸರ್ಗಪೂರ್ವಕ ಹಸ್ ಹಸನೇ ಭುವಾದಿ ಗಣ ಪರಸ್ಮೈಪದ, ಧಾತುವಿನ ವರ್ತಮಾನಕಾಲ ತೃತೀಯ ಪುರುಷ ಏಕವಚನ. ಅತಿಪತತಿ - ಅತಿ ಉಪಸರ್ಗಪೂರ್ವಕ ಪತ್ - ಪತನೇ ಭುವಾದಿಗಣ ಪರಸ್ಮೈಪದದ ಧಾತುವಿನ ತೃತೀಯ ಪುರುಷ ಏಕವಚನ. ಚರೇತ್ - ಚರ ಗತಿ ಭಕ್ಷಣಯೋಃ, ಭುವಾದಿಗಣ ಪರಸ್ಮೈಪದದ ಧಾತುವಿನ ವಿಧ್ಯರ್ಥ ತೃತೀಯ ಪುರುಷ ಏಕವಚನ - ಚರೇತ್ ಚರೇತಾಂ ಚರೇಯುಃ, ಚರೇಃ ಚರೇತಂ ಚರೇತ, ಚರೇಯಂ ಚರೇವ ಚರೇಮ.

ಅಲ್ಪೈರನ್ಯೋಕ್ತಿಶಿಲ್ಪೈರಪಿ ಚಿರಮುಷಿತೈಃಶೌರಿತಲ್ಪೀಯಜಲ್ಪ-
ಪ್ರಾಗಲ್ಭೀಕಲ್ಪಕಾನ್ವಃ ಪ್ರತಿ ಬತ ವಿಮತೋ
ಯೋ ಜಯೇಷೀ ಮನೀಷೀ ।।
ಚೋರಂ ಕಾರಂತಮಾದ್ರಾಗಸಮಪಿ
ಸಕೃದಾಕ್ರೋಶತೀ ಪ್ರೋಶತೀಯಮ್ ।
ಸೂಲ್ಲಾಘಂ ರಾಘವೇಂದ್ರವ್ರತಿಸುತ ಮುನಯಃ
ಕಾರುಣೀಮಾವೃಣೀತೇ ।।6।।

ಅನ್ವಯಾರ್ಥಃ - ಹೇ ರಾಘವೇಂದ್ರವ್ರತಿಸುತ - ಹೇ ಶ್ರೀರಾಘವೇಂದ್ರಸ್ವಾಮಿಗಳ ವರಕುಮಾರಕರೇ, **ಹೇ ಮುನಯಃ** - ಹೇ ಯೋಗೀಂದ್ರತೀರ್ಥರೇ, **ಶೌರಿತಲ್ಪೀಯಜಲ್ಪಪ್ರಾಗಲ್ಭೀಕಲ್ಪಕಾನ್** - **ಶೌರಿ** - ವಿಷ್ಣುವಿನ, **ತಲ್ಪೀಯ** - ಹಾಸಿಗೆಯಂತಿರುವ ಶೇಷದೇವರ ಅವತಾರವಾಗಿರುವ, ಪತಂಜಲಿಯ ಭಾಷ್ಯದಲ್ಲಿ ಅಂದರೆ ಪಾತಂಜಲಿ ಭಾಷ್ಯದಲ್ಲಿ, **ಪ್ರಾಗಲ್ಭೀಕಲ್ಪಕಾನ್** - ಪ್ರೌಢಿಮೆಯನ್ನು, ಪ್ರಾವೀಣ್ಯತೆಯನ್ನು ಪಡೆದವರಾದ, **ವಃ** - ನಿಮ್ಮನ್ನು, **ಪ್ರತಿ** - ಕುರಿತು, **(ಕಃ)** - ಯಾವ, **ಮನೀಷೀ** - ಪಂಡಿತನಾದ, **ವಿಮತಃ** - ಪ್ರತಿವಾದಿಯು, **ಬತ** - ಪಾಪ, **ಜಯೇಷೀ** - ಜಯವನ್ನು ಇಚ್ಛಿಸಿಯಾನು ? ಯಾವನೂ ನಿಮ್ಮನ್ನು ಜಯಿಸಲು ಇಚ್ಛಿಸಲಾರನು. ಇನ್ನು, **ಯಃ** - ಯಾವನು ನಿಮ್ಮೊಂದಿಗೆ ವಾದ ಮಾಡಲು ಬರುವನೋ, **ತಂ** - ಅಂಥ, **ಚಿರಮುಷಿತೈಃ** - ಬಹು ಕಾಲದಿಂದ ಬೇರೆಯವರ ಕಡೆಯಿಂದ ಕಳುವು ಮಾಡಿ

Rarest Archiver

ತಂದಿರುವ, **ಅಲ್ಪೈಃ ಅಪಿ** - ಬಹು ಕಡಿಮೆ ಮಟ್ಟದವಾದರೂ, **ಅನ್ಯೋಕ್ತಿಶಿಲ್ಪೈಃ** - ಬೇರೆಯವರ ಉಕ್ತಿಯೆಂಬ ಉಪಾಯಗಳಿಂದಾಗಿ, **ಆರ್ದ್ರಾಗಸಂ - ಆರ್ದ್ರ** - ಇನ್ನೂ ಹಸಿಯಾಗಿರುವ ಅಂದರೆ ಹೊಸದಾಗಿರುವ, **ಆಗಸಂ** - ಪಾಪಕರ್ಮವುಳ್ಳವನಾದರೂ, **ಅಪಿ** - ಕೂಡ, **ಚೋರಂಕಾರಂ** - ಅವನನ್ನು ಅನ್ಯೋಕ್ತಿ ಚೋರನೆಂದು ಪರಿಗಣಿಸಿ, **ಸಕೃತ್** - ಒಮ್ಮೆ, **ಆಕ್ರೋಶತಿ** - ನಿಂದಿಸುವುದಾಗಿ ನಂತರ, **ತಂ** - ಅವನನ್ನೇ, **ಸೂಲ್ಲಾಘಂ** - ಚೆನ್ನಾಗಿ ಪರಿಹರಿಸಲ್ಪಟ್ಟ ಪಾಪವುಳ್ಳವನನ್ನಾಗಿ, **ಉಶತೀ** - ಮಾಡಬೇಕೆಂದು ಇಚ್ಛೆಯುಳ್ಳದ್ದಾಗಿರುವ, **ಇಯಂ** - ಈ **ವಃ** - ನಿಮ್ಮ (ವಾಕ್) ವಾಣಿಯು, **ಕಾರುಣೀಂ** - ಕಾರುಣ್ಯವನ್ನು, **ಆವೃಣೀತೆ** - ಸ್ವೀಕರಿಸುತ್ತದೆ.

ತಾತ್ಪರ್ಯಾರ್ಥ : ವಾಕ್‌ಚಾತುರ್ಯದ ಪರಾಕಾಷ್ಠೆಯನ್ನು ವರ್ಣನೆ ಮಾಡುವಾಗ ಸಹಸ್ರಜಿಹ್ವನಾದ ಶೇಷನ ವಾಕ್ಚಾತುರ್ಯಕ್ಕೆ ಹೋಲಿಸುವುದು ಪರಿಪಾಠವಾಗಿದೆ. ಅದರಂತೆ ಶ್ರೀಯೋಗೀಂದ್ರತೀರ್ಥರ ವಾದಕೌಶಲವು ಶೇಷದೇವನ ವಾಕ್ ಪ್ರೌಢಿಮೆಯಿಂದ ಭೂಷಿತವಾಗಿದೆ. ಇದಲ್ಲದೇ ಶೇಷದೇವನು ಸದಾಕಾಲ ಪರಮಾತ್ಮನ ಸನಿಹದಲ್ಲಿಯೇ ಇರುವುದರಿಂದ ಅವನಿಂದ ಸತ್ಯಭೂತವಾದ ತತ್ವಜ್ಞಾನದ ಅರಿವನ್ನು ಪಡೆದಿದ್ದಾನೆ. ಭಾಗವತಾಗತಿ ಕ್ರಮದ ಒಂದು ಪ್ರಕಾರದಲ್ಲಿ ನಾರಾಯಣನು ಬ್ರಹ್ಮದೇವರಿಗೆ ಉಪದೇಶ ಮಾಡುವ ಸಮಯದಲ್ಲಿ ಶೇಷನಿಗೂ ಉಪದೇಶ ಮಾಡಿದನೆಂದು ಹೇಳಲಾಗಿದೆ. ಮುಂದೆ ಶೇಷನಿಂದ ಸನತ್ಕುಮಾರರಿಗೆ, ಅವರಿಂದ ಸಾಂಖ್ಯಾಯನರು, ನಂತರ ಪರಾಶರರು, ಅವರಿಂದ ಮೈತ್ರೇಯರು, ಅವರಿಂದ ವಿದುರನು ಹೀಗೆ ಭಾಗವತವು ಆಸ್ತಿಕ ಜನಸಮುದಾಯಕ್ಕೆ ಪ್ರಾಪ್ತವಾಗುತ್ತದೆ. ಶೇಷದೇವರ ಭಾಷೆಯೆಂದರೆ ನಿಜವಾದ ತತ್ವಜ್ಞಾನದ ತಿರುಳು ಎಂಬುದೇ ತಾತ್ಪರ್ಯ. ಇಂಥ ತತ್ವಜ್ಞಾನದಲ್ಲಿ ಅಪಾರ ಪರಿಣತಿಯನ್ನು ಕೃಷ್ಣನಿಂದ ಅಭಿನ್ನರಾದ ಶ್ರೀವೇದವ್ಯಾಸದೇವರ ಅನುಗ್ರಹದಿಂದ ಶ್ರೀಯೋಗೀಂದ್ರತೀರ್ಥರು ಪಡೆದಿದ್ದಾರೆ. ಅಂಥ ಮೇಧಾವಿಗಳ ಎದುರು ಯಾರು ತಾನೆ ವಾದ ಮಾಡಿ ಗೆಲ್ಲಲು ಇಚ್ಛಿಸಿಯಾರು ? ಯಾರಿಗೂ ಅಂಥ ಇಚ್ಛೆ ಮಾಡುವ ಧೈರ್ಯವೂ ಕೂಡ ಇಲ್ಲವೆಂಬುದು ತಾತ್ಪರ್ಯ. ಪ್ರತಿವಾದಿಗಳ ಜ್ಞಾನವು ಬಹಳ ಸೀಮಿತವಾಗಿದ್ದಾಗಿರುತ್ತದೆ. ಸಚ್ಛಾಸ್ತ್ರಗಳ ಮೂಲ ವಾಕ್ಯಗಳನ್ನು ಅವುಗಳ ನಿಜವಾದ ಅರ್ಥವನ್ನು ಅರಿಯದೇ ಪ್ರತಿವಾದಿಗಳು ಯಾರ್‍ಯಾರೋ ಬರೆದಿದ್ದ ಭಾಷ್ಯ ಟಿಪ್ಪಣಿಗಳನ್ನು ಹಿಡಿದು

Rarest Archiver

ಕೊಂಡು ಅವುಗಳಲ್ಲಿಯ ಕೆಲವು ವಾಕ್ಯಗಳನ್ನು ಕಳುವು ಮಾಡಿಕೊಂಡು ತಮ್ಮ ವಾದಗಳಲ್ಲಿ ಪ್ರಯೋಗಿಸಿ ಅಸಂಬದ್ಧವಾದ ರೀತಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸುತ್ತಿರುತ್ತಾರೆ. ಅವರೆಲ್ಲ ಚೌರ್ಯವೆಂಬ ಅಪರಾಧದಿಂದಾಗಿ ಹಾಗೂ ತಮ್ಮ ಅಸಂಬದ್ಧವಾದ ಪ್ರಲಾಪಗಳಿಂದಾಗಿ ಅಪಹಾಸಕ್ಕೆ ಅರ್ಹರಾಗಿರುತ್ತಾರೆ. ಆದರೆ ಶ್ರೀಯೋಗೀಂದ್ರತೀರ್ಥರು ಮಹಾ ಕಾರುಣಿಕರು. ಅವಹೇಳನೆಗೆ ಯೋಗ್ಯರಾದ ಆ ಪ್ರತಿವಾದಿಗಳನ್ನು ಅವರು ತಿಳಿದುಕೊಂಡಿದ್ದ ತತ್ವವು, ಜ್ಞಾನವು ತಪ್ಪು, ಸಚ್ಛಾಸ್ತ್ರ ಸಮ್ಮತವಲ್ಲ ಎಂದು ತರ್ಕಬದ್ಧವಾದ ರೀತಿಯಲ್ಲಿ ಅವರಿಗೆ ಮನಗಾಣಿಸಿ, ಮೊದಲು ಅವರನ್ನು ಜೋರಾಗಿ ನಿಂದಿಸಿ ನಂತರ ಅವರ ಮೇಲೆ ಕರುಣೆ ತೋರಿಸಿ ಅವರಿಗೆ ಮಾನ ಮರ್ಯಾದೆ ಮಾಡಿ ಅವರು ಯೋಗ್ಯರಾಗಿದ್ದರೆ ಅವರಿಗೆ ನಿಜವಾದ ತತ್ವಜ್ಞಾನದ ಉಪದೇಶ ಮಾಡಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು ಅನುಗ್ರಹಿಸುತ್ತಿದ್ದರು ಎಂದು ತಾತ್ಪರ್ಯ. ಶ್ರೀಯೋಗೀಂದ್ರತೀರ್ಥರು ಉದಾರಹೃದಯಿಗಳೂ, ಜ್ಞಾನಿಗಳೂ, ಕ್ಷಮಾಗುಣವಿಶಿಷ್ಟರಾದ ಮಹಾಯೋಗಿಗಳೂ ಆಗಿದ್ದರು ಎಂಬುದಕ್ಕೆ ಅವರ ಚರಿತ್ರೆಯ ಇಂಥ ಸನ್ನಿವೇಶಗಳೇ ನಿದರ್ಶನಗಳಾಗಿವೆ. ಶ್ರೀರಾಘವೇಂದ್ರಸ್ವಾಮಿಗಳು ಕಾರುಣ್ಯಸಿಂಧುಗಳೆಂದು ವಿದಿತರಾಗಿದ್ದಾರೆ. ಅವರ ವರಕುಮಾರಕರಾದ ಶ್ರೀಯೋಗೀಂದ್ರತೀರ್ಥರು ಮಹಾಕರುಣಾಳುಗಳು ಎಂದು ಬೇರೆ ಹೇಳಬೇಕಾಗಿಲ್ಲ. ಅವರನ್ನು 'ಮುನಿಗಳು' ಎಂದು ಸಂಬೋಧಿಸಿದ್ದೂ ಬಹಳ ಅನ್ವರ್ಥಕವಾಗಿದೆ. ಶ್ರೀಭಗವದ್ಗೀತೆಯಲ್ಲಿ ಯಾರಿಗೆ ಮುನಿಯೆನ್ನಬೇಕೆಂಬ ಬಗ್ಗೆ ಹೀಗೆ ವ್ಯಾಖ್ಯೆ ಕೊಡಲಾಗಿದೆ - ''ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ । ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ'' (ಗೀತಾ, ಅ.2) - ದುಃಖದ ಪ್ರಸಂಗಗಳಲ್ಲಿ ಉದ್ವಿಗ್ನಗೊಳ್ಳದೇ ಅದರಂತೆ ಸುಖದ ಸಮಯದಲ್ಲಿ ಹೆಚ್ಚಿನ ದುರಾಸೆಯ ಬಲಿಗೆ ಬೀಳದೇ ರಾಗ, ಭಯ, ಕ್ರೋಧದ ಪ್ರವೃತ್ತಿಗಳಿಂದ ದೂರವಿದ್ದು ಯಾವಾಗಲೂ ಸಮತೋಲದ ಬುದ್ಧಿಯುಳ್ಳವನಿಗೆ ಮುನಿಯೆಂದು ಕರೆಯಬೇಕು ಎಂದುಹೇಳಲಾಗಿದೆ. ಇಂಥ ಸ್ಥಿರಬುದ್ಧಿಯುಳ್ಳ ಮುನಿಯಾದ ಶ್ರೀಯೋಗೀಂದ್ರತೀರ್ಥರು ವಾದಗಳಲ್ಲಿ ಸೋತು ಹತಕಾಂತಿಗಳಾದ ಪ್ರತಿವಾದಿಗಳನ್ನು ಅತಿಯಾಗಿ ತಾತ್ಸಾರ ಮಾಡದೇ ಮತ್ತೇ ಗೌರವ ಮಾಡಿ ಕಳಿಸುತ್ತಿದ್ದುದು ಸ್ವಾಭಾವಿಕವಾಗಿದೆ. ಇದಲ್ಲದೇ ಮನು - ಜ್ಞಾನೇ ಎಂಬ ಧಾತುವಿನಿಂದ ನಿಷ್ಪನ್ನವಾದ ಮುನಿಯೆಂಬ ಪದದಿಂದ ಜ್ಞಾನಿಗಳು ಎಂಬ ಅರ್ಥವೂ ಬರುತ್ತದೆ. ಗಾರುಡಪುರಾಣದಲ್ಲಿ (226ನೇಯ

Rarest Archiver

ಅಧ್ಯಾಯ) ಮುನಿಧರ್ಮಗಳು ಹೀಗೆ ಪ್ರತಿಪಾದಿಸಲ್ಪಟ್ಟಿವೆ - ''ಮುನಿಭಿಶ್ಚರಿತಾ ಧರ್ಮಾ ಉಕ್ತಾ ವ್ಯಾಸ ಮಯಾ ತವ। ಯೈರ್ವಿಷ್ಣುಸ್ತುಷ್ಯತೇ ದೇವಃ ಸುಖಾದಿಪರಾವಾವಿಕಃ । ತರ್ಪಣೇನ ಚ ಹೋಮೇನ ಸಂಧ್ಯಯಾ ವಂದನೇನ ಚ ।। ಪ್ರಾಪ್ಯತೇ ಭಗವಾನ್ವಿಷ್ಣುರ್ಧರ್ಮಕಾಮಾರ್ಥಮೋಕ್ಷದಃ । ಧರ್ಮೋ ವಿಷ್ಣುರ್ವ್ರತೋ ವಿಷ್ಣುಃ ಪೂಜಾ ವಿಷ್ಣುಸ್ತು ತರ್ಪಣಂ। ಹೋಮಃ ಸಂಧ್ಯಾ ತಥಾ ಧ್ಯಾನಂ ಧಾರಣಾ ಸಕಲಂ ಹರಿಃ'' । - ಸದಾಕಾಲದಲ್ಲಿ ವಿಷ್ಣುವಿನ ಸ್ತುತಿ, ವಂದನ, ಧ್ಯಾನ ಆದಿಗಳಲ್ಲಿ ರತರಾಗಿ ಎಲ್ಲ ವ್ರತಗಳನ್ನೂ ಹೋಮ ತರ್ಪಣಾದಿ ಕರ್ಮಗಳನ್ನೂ ವಿಷ್ಣುಪರವಾಗಿಯೇ ನಡೆಸುವ ಪ್ರವೃತ್ತಿಯುಳ್ಳ ಜ್ಞಾನಸಂಪನ್ನನಾದ ವ್ಯಕ್ತಿಗೆ ಮುನಿಯೆಂದು ಕರೆಯಬೇಕು. ಶ್ರೀಯೋಗೀಂದ್ರತೀರ್ಥರು ಮುನಿಯ ಈ ಎಲ್ಲ ಲಕ್ಷಣಗಳಿಂದ ಭೂಷಿತರಾಗಿದ್ದರೆಂದು ಇಲ್ಲಿ ಸೂಚಿತವಾಗಿದೆ.

ಇಲ್ಲಿ ನಕ್ಷತ್ರಮಾಲಿಕೆಯಲ್ಲಿ 6ನೇಯದಾದ ಆರ್ದ್ರಾನಕ್ಷತ್ರದ ಉಲ್ಲೇಖವಿದೆ. ಸಂಸಾರತಾರಕವಾದ ಕೆಳಗಿನ ಉಪಾಯಗಳನ್ನು ಇಲ್ಲಿ ಸೂಚಿಸಲಾಗಿದೆ.

1) ಇಂದ್ರಾಂಶಸಂಭೂತರೂ, ಶೇಷಾವೇಶವುಳ್ಳವರೂ ಆದ ಶ್ರೀಟೀಕಾರಾಯರ ಶ್ರೀಮನ್ ನ್ಯಾಯಸುಧಾದಿ ಗ್ರಂಥಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುವ ಶ್ರೀಮಧ್ವಸಿದ್ಧಾಂತದಲ್ಲಿ ಸಂಪೂರ್ಣ ಶ್ರದ್ಧೆಯಿಂದ ಪರಿಣಿತಿಯನ್ನು ಪಡೆಯಬೇಕು. ಇದಕ್ಕಾಗಿ ಶ್ರೀರಾಘವೇಂದ್ರತೀರ್ಥರ ಪರಿಮಳಾದಿ ಗ್ರಂಥಗಳ ಅಭ್ಯಾಸವನ್ನು ಶ್ರೀಯೋಗೀಂದ್ರತೀರ್ಥರಿಂದ ಅನುಗ್ರಹ ಪಡೆದು ಮಾಡಬೇಕು.

2) ಮಧ್ವಸಿದ್ಧಾಂತಕ್ಕೆ ವಿರುದ್ಧವಾದ ತತ್ತ್ವಗಳನ್ನು ಪ್ರತಿಪಾದಿಸುವ ಕುತ್ಸಿತವಾದ ಗ್ರಂಥಗಳಲ್ಲಿ ಅಸಂಬದ್ಧವಾದ ಅಪ್ರಲಾಪಗಳೇ ತುಂಬಿರುತ್ತವೆ. ಇಂಥ ಗ್ರಂಥಗಳನ್ನು ಆಶ್ರಯಿಸಿ ಸಾಧನ ಮಾರ್ಗದಲ್ಲಿ ತೊಡಗಿದರೆ ಪಾಪಗಳ ಘಟನೆಯೇ ಉಂಟಾಗುತ್ತದೆ. ಶ್ರೀಜಯತೀರ್ಥರ ಹಾಗೂ ಶ್ರೀರಾಘವೇಂದ್ರತೀರ್ಥರ ಗ್ರಂಥಗಳನ್ನು ಆಶ್ರಯಿಸಿದರೆ ಕುತ್ಸಿತವಾದ ಗ್ರಂಥಗಳಿಂದ ದೂರವಿರುವುದು ಸಾಧ್ಯವಾಗುತ್ತದೆ. ಇದರಿಂದ ಪಾಪವಿಮೋಚನೆಯೂ ಉಂಟಾಗುತ್ತದೆ.

3) ವ್ರತೀ ಶಬ್ದದಿಂದ ಸೂಚಿತವಾದಂತೆ ವ್ರತ ನಿಯಮಗಳಲ್ಲಿ ನಿಷ್ಠೆಯನ್ನು

Rarest Archiver

ಪಡೆದಿರಬೇಕು. ಇದರಂತೆ ಮುನಿ ಶಬ್ದದಿಂದ ಸೂಚಿತವಾಗಿರುವಂತೆ ಸ್ಥಿತಪ್ರಜ್ಞೆ, ಇಂದ್ರಿಯನಿಗ್ರಹ, ವಿಷ್ಣುಪರಾಯಣತೆ, ಸಕಲ ಕರ್ಮಗಳನ್ನೂ ವಿಷ್ಣುಪೂಜೆ ಯೆಂದು ವಿಷ್ಣುವಿನಲ್ಲಿ ಅರ್ಪಿಸುವುದು ಇತ್ಯಾದಿ ಗುಣಗಳಿಂದ ಯುಕ್ತನಾಗಿರುವುದು ಸಾಧನಮಾರ್ಗವಾಗಿದೆ.

ವಿಗ್ರಹವಾಕ್ಯಗಳು– ಅನ್ಯೋಕ್ತಿಶಿಲ್ಪೈಃ - ಅನ್ಯೇಷಾಂ ಉಕ್ತಯಃ, ತಾ ಏವ ಶಿಲ್ಪಾಃ ತೈಃ, **ಚಿರಮುಷಿತೈಃ** - ಚಿರಂ ಮುಷಿತಾಃ ತೈಃ. **ಶೌರಿತಲ್ಪೀಯಜಲ್ಪಪ್ರಾಗಲ್ಭೀಕಲ್ಪಕಾನ್–** ಶೌರೇಃ ತಲ್ಪಃ ಶೌರಿತಲ್ಪಃ ಶೇಷಃ, ತಸ್ಯ ಸಂಬದ್ಧಂ ಜಲ್ಪಂ, ತಸ್ಮಿನ್ ಪ್ರಾಗಲ್ಭೀ, ತಾಂ ಕಲ್ಪಯಂತಿ ಇತಿ ಶೌರಿತಲ್ಪೀಯಜಲ್ಪಪ್ರಾಗಲ್ಭೀಕಲ್ಪಕಾಃ ತಾನ್. **ಚೋರಂಕಾರಂ** - ಚೋರಂ ಕೃತ್ವಾ . **ಆರ್ದ್ರಾಗಸಂ** - ಆರ್ದ್ರಂ ಆಗಃ ಯಸ್ಯ ಸಃ ಆರ್ದ್ರಾಗಾಃ ತಂ. **ಸೂಲ್ಲಾಘಂ** - ಸುತರಾಂ ಉತ್ಕ್ರಾಂತಃ ಅಘಃ ಯಸ್ಮಾತ್ ಸಃ. **ರಾಘವೇಂದ್ರವ್ರತಿಸುತ** - ರಾಘವೇಂದ್ರ ಏವ ವ್ರತೀ ತಸ್ಯ ಸುತಃ ತಸ್ಯ ಸಂಬುದ್ಧಿಃ.

ವ್ಯಾಕರಣ ವಿಚಾರಗಳು– ತಲ್ಪೀಯ - ತಲ್ಪಕ್ಕೆ ಸಂಬಂಧಿಸಿದ, ತಲ್ಪ ಶಬ್ದದ ಮುಂದೆ ಛ ಪ್ರತ್ಯಯವು ಈಯ ಎಂಬ ರೂಪದಿಂದ ಹತ್ತುತ್ತದೆ. ''ವೃದ್ಧಾಚ್ಛಃ'' (1337, 4-2-114) ಎಂಬ ಪಾಣಿನಿಯ ಸೂತ್ರವು ಪ್ರಸಕ್ತವಾಗಿದೆ. ಶಾಲೀಯ ಮಾಲೀಯ ಎಂಬಂತೆ ತಲ್ಪೀಯ. ಚೋರಂಕಾರಂ - ''ಕರ್ಮಣ್ಯಾಕ್ರೋಶೇ ಕೃಞಃ ಖಮುಞ'' (3346, 3-4-25), ಕರ್ಮಣ್ಯುಪಪದೇ ಆಕ್ರೋಶೇ ಗಮ್ಯೇ ಕೃಞಃ ಖಮುಜ ಸ್ಯಾತ್. ಚೋರಂಕಾರಂ ಆಕ್ರೋಶತಿ । ಕರೋತಿರುಚ್ಚಾರಣೇ, ಚೌರಶಬ್ದ ಮುಚ್ಚಾರ್ಯ ಇತ್ಯರ್ಥಃ ಚೋರ ಎಂದು ಶಬ್ದವನ್ನು ಉಚ್ಚರಿಸಿ, ಎಂದು ಅರ್ಥ. ಆವೃಣೀತ - - ಆ ಉಪಸರ್ಗಪೂರ್ವಕವಾದ ವೃ - ವರಣೇ 9ನೇಯ ಗಣ ವೃಣೀತೇ ಆತ್ಮನೇ ಪದ. ವರ್ತಮಾನಕಾಲ ತೃತೀಯ ಪುರುಷ ಏಕವಚನ. ಆವೃಣೀತೇ ಆವೃಣಾತೇ ಆವೃಣತೇ, ಆವೃಣೀಷೇ ಆವೃಣಾಥೇ ಆವೃಣಧ್ವೇ, ಆವೃಣೇ ಆವೃಣೀವಹೇ ಆವೃಣೀಮಹೇ.

ಆರ್ದ್ರಾನಕ್ಷತ್ರದ ಉಲ್ಲೇಖವಿರುವುದರಿಂದ ಮುದ್ರಾಲಂಕಾರವಿದೆ. ಇಲ್ಲಿ ಶ್ರೀಯೋಗೀಂದ್ರತೀರ್ಥರು ತಾವು ಜಯಶಾಲಿಗಳಾಗಿದ್ದೇವೆ, ತಮ್ಮ ತತ್ತ್ವವೇ ಯಥಾರ್ಥವಾದುದು, ಪರವಾದಿಗಳು ಗೊಳ್ಳು ಮಾತಾಡುವವರು, ಅಲ್ಲಲ್ಲಿಂದ

Rarest Archiver

ವಾಕ್ಯಗಳನ್ನು ಚೌರ್ಯ ಮಾಡಿದ ಚೋರರು, ಇತ್ಯಾದಿ ವಿಷಯಗಳನ್ನು ಜಗತ್ತಿಗೆ ತೋರಿಸಿಕೊಡುವುದೇ ಮರ್ಮವು. ಇದನ್ನು ಬಚ್ಚಿಡುವುದಕ್ಕೋ ಏನೋ ಎಂಬಂತೆ ಶ್ರೀಯೋಗೀಂದ್ರತೀರ್ಥರು ಪರವಾದಿಗಳ ಮೇಲೆ ಕರುಣೆಯನ್ನು ತೋರಿಸುವ ಹಾಗೂ ಅವರಿಗೆ ಮರ್ಯಾದೆ ಮಾಡುವ ಕಾರ್ಯವನ್ನು ಮಾಡಿದ್ದಾರೆ. ಅವರ ವಿಶಾಲ ಹೃದಯತೆಯ ಸ್ವಭಾವದಿಂದಾಗಿ ಆ ಮರ್ಮವು ಕರುಣೆಯೆಂಬ ಕಾರ್ಯ ದಿಂದ ತಿರೋಹಿತವಾದಂತಿದೆ. ಕೊನೆಗೆ ಆ ಮರ್ಮವೂ ಅವರ ವಿಶಾಲ ಹೃದಯ ತೆಯೂ ಜಗತ್ತಿಗೆ ವಿದಿತವಾಗಿಯೇ ಬಿಡುತ್ತವೆ. ಇಂಥ ಸನ್ನಿವೇಶಕ್ಕೆ ಯುಕ್ತಿ ಎಂಬ ಅಲಂಕಾರವೆನ್ನುತ್ತಾರೆ. ಅದರ ವ್ಯಾಖ್ಯೆಯನ್ನು ಶ್ರೀಸುಧೀಂದ್ರತೀರ್ಥರು ತಮ್ಮ ಅಲಂಕಾರಮಂಜರೀ ಎಂಬ ಗ್ರಂಥದಲ್ಲಿ ಹೀಗೆ ಕೊಟ್ಟಿದ್ದಾರೆ - ''ಯುಕ್ತಿರ್ಮರ್ಮ ನಿರೋಧಾತುಂ ಕ್ರಿಯಯಾ ಪರವಂಚನಂ । ಗ್ರಂಥಾನ್ ಲಿಖಂತಃ ಶಿಷ್ಯಾಸ್ತೇ ವೀಷ್ಯಾನ್ ಕಾನ್ ವಿತನ್ವತೇ ॥''

ಇದಲ್ಲದೇ ಶೇಷದೇವರ ವಾಕ್ಚಾತುರ್ಯವುಳ್ಳ ಹಾಗೂ ಶೇಷದೇವರಿಗೆ ಸಮ್ಮತವಾದ ತತ್ತ್ವಜ್ಞಾನದಲ್ಲಿ ಪರಿಣತಿಯನ್ನು ಪಡೆದಿರುವ ಶ್ರೀಯೋಗೀಂದ್ರತೀರ್ಥರ ಎದುರು ಯಾರು ಪರವಾದಿಗಳು ಗೆಲ್ಲಬೇಕೆಂದು ಮುಂದೆ ಬರಲು ಸಾಧ್ಯ ? ಯಾರೂ ಮುಂದೆ ಬರಲಾರರು ಎಂಬುದು ಮರ್ಮ. ಇದನ್ನು ಮುಚ್ಚಿಡಲು ಯಾರು ಮುಂದೆ ಬಂದಾರು ಎಂಬ ಪ್ರಶ್ನೆಯ ಉಕ್ತಿಯನ್ನು ಉಪಯೋಗಿಸಿದ್ದಾರೆ. ಇದರಿಂದಲೂ ಯುಕ್ತಿ ಎಂಬ ಅಲಂಕಾರವು ಈ ಶ್ಲೋಕದಲ್ಲಿದೆ ಎಂದು ಸೂಚಿತವಾಗುತ್ತದೆ.

ಢಕ್ಕಾ ಯಸ್ಯಾರಿಧಿಕ್ಕಾರಕರವಬಿರುದಾಡಂಬರಾ ಜೃಂಭತೇ ಗೀ-
ರಿಂದೋರಾಂದೋಲಾಕಾಗ್ರೇ ಸೃಜತಿ
ವಿಮತಶುಗ್ವ್ಯಾಹುಲೀಂ ಕಾಹಲೀ ಚ ॥
ಸೋಜಯ್ಯೋಯಂ ಪುನರ್ಪಸ್ತ್ವಯಮಿತಿ
ಚ ಮಿಥೋ ವಾದಿನೋ ವಾರಯಂತೇ ।
ಕೋನ್ಯೋ ಮಾನ್ಯೋಽಸ್ತಿ ತಸ್ಮಾದ್ಯತಿಕುಲತಿಲಕಾತ್
ಪ್ರೌಢಯೋಗೀಂದ್ರತೀರ್ಥಾತ್ ॥7॥

Rarest Archiver

ಅನ್ವಯಾರ್ಥಃ - ಯಸ್ಯ - ಯಾವ ಯೋಗೀಂದ್ರತೀರ್ಥರ, **ಗೀರಿಂದೋಃ** - ಚಂದ್ರನಂತಿರುವ ಮಾತುಗಳ, **ಢಕ್ಕಾ** - ಢಕ್ಕಾ ಎಂಬ ವಿಶೇಷವಾದ ವಾದ್ಯವು, **ಆಂದೋಲಿಕಾಗ್ರೇ - ಆಂದೋಲಿಕಾ** - ಚಾಮರದ, **ಅಗ್ರೇ** - ಮುಂಭಾಗದಲ್ಲಿ, **ಅರಿಧಿಕ್ಕಾರಕರವಬಿರುದಾಡಂಬರಾ - ಅರಿ** - ಪ್ರತಿವಾದಿಗಳೆಂಬ ಶತ್ರುಗಳನ್ನು, **ಧಿಕ್ಕಾರಕ** - ಧಿಕ್ಕರಿಸುವ, **ರವ** - ಧ್ವನಿಯುಳ್ಳಂಥ, ಅಂದರೆ ಅಂಥ ಧ್ವನಿಯಿಂದ ಕೂಡಿದ, **ಬಿರುದಾಡಂಬರಾ** - ಬಿರುದುಗಳ ಆರ್ಭಟವುಳ್ಳದ್ದಾಗಿ, **ಜೃಂಭತೇ** - ತನ್ನ ಧ್ವನಿಯಿಂದ ಅಭಿವೃದ್ಧಿ ಹೊಂದುತ್ತದೆ. **ಚ** - ಹಾಗೂ, **ಕಾಹಲೀ** - ವಿಜಯೋತ್ಸವ ದಲ್ಲಿಯ ಕಹಳೆಯು, ಅದರ ಧ್ವನಿಯು, **ವಿಮತಶುಗ್ಬಾಹುಲೀಂ - ವಿಮತ** - ಪ್ರತಿವಾದಿಗಳ, **ಶುಗ್** - ಭಯ ಹಾಗೂ ಪರಾಜಯದ ದುಃಖದ, **ಬಾಹುಲೀಂ** - ಬಾಹುಲ್ಯವನ್ನು, **ಸೃಜತಿ** - ಉಂಟುಮಾಡುತ್ತದೆ. **ಸಃ** - ಆ ಪ್ರಸಿದ್ಧರಾದ, **ಅಯಂ** - ಈ ಯೋಗೀಂದ್ರತೀರ್ಥರು, **ಸ್ವಯಂ** - ತಾವೇ, **ಪುನಃ** - ಮತ್ತೆ, **ವಃ** - ನಿಮಗೆ, **ಅಜಯ್ಯಃ** - ''ಗೆಲ್ಲಲ್ಪಡಲು ಅಸಾಧ್ಯರಾದವರು'' ಎಂದು, **ವಾದಿನಃ** - ಪ್ರತಿವಾದಿ ಗಳು, **ಮಿಥಃ** - ತಮ್ಮ ತಮ್ಮಲ್ಲಿ ಪರಸ್ಪರವಾಗಿ, **ವಾರಯಂತೇ** - ವಾದಕ್ಕೆ ಮುಂದಾಗುವ ವಿಷಯದಲ್ಲಿ, **ಸ್ವಯಂ** - ತಮ್ಮನ್ನು ತಾವೇ ತಡೆದುಕೊಳ್ಳುತ್ತಾರೆ. **ತಸ್ಮಾತ್** - ಈ ಕಾರಣದಿಂದ, **ಯತಿಕುಲತಿಲಕಾತ್** - ಯತಿಗಳ ಪಂಗಡಕ್ಕೆ, ತಿಲಕಪ್ರಾಯರಾದ, **ಪ್ರೌಢಯೋಗೀಂದ್ರತೀರ್ಥಾತ್** - ಜ್ಞಾನದಿಂದ ಪ್ರೌಢರಾದ ಯೋಗೀಂದ್ರತೀರ್ಥರಿಗಿಂತ **ಅನ್ಯಃ** - ಬೇರೆಯವರು, **ಮಾನ್ಯಃ** - ಮಾನನೀಯರಾದ ವರು, **ಕಃ** - ಯಾರು, **ಅಸ್ತಿ** - ಇದ್ದಾರೆ ? ಯಾರೂ ಇಲ್ಲವೆಂದು ತಾತ್ಪರ್ಯ.

ತಾತ್ಪರ್ಯಾರ್ಥ : ಅನೇಕ ದೊಡ್ಡ ದೊಡ್ಡ ವಾದಗಳಲ್ಲಿ ವಿಜಯಶಾಲಿಗಳಾದು ದರಿಂದ ಶ್ರೀಯೋಗೀಂದ್ರತೀರ್ಥರಿಗೆ ಅನೇಕ ಬಿರುದು ಬಿನ್ನವತ್ತಳೆಗಳು ಪ್ರಾಪ್ತವಾ ಗಿದ್ದವು. ಇನ್ನೂ ವಾದಕ್ಕೆ ಬಂದಿರದ ಪ್ರತಿವಾದಿಗಳು ಇವರೊಡನೆ ವಾದಕಣಕ್ಕೆ ಇಳಿಯುವ ಬಗ್ಗೆ ಹಿಂದೆ ಮುಂದೆ ನೋಡುತ್ತಿದ್ದರು. ಶ್ರೀಯೋಗೀಂದ್ರರ ಧ್ವನಿ ಯನ್ನು ಕೇಳಿದರೆ, ಅವರ ಬಿರುದಾವಳಿಗಳ ಕೀರ್ತಿಯನ್ನು ಕೇಳಿದರೆ, ಅವರ ಎದೆ ಡಬಡಬಿಸುತ್ತದೆ ಹಾಗೂ ಅವರಿಗೆ ಅತಿಯಾಗಿ ದುಃಖವುಂಟಾಗುತ್ತದೆ. ಶ್ರೀಯೋ ಗೀಂದ್ರತೀರ್ಥರ ವಿಜಯದ ದ್ಯೋತಕವಾದ ಉತ್ಸವವು ನಡೆದಂತೆ ತೋರುತ್ತದೆ. ಕೆಲವರು ಚಾಮರ ಬೀಸುವುದು, ಕೆಲವರು ನಗಾರಿ ಬಾರಿಸುವುದು, ಕೆಲವರು ಕಹಳೆ

Rarest Archiver

ಊದುವುದು ಇತ್ಯಾದಿಯಾಗಿ ಸಂಭ್ರಮವು ವಿಜಯೋತ್ಸವದಲ್ಲಿ ನಡೆದಿರುತ್ತದಷ್ಟೇ. ಪ್ರತಿವಾದಿಗಳ ಆಂತರಿಕವಾದ ದಿಗ್ಭ್ರಮೆಯು ಈ ವಿಜಯೋತ್ಸವವನ್ನು ತಾನಾಗಿಯೇ ನಡೆಸಿಕೊಟ್ಟಂತಾಯಿತು. ಶ್ರೀಯೋಗೀಂದ್ರತೀರ್ಥರಷ್ಟು ಎಲ್ಲರಿಗೂ ಮಾನ್ಯರಾದವರು ಬೇರೆ ಯಾರೂ ಸಿಗುತ್ತಿರಲಿಲ್ಲ.

ಈ ಶ್ಲೋಕದಲ್ಲಿ ಸಂಸಾರಸಾಗರದಿಂದ ತಾರಕವಾಗುವ ಕೆಳಗಿನ ಉಪಾಯಗಳು ಪ್ರತಿಪಾದಿತವಾಗಿವೆ.

1) ಶಾರೀರಕ, ಮಾನಸಿಕ ಹಾಗೂ ವಾಚಿಕ ತಪಸ್ಸನ್ನು ಆಚರಿಸಿ ಅರಿಷಡ್ವರ್ಗಗಳನ್ನು ಧಿಕ್ಕರಿಸಿ ವೇದ ಜ್ಞಾನದ (ಗೀಃ) ಬಲವನ್ನು ಬೆಳೆಸಿಕೊಳ್ಳಬೇಕು.

2) ಮಧ್ವಮತಕ್ಕೆ ವಿರುದ್ಧವಾದ ಮತವನ್ನು ಅವಲಂಬಿಸಿದರೆ ದುಃಖವು ನಿಶ್ಚಿತ ಎಂಬ ಮನವರಿಕೆ ದೃಢವಾಗಿರಬೇಕು. ಹಾಗೂ ಈ ದೃಢವಾದ ಅರಿವನ್ನು ಕಹಳೆಯ ಧ್ವನಿಯಂತೆ ಎರಡೂ ಕೈಗಳನ್ನು ಎತ್ತಿ ಘಂಟಾಘೋಷವಾಗಿ ಸಾರಬೇಕು.

3) ಇದಮದೋ ವಾ ಎಂಬ ಸಂಶಯ ಪ್ರವೃತ್ತಿಯಿಂದ ದೂರವಿರಬೇಕು. ಶ್ರೀಯೋಗೀಂದ್ರತೀರ್ಥರಿಂದ ಬೋಧಿತವಾದ ಶಾಸ್ತ್ರಕ್ಕೆ (ತೀರ್ಥ) ಸಮಾನವಾದ ಬೇರೇ ಶಾಸ್ತ್ರವಿಲ್ಲ. ಈ ಶಾಸ್ತ್ರವು ಸಕಲ ಯತಿಕುಲಕ್ಕೆ ತಿಲಕಪ್ರಾಯವಾಗಿದೆ. ಈ ಶಾಸ್ತ್ರವನ್ನೇ ಮಾನ್ಯಮಾಡಿ ಅದರಲ್ಲಿ ಶ್ರದ್ಧೆಯಿಂದ ಪರಿಣತಿಯನ್ನು ಪಡೆಯಬೇಕು.
ವಿಗ್ರಹವಾಕ್ಯಗಳು– ಅರಿಧಿಕ್ಕಾರಕರವಬಿರುದಾಡಂಬರಾ – ಅರೀಣಾಂ ಧಿಕ್ಕಾರಕಃ ಅರಿಧಿಕ್ಕಾರಕಃ ತಾದೃಶಃ ರವಃ ಯಸ್ಮಿನ್ ಸಃ, **ಬಿರುದಾನಾಂ ಆಡಂಬರಃ** – ಬಿರುದಾಡಂಬರಃ. ಅರಿಧಿಕ್ಕಾರಕರವಃ ಬಿರುದಾಡಂಬರಃ ಯಸ್ಯಾಂ ಸಾ. ತಾದೃಶೀ ಢಕ್ಕಾ. **ಗೀರಿಂದೋಃ** – ಗೀಃ ಇಂದುಃ ಇವ ತಸ್ಯ. **ಆಂದೋಲಿಕಾಗ್ರೇ** – ಆಂದೋಲಿಕಾಯಾಃ ಅಗ್ರಃ ತಸ್ಮಿನ್, **ವಿಮತಶುಗ್ಬಾಹುಲೀಂ** – ಶುಚಃ ಬಾಹುಲೀ ಶುಗ್ಬಾಹುಲೀ. ವಿಮತೆ ಅನುಭೂಯಮಾನಾ ಶುಗ್ಬಾಹುಲೀ ತಾಂ, **ಯತಿಕುಲತಿಲಕಾತ್** – ಯತೀನಾಂ ಕುಲಂ – ಯತಿಕುಲಂ ತಸ್ಯ ತಿಲಕಂ ತಸ್ಮಾತ್, **ಪ್ರೌಢಯೋಗೀಂದ್ರತೀರ್ಥಾತ್** – ಪ್ರೌಢಶ್ಚಾಸೌ ಯೋಗೀಂದ್ರತೀರ್ಥಶ್ಚ ತಸ್ಮಾತ್,

Rarest Archiver

ಕೋಶಗಳು– ''ಢಕ್ಕಾ -ಸ್ಯಾದ್ಯಶಃ ಪಟಹೋ ಢಕ್ಕಾ'' (ಅಮರ, 1-7-6) ''ಢಕ್'' ಇತಿ ಕಾಯತಿ ಇತಿ ಢಕ್ಕಾ, ಕೈ - ಶಬ್ದೇ, ಯಶೋರ್ಥಃ ಪಟಹಃ - ಯಶಸ್ಸನ್ನು ಘೋಷಿಸಲು ಮಾಡುವ ಧ್ವನಿಯು. ರವ - ''ಶಬ್ದೇ ನಿನಾದ ನನದ ಧ್ವನಿಧ್ವಾನರವಸ್ವನಾಃ । ಸ್ವಾನ ನಿರ್ಘೋಷ ನಿರ್ಹ್ರಾದ ನಾದ ನಿಸ್ವಾನ ನಿಸ್ವನಾಃ । ಅರಾವಾರಾವಸಂರಾವ ವಿರಾವಾಃ''. (ಅಮರ, 1-6-22). ತಿಲಕ - ''ತಿಲಕೋ - ದ್ರುಮರೋಗಾಶ್ವ ಭೇದೇಷು ತಿಲಕಾಲಕೇ । ಕ್ಲೀಬಂ ಸೌವರ್ಚ ಲಕ್ಲೋಮ್ನೋರ್ನ ಸ್ತ್ರಿಯಾಂ ತು ವಿಶೇಷಕೇ'' ಇತಿ ವಿಶ್ವಮೇದಿನ್ಯೌ. ತೀರ್ಥ - ''ತೀರ್ಥಶಾಸ್ತ್ರಾಧ್ವರ ಕ್ಷೇತ್ರ ಉಪಾಯನರಜಃಸು ಚ । ಅವತಾರರ್ಷಿಜುಷ್ಟಾಂಬು ಪಾತ್ರೋಪಾಧ್ಯಾಯ ಮಂತ್ರಿಷು,'' ಇತಿ ಮೇದಿನೀ । (72/7).

ವ್ಯಾಕರಣ ವಿಚಾರಗಳು– ವಿಜೃಂಭತೇ ಜೃಂಭಗಾತ್ರವಿನಾಮೇ ಭುವಾದಿಗಣ ಆತ್ಮನೇಪದ. ತೃತೀಯ ಪುರುಷ ಏಕವಚನ, ಜೃಂಭತೇ ಜೃಂಭೇತೇ ಜೃಂಭಂತೇ, ಜೃಂಭಸೇ ಜೃಂಭೇಥೇ ಜೃಂಭಧ್ವೇ, ಜೃಂಭೇ ಜೃಂಭಾವಹೇ ಜೃಂಭಾಮಹೇ. ಸೃಜತಿ - ಸೃಜ - ವಿಸರ್ಗೇ ಆರನೆಯ ಗಣ ಪರಸ್ಮೈಪದ. ಸೃಜತಿ ಸೃಜತಃ ಸೃಜಂತಿ, ಸೃಜಸಿ ಸೃಜಥಃ ಸೃಜಥ, ಸೃಜಾಮಿ ಸೃಜಾವಃ ಸೃಜಾಮಃ. ವಾರಯಂತೇ - ವೃ - ವರಣೇ, ಪಂಚಮಗಣ ಉಭಯಪದೀ, ವೃಣೋತಿ, ವೃಣುತೇ, ಣಿಚ್ ರೂಪ ದಲ್ಲಿ ವಾರಯತಿ - ವಾರಯತೇ ಎಂದಾಗುತ್ತದೆ. ವಾರಯತೆ ವಾರಯೇತೇ ವಾರಯಂತೇ.

ಇಲ್ಲಿ ಉದಾತ್ತ ಹಾಗೂ ಮುದ್ರಾ ಎಂಬ ಅಲಂಕಾರಗಳ ಸಂಮಿಶ್ರಣವಿದೆ. ''ಉದಾತ್ತವೃದ್ಧಿರ್ವೋದಾತ್ತಚರಿತಂ ವಾನ್ಯಬೋಧಕಂ । ರಾಜನ್ಯರಾಜಕೋಟೀರ ಮಣಿನೀರಾಜಿತೋ ಮುನಿಃ'' ಎಂದು ಅಲಂಕಾರಮಂಜರಿಯಲ್ಲಿ ಶ್ರೀಸುಧೀಂದ್ರತೀರ್ಥರು ವ್ಯಾಖ್ಯಾನಿಸಿದ್ದಾರೆ.

ತನ್ವಂತ್ಯಾಜಿಂ ಜಿಧಾತೋಸ್ತ್ವಯಿ ನಿಜವಸತಿಂ
ಕರ್ತೃತಾಂ ವಿಸ್ಮೃತಾಂ ಯೇ ।
ಹರ್ತುಂ ಶಾಸ್ತ್ರಾಭಿಮಾನಗ್ರಹಭೃಶ-
ವಿವಶಾಸ್ಸೂರಯೋ ವೈರಯೋಗಾತ್ ।

Rarest Archiver

ತೇಷಾಮೇಷಾ ಮನೀಷಾ ವಿಪದಿ ಸಪದಿ
ತತ್‌ಕರ್ಮತಾಂ ನಿರ್ಮಮಾಣ ।
ಯೋಗೀಂದ್ರಪ್ರಾಜ್ಞಚಂದ್ರ ತ್ವಯಿ
ಮತಿತತಿಪುಷ್ಯಸ್ತಿ ಸೌವಸ್ತಿಕೀ ಸಾ ।।8।।

ಅನ್ವಯಾರ್ಥ: – **ಹೇ ಯೋಗೀಂದ್ರಪ್ರಾಜ್ಞಚಂದ್ರ** – ಯೋಗೀಂದ್ರತೀರ್ಥರೆಂಬ ಜ್ಞಾನಿಗಳ ಚಂದ್ರನೇ, **ಶಾಸ್ತ್ರಾಭಿಮಾನಗ್ರಹಭೃಶವಿವಶಾಃ** – **ಶಾಸ್ತ್ರಾಭಿಮಾನ** – ತಮ್ಮ ತಮ್ಮದೇ ಆದ ಶಾಸ್ತ್ರದ ಮೇಲಿನ ಅಭಿಮಾನವೆಂಬ, **ಗ್ರಹ** – ಪಿಶಾಚದಿಂದ, **ಭೃಶ** – ಅತ್ಯಂತವಾಗಿ, **ವಿವಶಾಃ** – ಪೀಡಿತರಾಗಿ ಪರಾಧೀನರಾಗಿರುವ, **ಯೇ** – ಯಾವ, **ಸೂರಯಃ** – ಪ್ರತಿವಾದಿ ಪಂಡಿತರುಗಳು, **ತ್ವಯಿ** – ನಿಮ್ಮಲ್ಲಿ, **ನಿಜವಸತಿಂ** – ಸ್ಥಿರವಾಗಿ ಸ್ವಂತವಾಗಿ ವಾಸ ಮಾಡಿರುವ, **ವಿಸ್ಮೃತಾಂ** – ಬಹಳ ವಿಪುಲವಾಗಿ ಬಹುಮುಖೀನವಾಗಿರುವ, **ಜಿಧಾತೋಃ** – **ಜಿ** – **ಜಯೇ ಅಭಿಭವೇ ಚ** ಎಂಬ ಧಾತುವಿಗೆ, **ಕರ್ತೃತಾಂ** – ಕರ್ತೃತ್ವವನ್ನು – ಕರ್ತೃಕಾರಕವನ್ನು, **ವೈರಯೋಗಾತ್** – ನಿಮ್ಮ ಮೇಲಿನ ವೈರದ ಪ್ರವೃತ್ತಿಯಿಂದಾಗಿ, **ಹರ್ತುಂ** – ಅಪಹರಣ ಮಾಡಲು, **ಆಜಿಂ** – ವಾದಯುದ್ಧವನ್ನು, **ತನ್ವಂತಿ** – ಹೂಡುತ್ತಾರೋ, **ತೇಷಾಂ** – ಅಂಥ ದುರ್ಬುದ್ಧಿಗಳ, **ಏಷಾ** – ನಿಮ್ಮನ್ನು ಗೆಲ್ಲಬೇಕೆಂಬ ಈ, **ಮನೀಷಾ** – ಬುದ್ಧಿಯು, **ವಿಪದಿ** – ವಾದದ ಸಂಭ್ರಮದಲ್ಲಿ ಅಂದರೆ ಗೊಂದಲದಲ್ಲಿ ಹಾಗೂ ಸಂಕಟದಲ್ಲಿ ಸಿಲುಕಿ, **ತತ್ಕರ್ಮತಾಂ** – ಆ, 'ಜಿ' – ಧಾತುವಿನ ಕರ್ಮತ್ವವನ್ನು, ಕರ್ಮಕಾರಕವನ್ನು, **ನಿರ್ಮಮಾಣ** – ಆ ದುರ್ವಾದಿಗಳಲ್ಲಿ ಹುಟ್ಟಿಸಿತು. **ಸಾ** – **ಆ** 'ಜಿ' ಧಾತುವಿನ ಕರ್ತೃತ್ವವು ಮಾತ್ರ, **ಮತಿತತಿಪುಷಿ** – ಸದ್‌ಬುದ್ಧಿಯ ಪರಂಪರೆಯನ್ನು ಸ್ಥಿರವಾಗಿ ಸ್ಥಾಪಿಸಿ ಬೆಳೆಸಿ ಪೋಷಿಸುವವರಾದ, **ತ್ವಯಿ** – ನಿಮ್ಮಲ್ಲಿ, **ಸೌವಸ್ತಿಕೀ** – ಒಳ್ಳೇ ಕ್ಷೇಮದಿಂದ ಸುರಕ್ಷಿತವಾಗಿ, **ಅಸ್ತಿ** – ವಾಸಮಾಡಿಕೊಂಡು ಇದ್ದೇ ಇದೆ.

ತಾತ್ಪರ್ಯಾರ್ಥ : ಜೀ – ಎಂಬ ಧಾತುವಿಗೆ ಎರಡು ಅರ್ಥಗಳಿವೆ. ಉತ್ಕರ್ಷ ಹೊಂದುವುದು ಮತ್ತು ಜಯಿಸುವುದು ಅಥವಾ ಸೋಲಿಸುವುದು ''ಜಯೇರ್ಜಯಾಭಿಭವಯೋಃ ಆದ್ಯೇರ್ಥೇ ಅಸಾವಕರ್ಮಕಃ । ಉತ್ಕರ್ಷಪ್ರಾಪ್ತಿಃ ಆದ್ಯೋರ್ಥೋ ದ್ವಿತೀಯೇ ಅರ್ಥೇ ಸಕರ್ಮಕಃ'' ಎಂದು ಟೀಕಾರಾಯರು ಶ್ರೀಮಾಯಾವಾದಖಂಡನದ ಟೀಕೆಯಲ್ಲಿ ಹೇಳಿದ್ದಾರೆ. ಉತ್ಕರ್ಷ ಹೊಂದುವುದು

Rarest Archiver

ಎಂಬ ಅರ್ಥದಲ್ಲಿ ಧಾತುವು ಅಕರ್ಮಕವಾಗಿದ್ದು, ಗೆಲ್ಲುವುದು ಅಥವಾ ಸೋಲಿಸುವುದು ಎಂಬ ಅರ್ಥದಲ್ಲಿ ಸಕರ್ಮಕವಾಗಿದೆ. ರಾಮನು ರಾವಣನನ್ನು ಗೆದ್ದನು, ಎಂಬ ವಾಕ್ಯದಲ್ಲಿ ರಾಮನು ಎಂಬುದು ಕರ್ತೃಕಾರಕವು. ರಾವಣನನ್ನು ಎಂಬ ಪದದಲ್ಲಿ ಕರ್ಮಕಾರಕವಿದೆ. ಇದರಂತೆ ಶ್ರೀಯೋಗೀಂದ್ರತೀರ್ಥರು ಪ್ರತಿವಾದಿ ಪಂಡಿತರನ್ನು ಸೋಲಿಸಿದರು (ಗೆದ್ದರು) ಎಂಬ ವಾಕ್ಯದಲ್ಲಿ 'ಶ್ರೀಯೋಗೀಂದ್ರತೀರ್ಥರು' ಎಂಬ ಪದದಲ್ಲಿ ಕರ್ತೃಕಾರಕವಿದೆ. 'ಪ್ರತಿವಾದಿಪಂಡಿತರನ್ನು' ಎಂಬಲ್ಲಿ ಕರ್ಮಕಾರಕವಿದೆ. ಈ ವಿಷಯವನ್ನು ಕಾವ್ಯದ ಪದ್ಧತಿಯಲ್ಲಿ ಆಲಂಕಾರಿಕವಾಗಿ ಬಹು ರಮಣೀಯವಾಗಿ ಶ್ರೀಸುಮತೀಂದ್ರತೀರ್ಥರು ಪ್ರತಿಪಾದಿಸುತ್ತಾರೆ. ಶ್ರೀಯೋಗೀಂದ್ರತೀರ್ಥರು ಯಾವಾಗಲೂ ಜಯಶಾಲಿಗಳಾಗುತ್ತಿದ್ದುದರಿಂದ ಅವರಲ್ಲಿ 'ಜಿ' ಧಾತುವಿನ ಕರ್ತೃಕಾರಕವು ಯಾವಾಗಲೂ ಸ್ಥಿರವಾಗಿ ನಿಂತುಕೊಂಡಿದೆ. ಪಾಂಡಿತ್ಯ, ಗಾಂಭೀರ್ಯ, ಔದಾರ್ಯ, ಯೋಗಶಕ್ತಿ, ಭೂತದಯಾ, ಕ್ಷಮಾ, ಇಂದ್ರಿಯನಿಗ್ರಹ, ಸತ್ಯಶೀಲತೆ, ಇತ್ಯಾದಿ ಗುಣಗಳಲ್ಲಿಯೂ ಶ್ರೀಯೋಗೀಂದ್ರತೀರ್ಥರು ಪ್ರತಿವಾದಿ ಪಂಡಿತರಿಗಿಂತ ಉತ್ತಮರಾಗಿದ್ದಾರೆ. ಅವರನ್ನು ಗೆಲ್ಲುತ್ತಾರೆ ಎಂದು ತಾತ್ಪರ್ಯ. ಆದ್ದರಿಂದ ಶ್ರೀಯೋಗೀಂದ್ರತೀರ್ಥರಲ್ಲಿ ಕರ್ತೃಕಾರಕವು ವಿಪುಲವಾಗಿ ಬಹುಮುಖೀನವಾಗಿದೆ. ಪ್ರತಿವಾದಿಪಂಡಿತರು ತಮ್ಮ ದುರಭಿಮಾನದ ಕಟ್ಟಿನಲ್ಲಿ ಸಿಕ್ಕಿಬಿದ್ದು ತಮ್ಮ ಯೋಗ್ಯತೆಯ ಸೀಮೆಯನ್ನು ಅರಿಯದೇ ಶ್ರೀಯೋಗೀಂದ್ರತೀರ್ಥರಲ್ಲಿಯ ಜೀ - ಧಾತುವಿನ ಕರ್ತೃತ್ವವನ್ನು ಅಪಹರಿಸಲು ಅನೇಕ ರೀತಿಗಳಿಂದ ಪ್ರಯತ್ನಿಸುತ್ತಾರೆ. ಅಂದರೆ ತಾವು ಜಯಿಸಿದ್ದೇವೆ ಎಂದು ಸ್ಥಾಪಿಸಲು ಗೊಂದಲ ಮಾಡುತ್ತಾರೆ. ಆದರೆ ಅರ್ಹತೆಯಿಲ್ಲದವರು ತಮ್ಮ ಅರ್ಹತೆಯನ್ನು ಮೀರಿ ಏನಾದರೂ ಬಯಸಿದರೆ ಏನಾಗುತ್ತದೆ ? ಎಲ್ಲವೂ ವಿಭ್ರಮವಾಗಿ ವಿಪರೀತ ಪರಿಣಾಮಗಳಾಗುತ್ತವೆ. ಪ್ರತಿವಾದಿಗಳು ಜೀ - ಧಾತುವಿನ ಕರ್ತೃತ್ವವನ್ನು ಪಡೆಯುವುದನ್ನು ಬಿಟ್ಟು ಕರ್ಮತ್ವವನ್ನು ಪಡೆಯುತ್ತಾರೆ. ಅಂದರೆ ಶ್ರೀಯೋಗೀಂದ್ರತೀರ್ಥರು ಪ್ರತಿವಾದಿಗಳನ್ನು ಗೆಲ್ಲುತ್ತಾರೆ ಎಂಬುದು ತಾತ್ಪರ್ಯ. ಹೀಗೆ ಯಾವಾಗಲೂ ವಿಜಯಶಾಲಿಗಳಾಗಿರುವುದಕ್ಕೆ ಮುಖ್ಯವಾದ ಕಾರಣಗಳನ್ನು ''ಯೋಗೀಂದ್ರಪ್ರಾಜ್ಞಚಂದ್ರ'' ಹಾಗೂ ''ಮತಿತತಿಪುಷಿ'' ಎಂಬ ಎರಡು ಹೇತುಗರ್ಭ ವಿಶೇಷಣಗಳಲ್ಲಿ ಸೂಚಿಸುತ್ತಾರೆ. ಶ್ರೀಯೋಗೀಂದ್ರರು ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಇತ್ಯಾದಿ ಯೋಗಗಳ ಸಿದ್ಧಿಯನ್ನು ಪಡೆದವರಲ್ಲಿ

Rarest Archiver

ಶ್ರೇಷ್ಠರಾದವರು; ಅವರು ಮೇಧಾವಿಗಳಲ್ಲಿ ಅಗ್ರಗಣ್ಯರು ಹಾಗೂ ತಮ್ಮ ಪಾಠಪ್ರವಚನಾದಿಗಳಿಂದ, ಗ್ರಂಥರಚನೆಯಿಂದ ಸಜ್ಜನರಲ್ಲಿ ಸುಜ್ಞಾನವನ್ನು ಬೋಧಿಸಿ ಅದನ್ನು ಪೋಷಿಸುವವರು. ಇವೆಲ್ಲ ಕಾರಣಗಳಿಂದ ವಿಜಯಶ್ರೀಯು ಸ್ಥಿರವಾಗಿ ಅವರನ್ನೇ ಆಶ್ರಯಿಸಿರುತ್ತದೆ.

ಈ ಶ್ಲೋಕದಲ್ಲಿ ಸಂಸಾರ ತಾರಕವಾದ ಈ ಕೆಳಗಿನ ಉಪಾಯಗಳನ್ನು ಬೋಧಿಸಲಾಗಿದೆ.

1) ತನ್ನ ಅರ್ಹತೆಯನ್ನು ಮೀರಿ ಹೆಚ್ಚಿನದನ್ನು ಬಯಸಬಾರದು. ಪ್ರತಿಯೊಬ್ಬ ಜೀವನಿಗೆ ಅವನವನ ಸ್ವರೂಪ ಯೋಗ್ಯತೆ (ಹಠಾಖ್ಯಯೋಗ್ಯತೆ) ಎಂಬುದು ನಿಶ್ಚಿತವಾಗಿರುತ್ತದೆ. ತನ್ನ ಯೋಗ್ಯತೆ ಏನೆಂಬುದು ಯಾರಿಗೂ ತಿಳಿದಿರುವುದಿಲ್ಲ ನಿಜ. ಆದರೆ ತನ್ನ ಯೋಗ್ಯತೆಯ ಎಲ್ಲೆಯನ್ನು ದಾಟದೆ ನಡೆಯಲು ಅನುಕೂಲವಾದ ಮಾರ್ಗಗಳು ಉಪಾಯಗಳು ಸಾಕಷ್ಟಿವೆ. ವಿನಯ, ಹರಿಗುರುಗಳಲ್ಲಿ ಶ್ರದ್ಧೆ, ಇಂದ್ರಿಯ ಮನಸ್ಸುಗಳ ನಿಗ್ರಹ ಇತ್ಯಾದಿಗಳು. ಇವುಗಳನ್ನು ಬೆಳೆಸಿಕೊಳ್ಳಬೇಕು.

2) ಗುರುಗಳು ಜ್ಞಾನಿಗಳು ಎಂಬವರ ಬಗ್ಗೆ ದ್ರೋಹ ಬಗೆಯಬಾರದು. ಅವರಲ್ಲಿ ವೈರಭಾವವನ್ನು ತಾಳಬಾರದು. ದುರಹಂಕಾರವನ್ನು ತ್ಯಜಿಸಬೇಕು.

3) ಸಂಸಾರದ ವಿಭ್ರಮವನ್ನು ಜಯಿಸಬೇಕಾದರೆ, ಶ್ರೀಯೋಗೀಂದ್ರತೀರ್ಥರು ಉಪದೇಶಿಸುವ ತತ್ವಗಳನ್ನು ಜ್ಞಾನದ ಪರಂಪರೆಯನ್ನು ತಮ್ಮಲ್ಲಿ ಬೆಳೆಸಿಕೊಂಡು ಬರಬೇಕು.

ವಿಗ್ರಹವಾಕ್ಯಗಳು– ನಿಜವಸತಿಂ – ನಿಜಾ ಚ ಸಾ ವಸತಿಶ್ಚ ನಿಜವಸತಿಃ. ತಾಂ **। ಶಾಸ್ತ್ರಾಭಿಮಾನಗ್ರಹಭೃಶವಿವಶಾಃ** – ಶಾಸ್ತ್ರೇಷು ಅಭಿಮಾನಃ ಶಾಸ್ತ್ರಾಭಿಮಾನಃ ಸ ಏವ ಗ್ರಹಃ ತೇನ ಭೃಶಂ ವಿವಶಾಃ. **ವೈರಯೋಗಾತ್** – ವೈರಸ್ಯ ಯೋಗಃ ತಸ್ಮಾತ್. **ಯೋಗೀಂದ್ರಪ್ರಾಜ್ಞಚಂದ್ರ** – ಪ್ರಾಜ್ಞೇಷು ಚಂದ್ರಃ ಇವ. ಪ್ರಾಜ್ಞಚಂದ್ರಃ, ಯೋಗೀಂದ್ರ ಇತಿ ಪ್ರಾಜ್ಞಚಂದ್ರಃ ತತ್ಸಂಬುದ್ಧಿಃ. **ಮತಿತತಿಪುಷಿ** – ಮತೇಃ ತತಿಃ, ಮತಿತತಿಃ, ತಾಂ ಪುಷ್ಣಾತಿ ಇತಿ ಮತಿತತಿಪುಷ್ ತಸ್ಮಿನ್.

Rarest Archiver

ಕೋಶಗಳು– ಆಜಿಃ –''ಅಥಾಜಿಃ ಸ್ತ್ರೀ - ಸಮಭೂಮೌ ಚ ಸಂಗ್ರಾಮೇ'' ಇತಿ ಮೇದಿನೀ (30/3). ಗ್ರಹ - ''ಗ್ರಹೋನುಗ್ರಹ ನಿರ್ಭಂಧಗ್ರಹಣೇಷು ರಣೋದ್ಯಮೇ । ಸೂರ್ಯಾದೌ ಪೂತನಾದೌ ಚ ಸೈಂಹಿಕೇಯೋಪರಾಗಯೋಃ'' ಇತಿ ವಿಶ್ವಃ. ಪ್ರಾಜ್ಞಃ - ''ವಿದ್ವಾನ್ ವಿಪಶ್ಚಿತ್ ದೋಷಜ್ಞಃ ಸನ್ಸುಧೀಃ ಕೋವಿದೋ ಬುಧಃ । ಧೀರೋ ಮನೀಷೀ ಜ್ಞಃ ಪ್ರಾಜ್ಞಃ ಸಂಖ್ಯಾವಾನ್ ಪಂಡಿತಃ ಕವಿಃ । ಧೀಮಾನ್ ಸೂರಿಃ ಕೃತೀ ಕೃಷ್ಟಿಃ ಲಬ್ಧವರ್ಣೋ ವಿಚಕ್ಷಣಃ । ದೂರದರ್ಶೀ ದೀರ್ಘದರ್ಶೀ'' ಇತ್ಯಮರಃ (2-7-516). ಮನೀಷಾ - ''ಬುದ್ಧಿರ್ಮನೀಷಾ ಧಿಷಣಾ ಧೀಃ ಪ್ರಜ್ಞಾಶೇಮುಷೀ ಮತಿಃ ।''. ಮನಸಃ ಈಷಾ ಮನೀಷಾ ।

ವ್ಯಾಕರಣ ವಿಚಾರಗಳು– **ತನ್ವಂತಿ** - **ತನು** - ವಿಸ್ತಾರೇ 8ನೇಯ ಗಣ ಉಭಯಪದಿ, **ತನೋತಿ ತನುತೇ** - ವರ್ತಮಾನಕಾಲ, ತೃತೀಯ ಪುರುಷ ಬಹುವಚನ, **ತನೋಮಿ ತನುವಃ(ತನ್ವಃ)** ತನುಮಃ (ತನ್ಮಃ), ತನೋಷಿ ತನುಥಃ ತನುಥ, ತನೋತಿ ತನುತಃ ತನ್ವಂತಿ. **ನಿರ್ಮಮಾಣ** - ನಿಸ್ ಉಪಸರ್ಗಪೂರ್ವಕವಾದ, **ಮಾ** - ಮಾನೇ ನಾಲ್ಕನೆಯ ಗಣ ಆತ್ಮನೇ ಪದ. ಭೂತಕಾಲದ ರೂಪ.

ಇಲ್ಲಿ ಪುಷ್ಯ ನಕ್ಷತ್ರದ ಪ್ರಯೋಗವಿರುವುದರಿಂದ ಮುದ್ರಾಲಂಕಾರವಿದೆ. ಇದಲ್ಲದೇ, ಜಯಿಸಬೇಕೆಂದು ಹೊರಟ ಪ್ರತಿವಾದಿಗಳು ತಾವೇ ಜಿತರಾದರು ಎಂದು ಹೇಳಿರುವ ಸಂದರ್ಭದಲ್ಲಿ ವಿಷಮಾಲಂಕಾರವೆಂಬ ಅಲಂಕಾರವಿದೆ. ಇದನ್ನು ಶ್ರೀಸುಧೀಂದ್ರತೀರ್ಥರು ತಮ್ಮ ಅಲಂಕಾರ ಮಂಜರಿಯಲ್ಲಿ ಹೀಗೆ ವ್ಯಾಖ್ಯಾಯಿಸಿದ್ದಾರೆ.'' ''ವಿಷಮಂ ತತ್ತ್ರಿಧಾ ಅನಿಷ್ಟಾವಾಪ್ತಿರಿಷ್ಟಸಮುದ್ಯಮೇ । ವಿರೂಪಕಾರ್ಯಜನನಂ ವಿರೂಪದ್ವಯಸಂಗತಿಃ । ಜಿಗೀಷವೋ ಜಿತಾಃ ಪ್ರಾಪ್ಯ ಜಯೀಂದ್ರಂ ಪಾಂಡುರಾನನೈಃ । ಸ್ತುವಂತಿ ಕೀರ್ತಿಮಸಿತಾಂ ಬುಧಾಃ ಕ್ವೈತೇ ಕ್ವ ತಜ್ಜಯಃ ॥''

ತುಂಗಾಂ ತೇ ಮೋಷಿತುಂ ಗಾಂ ಸದ ಉಪಜಿಹತೇ
ಯೇ ಜಹತ್ಯೇವ ತೇ ಸ್ವಾಂ ।
ರಾಗಾದಾಗಾಂಸಿ ಸತ್ಸು ಪ್ರಚರತಿ ಭುವಿ ಯೋ
ಹೀಯತೇ ಹೀಯತೈಷಃ ॥
ಗೌರ್ವಾಸಿಷ್ಠೀ ವಿನಿಷ್ಠೀವತಿ ಕುಶಿಕಸುತಂ

Rarest Archiver

ಹಾನಿಕೃತ್ಸೈನಿಕಾನಾ-
ಮೇಷಾಶ್ಲೇಷಾಯ ಯೋಗಿಪ್ರವರ ತವ
ಸಮುತ್ಕಂಠತೇ ಸೋಪಕಂಠಮ್ ।।9।।

ಅನ್ವಯಾರ್ಥಃ - ಹೇ ಯೋಗಿಪ್ರವರ - ಹೇ ಯೋಗಿಗಳಲ್ಲಿ ಶ್ರೇಷ್ಠರಾದ ಯೋಗೀಂದ್ರತೀರ್ಥರೇ, **ಯೇ ವಿದ್ವಾಂಸಃ** - ಯಾವ ವಿದ್ವಾಂಸರುಗಳು, **ತೇ** - ನಿಮ್ಮ, **ತುಂಗಾಂ** - ಶಬ್ದ ಗಾಂಭೀರ್ಯ, ಅರ್ಥಗೌರವಗಳಿಂದ ಉತ್ಕೃಷ್ಟವಾದ, **ಗಾಂ** - ಮಾತನ್ನು, **ಮೋಷಿತುಂ** - ಅಪಹರಣ ಮಾಡಿ ಇಲ್ಲದಂತೆ ಮಾಡಲು, **ಸದಃ** - ಸಭೆಗೆ, **ಉಪಜಿಹತೇ** - ಪ್ರಾಪ್ತರಾಗುತ್ತಾರೋ, **ತೇ** - ಅಂಥವರು, **ಸ್ವಾಂ ಏವ** - ತಮ್ಮದೇ, **ಗಾಂ** - ವಚನವನ್ನು, **ಜಹತಿ** - ಕಳೆದುಕೊಳ್ಳುತ್ತಾರೆ, **ಭುವಿ** - ಈ ಜಗತ್ತಿನಲ್ಲಿ, **ಯಃ** - ಯಾವ ಪುರುಷನು, **ರಾಗಾತ್** - ತನ್ನ ಸ್ವೇಚ್ಛೆಯಿಂದ, ಅಭಿಮಾನ ದ್ವೇಷಾದಿ ದೋಷಗಳ ನಿಮಿತ್ತದಿಂದ, **ಸತ್ಸು** - ಸಜ್ಜನರಲ್ಲಿ, **ಆಗಾಂಸಿ** - ಅಪರಾಧಗಳನ್ನು, **ಪ್ರಚರತಿ** - ಎಸಗುತ್ತಾನೋ, **ಏಷಃ** - ಅಂಥವನು, **ಇಯತಾ** - ಇಷ್ಟು ಅಪರಾಧ ಮಾಡುವ ಮಾತ್ರದಿಂದ, **ಹೀಯತೆ** - ಸಮಾಜದಿಂದ ತ್ಯಜಿಸಲ್ಪಡುತ್ತಾನೆ. **ಹಿ** - ಇದು ಪ್ರಸಿದ್ಧವಾದುದು, **(ಯಥಾ)** - ಹೇಗೆ, **ವಾಸಿಷ್ಠೀ** - ವಸಿಷ್ಠ ಋಷಿಗಳ ಆಶ್ರಮದಲ್ಲಿರುವ, **ಗೌಃ** - ನಂದಿನೀ ಎಂಬ ಆಕಳವು, **ಸೈನಿಕಾನಾಂ** - ವಿಶ್ವಾಮಿತ್ರನ ಸೈನಿಕರಿಗೆ, **ಹಾನಿಕೃತ್** - ಸತೀ - ಹಾನಿಯನ್ನುಂಟುಮಾಡುವಂಥದಾಗಿ, **ಕುಶಿಕಸುತಂ** - ಕುಶಿಕ ರಾಜನ ವಂಶದವನಾದ ಗಾಧಿರಜನ ಮಗನಾದ ವಿಶ್ವಾಮಿತ್ರನನ್ನು, **ವಿನಿಷ್ಠೀವತಿ** - ತಾತ್ಸಾರ ಮಾಡಿ ದೂರ ಓಡಿಸಿತೋ ಅದೇ ರೀತಿ ನಿಮ್ಮ ಮಾತೂ ಕೂಡ ಪರವಾದಿಗಳನ್ನು ಹತಪ್ರಭರನ್ನಾಗಿ ಮಾಡಿ ದೂರ ಓಡಿಸುತ್ತದೆ. **ಏಷಾ ಸಾ** - ಹೀಗಿದ್ದ ಈ, **ತವ** - ನಿಮ್ಮ ವಚನವು, **ಉಪಕಂಠಂ** - ನಿಮ್ಮ ಕಂಠದ ಸಮೀಪದಲ್ಲಿ, **ಆಶ್ಲೇಷಾಯ** - ಗಟ್ಟಿಯಾಗಿ ಅಪ್ಪಿಕೊಂಡು ಸ್ಥಿರವಾಗಿರಲು, **ಸಮುತ್ಕಂಠತೇ** - ಅತಿಯಾಗಿ ತವಕಿಸುತ್ತದೆ.

ತಾತ್ಪರ್ಯಾರ್ಥ : ಕ್ಷತ್ರಿಯ ಕುಲೋತ್ಪನ್ನನಾದ ವಿಶ್ವಾಮಿತ್ರರಾಜನು ಮಹಾತಪಸ್ವಿಗಳಾದ ವಸಿಷ್ಠ ಋಷಿಗಳಲ್ಲಿರುವ ಕಾಮಧೇನುವಿನ ಮಗಳಾದ ನಂದಿನೀಯನ್ನು ಬಯಸಿ ವಸಿಷ್ಠರ ಆಶ್ರಮದ ಮೇಲೆ ತನ್ನ ದೊಡ್ಡ ಸೈನ್ಯದೊಡನೆ ದಾಳಿ ಮಾಡಿದನು. ನಂದಿನೀಯು ತಾನು ಅಪಹರಿಸಲ್ಪಡುವೆನೆಂಬ ಗಾಬರಿಯಿಂದ ವಸಿಷ್ಠರನ್ನು ಶರಣು

Rarest Archiver

ಹೋದಳು. ಆಗ ವಸಿಷ್ಠರು ತಮ್ಮ ತಪಶ್ಶಕ್ತಿಯಿಂದ ನಂದಿನೀಗೆ ಅದಮ್ಯವಾಗಿರುವ ವರ ಕೊಟ್ಟಿದ್ದಲ್ಲದೆ, ನಂದಿನೀಯ ಮಲಮೂತ್ರಾದಿಗಳಿಂದ ಅಸಂಖ್ಯ ಸೈನಿಕರು ಉತ್ಪನ್ನರಾಗಿ ವಿಶ್ವಾಮಿತ್ರನ ಸೈನಿಕರನ್ನೆಲ್ಲ ನಾಶಮಾಡಿಬಿಡುವಂತೆ ಮಾಡಿದರು. ಈ ಕಥೆಯು ಶ್ರೀಮಹಾಭಾರತದಲ್ಲಿ ವಿವರವಾಗಿ ಬರುತ್ತದೆ. ಇಲ್ಲಿ ಅದನ್ನು ಸ್ಮರಿಸಬೇಕು. ವಿಶ್ವಾಮಿತ್ರನು ವಸಿಷ್ಠರ ತಪಃಶಕ್ತಿಯ ಇಂಗಿತವನ್ನು ಅರಿತು ತಾನು ಶ್ರೀಗಾಯತ್ರಿ ಮಂತ್ರದ ಜಪ ಮಾಡಿ ಘೋರವಾದ ತಪಸ್ಸನ್ನು ಆಚರಿಸಿ ಬ್ರಾಹ್ಮಣ್ಯವನ್ನು ಪಡೆದನು ಎಂಬುದು ಮುಂದಿನ ಕಥೆಯಿದೆ. ಪ್ರಕೃತದಲ್ಲಿ ವಸಿಷ್ಠರ ಗೋವನ್ನು ಅಪಹರಣ ಮಾಡಲು ಬಯಸಿದ ವಿಶ್ವಾಮಿತ್ರರಾಜನು ಹಾಗೂ ಅವನ ಸೈನಿಕರೆಲ್ಲರೂ ನಂದಿನೀಯಿಂದ ಪರಾಸ್ತಗೊಳಿಸಲ್ಪಟ್ಟರಷ್ಟೇ ! ಅದರಂತೆ ಶ್ರೀಯೋಗೀಂದ್ರರ ಗೋವನ್ನು ಅಂದರೆ ವಾದದಲ್ಲಿಯ ಮಾತನ್ನು ಅಡಗಿಸಬೇಕೆಂಬ ಅಂದರೆ ವಾದದಲ್ಲಿ ಅವರನ್ನು ಸೋಲಿಸಬೇಕೆಂಬ ದುರಾಕಾಂಕ್ಷೆಯಿಂದ ಸಭೆಗಳಿಗೆ ಬಂದಿದ್ದ ಪ್ರತಿವಾದಿಗಳು ವಿಶ್ವಾಮಿತ್ರನಂತೆ ಹಾಗೂ ಅವನ ಸೈನಿಕರಂತೆ, ಯೋಗೀಂದ್ರರ ವಾದದ ಪ್ರಭಾವದಿಂದ ತಾವೇ ಪರಾಸ್ತಗೊಳಿಸಲ್ಪಟ್ಟರು. ಜ್ಞಾನಶಕ್ತಿ ಹಾಗೂ ತಪಃಶಕ್ತಿಯ ಎದುರು ಉಳಿದಾವ ದುಶ್ಶಕ್ತಿಗಳೂ ತಮ್ಮ ಆಟವನ್ನು ನಡೆಸಲಾರವು. ನಿಜವಾದ ತತ್ತ್ವಜ್ಞಾನದ ತಳಹದಿಯ ಮೇಲೆ ಹೊರಹೊಮ್ಮುವ ವಾಕ್ ಪ್ರವಾಹವನ್ನು ಯಾರಿಗೆ ತಾನೆ ತಡೆಗಟ್ಟಲು ಸಾಧ್ಯ ? ಜ್ಞಾನ ದಾರ್ಢ್ಯದಿಂದಾಗಿ ಹೊರಹೊಮ್ಮುವ ಮಾತುಗಳು ಸಂಶಯ, ವಿಪರೀತ ಜ್ಞಾನಗಳೆಂಬ ಶಿಥಿಲತೆಯಿಂದ ಕೂಡಿರದೆ ಸತ್ಯದ ಗಾಂಭೀರ್ಯದಿಂದ ಕೂಡಿದ್ದುವಾಗಿರುತ್ತವೆ. ಅಂಥ ವಾಕ್ಚಾತುರ್ಯವು ಶ್ರೀಯೋಗೀಂದ್ರತೀರ್ಥರಂಥ ಜ್ಞಾನಿಗಳಿಗೆ ಮಾತ್ರ ಸಾಧ್ಯವಾಗಿದೆ. ಆದ್ದರಿಂದ ಅದು ಅವರ ಹತ್ತಿರವೇ ಅವರಿಗೆ ಅಂಟಿಕೊಂಡು ಇರುತ್ತವೆ. ಶ್ರೀಯೋಗೀಂದ್ರತೀರ್ಥರನ್ನು ವಾದದಲ್ಲಿ ಯಾರೂ ಸೋಲಿಸಿ ನಿರುತ್ತರರನ್ನಾಗಿ ಮಾಡುವುದು ಸಾಧ್ಯವೇ ಇರಲಿಲ್ಲ ಎಂಬುದು ತಾತ್ಪರ್ಯ.

ಇಲ್ಲಿ ಆಶ್ಲೇಷವೆಂಬ ನಕ್ಷತ್ರದ ವಿನ್ಯಾಸವಿದೆ. ಸಂಸಾರತಾರಕವಾದ ಉಪಾಯಗಳಲ್ಲಿ ಕೆಳಗಿನ ಉಪಾಯಗಳು ಸೂಚಿತವಾಗಿವೆ.

1) ಜ್ಞಾನಿಗಳು, ತಪಸ್ವಿಗಳು ಆದಂಥ ಮಹಾನುಭಾವರ ವಿರುದ್ಧ ಅಪಚಾರ ಮಾಡುವ ಅಥವಾ ಅವರಿಗೆ ದ್ರೋಹವೆಸಗುವ ದುರಾಕಾಂಕ್ಷೆಯನ್ನು ಮಾಡಬಾ

Rarest Archiver

ರದು. ಇಂಥ ದುರಾಕಾಂಕ್ಷೆಯು ನಮಗೆ ತಿರುವು ಆಗಿ ಕೇಡನ್ನು ಉಂಟು ಮಾಡುತ್ತದೆ.

2) ವಸಿಷ್ಠರಂತೆ, ಯಮನಿಮಯಮಾದ್ಯನುಷ್ಠಾನದಿಂದ ಸಾಧನಮಾರ್ಗದಲ್ಲಿ ರತರಾಗಿರಬೇಕು. ಇದರಿಂದ ರಾಗದ್ವೇಷಾದಿ ದುಶ್ಶಕ್ತಿಗಳ ಪ್ರಭಾವವು ಉಂಟಾಗುವುದಿಲ್ಲ.

3) ಗಾಯತ್ರೀ ಮಂತ್ರದ ಜಪದಿಂದಾಗಿಯೇ ವಸಿಷ್ಠರಿಗೆ ಅಮೋಘವಾದ ಯೋಗಶಕ್ತಿಯು ಪ್ರಾಪ್ತವಾಗಿತ್ತು. ವಿಶ್ವಾಮಿತ್ರನು ವಸಿಷ್ಠರ ಅಜೇಯವಾದ ಓಜಸ್ಸಿನ ಗುಟ್ಟನ್ನು ಅರಿತ ನಂತರ ತಾನೂ ಕೂಡ ಅಖಂಡವಾಗಿ ಗಾಯತ್ರೀ ಮಂತ್ರದ ಜಪವನ್ನು ಅನುಷ್ಠಾನ ಮಾಡಿ ಬ್ರಾಹ್ಮಣ್ಯವನ್ನೂ ಬ್ರಹ್ಮರ್ಷಿಪದವಿಯನ್ನೂ ಪಡೆದನು. ಸಕಲ ಶಾಸ್ತ್ರಾರ್ಥವನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಗಾಯತ್ರೀ ಮಂತ್ರವನ್ನು ಗುರೂಪದೇಶಪೂರ್ವಕವಾಗಿ ಅನುಷ್ಠಾನ ಮಾಡಬೇಕು.

ವಿಗ್ರಹವಾಕ್ಯಗಳು– ಕುಶಿಕಸುತಂ – ಕುಶಿಕೇ ಕುಶಿಕವಂಶೇ ಸುತಃ ತಂ. **ಯೋಗಿಪ್ರವರ** – ಯೋಗಿಷು ಪ್ರವರಃ ತತ್ಸಂಬುದ್ಧಿಃ. ಕಂಠಸ್ಯ ಸಮೀಪೇ **ಉಪಕಂಠಂ, ಉಪಗತಃ ಕಂಠಂ ಯಥಾ ಸ್ಯಾತ್ತಥಾ ಉಪಕಂಠಂ.**

ಕೋಶಗಳು– ಗೌಃ – ''ಗೌಃ ಸ್ವರ್ಗೇ ಚ ಬಲೀವರ್ದೇ ರಶ್ಮೌ ಚ ಕುಲಿಶೇ ಪುಮಾನ್ । ಸ್ತ್ರೀ ಸೌರಭೇಯೀ ದೃಗ್‌ಬಾಣ ದಿಗ್‌ವಾಗ್ ಭೂಷ್ವಪ್ಸು ಭೂಮ್ನಿ ಚ ॥'' ಇತಿ ವಿಶ್ವಮೇದಿನ್ಯೌ. ಸದಃ – ''ಸಮಜ್ಯಾಪರಿಷದ್ ಗೋಷ್ಠೀ ಸಭಾಸಮಿತಿ ಸಂಸದಃ । ಆಸ್ಥಾನೀ ಕ್ಲೀಬಮಾಸ್ಥಾನಂ ಸ್ತ್ರೀ ನಪುಂಸಕಯೋಃ ಸದಃ. ರಾಗಃ – ''ಪಾಪಾಪರಾಧಯೋ ರಾಗಃ'' ಇತ್ಯಮರಃ (3-3-230). ''ಸಮೀಪೇ ವಿಕಟಾಸನ್ನ ಸಂನಿಕೃಷ್ಟ ಸನೀಡವತ್ । ಸದೇಶಾಭ್ಯಾಶಸವಿಧ ಸಮರ್ಯಾದ ಸವೇಶವತ್ ಉಪಕಂಠಾಂತಿಕಾಭ್ಯರ್ಣಾಭ್ಯಗ್ರಾ ಅಪ್ಯಭಿತೋಽವ್ಯಯಮ್ ॥ ಇತ್ಯಮರಃ.

ವ್ಯಾಕರಣ ವಿಚಾರಗಳು– ಮೋಷಿತುಂ – ಮುಷ್ ಸ್ತೇಯೇ, 9ನೇಯ ಗಣ ಪರಸ್ಮೈಪದ ಮುಷ್ಣಾತಿ ಈ ಧಾತುವಿನ ತುಮಂತ ಅವ್ಯಯರೂಪ. ಉಪಜಿಹತೇ – ''ಉಪ'' ಉಪಸರ್ಗಪೂರ್ವಕವಾದ ಹಾ – ಗತೌ 3ನೇಯ ಗಣ ಆತ್ಮನೇಪದ

Rarest Archiver

ಜಿಹೀತೇ ಧಾತುವಿನ ಪರಸ್ಮೈಪದ ತೃತೀಯ ಪುರುಷ ಬಹುವಚನ. ಉಪಜಿಹೀತೇ ಉಪಜಿಹಾತೇ ಉಪಜಿಹತೇ, ಉಪಜಿಹೀಷೇ ಉಪಜಿಹಾಥೇ ಉಪಜಿಹೀಧ್ವೇ, ಉಪ ಜಿಹೇ ಉಪಜಿಹೀವಹೇ ಉಪಜಿಹೀಮಹೇ. ಜಹತಿ - ಒಹಾಕ್ ತ್ಯಾಗೇ 3ನೇಯ ಗಣ ಪರಸ್ಮೈಪದ. ವರ್ತಮಾನಕಾಲ ತೃತೀಯ ಪುರುಷ ಬಹುವಚನ. ಜಹಾತಿ ಜಹತಃ (ಜಹೀತಃ) ಜಹತಿ, ಜಹಾಸಿ ಜಹಿಥಃ (ಜಹೀಥಃ) ಜಹಿಥ(ಜಹೀಥ), ಜಹಾಮಿ ಜಹಿವಃ (ಜಹೀವಃ) ಜಹಿಮಃ (ಜಹೀಮಃ). ಪ್ರಚರತಿ - ಪ್ರ ಉಪಸರ್ಗ ಪೂರ್ವಕವಾದ ಚರ - ಗತೌ 1ನೇಯ ಗಣ. ಪ.ಪದ., ವ. ಕಾಲ., ತೃ.ಪು., ಏ.ವ. ಹಿಯತೇ - ಹಾ ತ್ಯಾಗೇ ಧಾತುವಿನ, ಕರ್ಮಣೀ ಪ್ರಯೋಗ, ವಿನಿಷ್ಠೀವತಿ - ವಿ ಹಾಗೂ ನಿ ಉಪಸರ್ಗಪೂರ್ವಕವಾದ ಷ್ಠೀವ್ - ನಿರಸನೇ 1ನೇಯ ಗಣ ಪ.ಪದ ಷ್ಠೀವತಿ ಧಾತುವಿನ ವ.ಕಾಲ ತೃ.ಪು. ಏ.ವ.ದ ರೂಪ., ಸಮುತ್ಕಂಠತೇ - ಸಮ್ ಹಾಗೂ ಉತ್ ಉಪಸರ್ಗಪೂರ್ವಕವಾದ ಕಂಠ್ - ಶೋಕೇ 1ನೇಯ ಗಣ. ಆ ಪದ., ವ.ಕಾಲ., ತೃ.ಪು.,ಏ.ವ.

ಇಲ್ಲಿ ಮುದ್ರಾಲಂಕಾರ ಹಾಗೂ ವಿಕಸ್ವರವೆಂಬ ಅಲಂಕಾರಗಳ ಸಂಮಿಶ್ರಣ ವಿದೆ. ಅಲಂಕಾರಮಂಜರಿಯಲ್ಲಿ ಶ್ರೀಸುಧೀಂದ್ರತೀರ್ಥರು, ವಿಕಸ್ವರಾಲಂಕಾರದ ವ್ಯಾಖ್ಯೆಯನ್ನು ಹೀಗೆ ಕೊಟ್ಟಿದ್ದಾರೆ - ''ವಿಕಸ್ವರೋ ವಿಶೇಷೇ ಚೇನ್ಮಧ್ಯೇ ಸಾಮಾನ್ಯ ಮಂಡನಂ । ಜಯೀಂದ್ರೋ ದುರ್ಜಯೋ ಅಕ್ಷೋಭ್ಯಾಂ ಮಹಾಂತೋ ಹಿ ಯಥಾಬ್ಧಯಃ'', ಕುವಲಯಾನಂದದಲ್ಲಿಯ ವ್ಯಾಖ್ಯೆ ಹೀಗಿದೆ - ''ಯಸ್ಮಿನ್ ವಿಶೇಷ ಸಾಮಾನ್ಯವಿಶೇಷಾಃ ಸ ವಿಕಸ್ವರಃ । ಸ ನ ಜಿಗ್ಯೇ ಮಹಾಂತೋ ಹಿ ದುರ್ಧರ್ಷಾಃ ಸಾಗರಾ ಇವ''. ಪ್ರಕೃತದ ಶ್ಲೋಕದಲ್ಲಿ ಮೊದಲನೆಯ ಪಂಕ್ತಿ ಯಲ್ಲಿ, ಯೋಗೀಂದ್ರರ ಮಾತನ್ನು ಅಡಗಿಸಲು ಬಂದವರು ತಾವೇ ತಮ್ಮ ಮಾತನ್ನು ಕಳೆದುಕೊಳ್ಳುತ್ತಾರೆ ಎಂಬ ವಿಶೇಷೋಕ್ತಿಯು ಹೇಳಲ್ಪಟ್ಟಿದೆ. ಎರಡನೆಯ ಪಂಕ್ತಿ ಯಲ್ಲಿ ''ಯಾರು ಸಜ್ಜನರಲ್ಲಿ ಅಪರಾಧವೆಸಗುತ್ತಾರೆಯೋ ಅವರು ಅಷ್ಟು ಮಾತ್ರ ದಿಂದ ಪರಿತ್ಯಕ್ತರಾಗುತ್ತಾರೆ.'' ಎಂಬ ಸಾಮಾನ್ಯ ನಿಯಮ ಹೇಳಿ ಇವೆರಡನ್ನೂ ಪುಷ್ಟೀಕರಿಸಲು ಮೂರನೇಯ ಪಂಕ್ತಿಯಲ್ಲಿ ''ವಸಿಷ್ಠರ ನಂದಿನೀಯು ವಿಶ್ವಾಮಿತ್ರ ನನ್ನು ಹಾಗೂ ಅವನ ಸೈನಿಕರನ್ನು ಹೇಗೆ ಪರಾಸ್ತಗೊಳಿಸಿತೋ ಹಾಗೆಯೇ ಯೋಗೀಂದ್ರರ ವಾಕ್ ಪರವಾದಿಗಳನ್ನು ಪರಾಸ್ತಗೊಳಿಸಿತು'' ಎಂಬ ವಿಶೇಷ

Rarest Archiver

ವಿಚಾರವನ್ನು ಮಂಡಿಸಲಾಗಿದೆ. ವಿಶೇಷ, ಸಾಮಾನ್ಯ, ವಿಶೇಷ ಎಂಬ ಕ್ರಮದಲ್ಲಿ ವಿಚಾರಗಳು ಮಂಡಿಸಲ್ಪಟ್ಟಿದ್ದರಿಂದ ವಿಕಸ್ವರಾಲಂಕಾರವು ಇಲ್ಲಿ ಬರುತ್ತದೆ.

ವಿದ್ಯಾಭದ್ರಾಸನ ಶ್ರೀಪರಿಣಯಸುಭಗಂ ಭಾವುಕಂ ವೈರಿಸೂರಿ-
ಶ್ರೇಣೀಶ್ಲಾಘಾತಿಲಂಘಾಘನಲಘಿಮಸುಜಂಘಾಲವಾಚಾಲತಾಭಿಃ ।।
ಕಸ್ಕಃ ಕೌತಸ್ಕುತೋ ನೋ ಪತತಿ ಭಣಿತಿಭಿಃ ಪ್ರಾಪ್ಯ ತಾತಸ್ತತಸ್ತ್ವಂ ।
ಶ್ರೀಮನ್ಯೋಗೀಂದ್ರಧೀಮನ್ ಸ ಜಯ ಚಿರಮಘಾನ್
ವ್ಯಾಧುನಾನೋಧುನಾ ನಃ ।।10।।

ಅನ್ವಯಾರ್ಥಃ - ಹೇ ಯೋಗೀಂದ್ರಧೀಮನ್ - ಅತ್ಯಂತ ಬುದ್ಧಿಶಾಲಿಗಳಾದ ಯೋಗೀಂದ್ರತೀರ್ಥರೇ, **ತ್ವಂ** - ನೀವು, **ವಿದ್ಯಾಭದ್ರಾಸನಶ್ರೀಪರಿಣಯಸುಭಗಂ - ವಿದ್ಯಾ** - ತಮ್ಮ ವಿದ್ಯೆಯಿಂದ ಪ್ರಾಪ್ತವಾದ, **ಭದ್ರಾಸನ** - ಶ್ರೀಮದಾಚಾರ್ಯರ ಹಾಗೂ ಶ್ರೀರಾಘವೇಂದ್ರಸ್ವಾಮಿಗಳ ಪರಂಪರೆಯಾದ್ದರಿಂದಲೇ, ಕಲ್ಯಾಣಕರವಾದ ಹಾಗೂ ಸ್ಥಿರವಾದ ಪೀಠದ, **ಶ್ರೀ** - ಶೋಭೆಯ, ಕಾಂತಿಯ, **ಪರಿಣಯ** - ಪ್ರಾಪ್ತಿಯಿಂದ, **ಸುಭಗಂ** - ಮಹಾತಪಸ್ವಿಗಳು ಹಾಗೂ ಮಹಾತ್ಮರೂ ಆಗಿರುವ, **ಭಾವುಕಂ** - ವರ್ಚಸ್ಸಿನಿಂದ ಮನೋಜ್ಞರಾದ ತಮ್ಮನ್ನು ಸಮೀಪಿಸಿ ತಮ್ಮ, **ವೈರಿಸೂರಿಶ್ರೇಣೀಶ್ಲಾಘಾತಿಲಂಘಾಘನಲಘಿಮಸುಜಂಘಾಲವಾಚಾಲತಾಭಿಃ -ವೈರಿ** - ಪ್ರತಿವಾದಿಗಳ, **ಸೂರಿ** - ಪಂಡಿತರುಗಳ, **ಶ್ರೇಣೀ** - ಪಂಕ್ತಿಯ, **ಶ್ಲಾಘಾತಿಲಂಘಾ** - ಪ್ರಶಂಸೆ ಮಾಡದಿರುವುದು ಅಂದರೆ ಪ್ರತಿವಾದಿ ಪಂಡಿತರ ವಾದ ಪ್ರಕ್ರಿಯೆಯನ್ನು ತಿರಸ್ಕರಿಸಿ ಅವರನ್ನು ತಾತ್ಸಾರ ಮಾಡುವ ಕಾರ್ಯವೆಂಬ, **ಘನ** - ಘನವಾದ, **ಲಘಿಮ** - ಸಣ್ಣತನವನ್ನು ತೋರಿಸುವುದರಲ್ಲಿ, **ಸುಜಂಘಾಲ** - ಅತಿ ವೇಗಶಾಲಿಯಾದ, **ವಾಚಾಲತಾಭಿಃ** - ವಾಕ್ಪಟುತ್ವವುಳ್ಳ, **ಭಣಿತಿಭಿಃ** - ವಾದದಲ್ಲಿಯ ನಿಮ್ಮ ವಚನಗಳಿಂದ, **ತಾತಸ್ತತಃ** - ಅಲ್ಲಲ್ಲಿಂದ ಬಂದಿರುವ, **ಕಸ್ಕಃ** - ಯಾವ ಪ್ರತಿವಾದಿಯು ತಾನೇ, **ಕೌತಸ್ಕುತಃ** - ಅದು ಯಾವ ಕಾರಣದಿಂದ, **ನೋ ಪತತಿ** - ಪರಾಜಿತನಾಗಿ ಬೀಳುವುದಿಲ್ಲ ? ಎಂಥ ಪ್ರತಿವಾದಿಯೂ ಕೂಡ ಪರಾಜಿತನಾಗುತ್ತಾನೆ ಎಂದು ತಾತ್ಪರ್ಯ. ಅಂಥ **ತ್ವಂ** - ನೀವು, **ಅಧುನಾ** - ಈಗ, **ನಃ** - ನಮ್ಮೆಲ್ಲರ, **ಅಘಾನ್** - ಪಾಪಗಳನ್ನು ತಪ್ಪುಗಳನ್ನು ದುಃಖಗಳನ್ನು, **ವ್ಯಾಧುನಾನಃ** - ಹಾರಿಸಿ ಓಡಿಸುತ್ತ, **ಚಿರಂ** - ಬಹು ಕಾಲದ ವರೆಗೆ, **ಜಯ** - ಜಯಶಾಲಿಯಾಗಿ ಇರಿ.

Rarest Archiver

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರು ಶ್ರೀಮದಾಚಾರ್ಯರ ಪರಂಪರೆಯಿಂದ ಬಂದಿರುವ ಹಾಗೂ ತಮ್ಮ ಗುರುಗಳಾದ ಶ್ರೀರಾಘವೇಂದ್ರಸ್ವಾಮಿಗಳು ಅಲಂಕರಿಸಿದ್ದ ವೇದಾಂತ ವಿದ್ಯಾಸಾಮ್ರಾಜ್ಯದ ಸಿಂಹಾಸನವನ್ನು ಅಲಂಕರಿಸಿದ್ದಾರೆ. ತಮ್ಮ ವಿದ್ಯೆಯ ಹಾಗೂ ಪ್ರತಿಭೆಯ ಬಲದಿಂದ ಈ ಸ್ಥಾನವನ್ನು ಪಡೆದಿರುವ ಅವರಲ್ಲಿ ಒಂದು ವಿಶೇಷವಾದ ವಾದಶಕ್ತಿಯು ಪ್ರಾಪ್ತವಾಗಿದೆ. ಬೇರೆ ಬೇರೆ ಕಡೆಯಿಂದ ಬಂದಿರುವ ಅನೇಕಾನೇಕ ಪ್ರತಿವಾದಿಗಳನ್ನು ಶ್ರೀಯೋಗೀಂದ್ರತೀರ್ಥರು ತಮ್ಮ ವಾದಚಾತುರ್ಯದಿಂದ ಸೋಲಿಸಿ ಅವರ ಪ್ರಮೇಯಗಳನ್ನು ತಿರಸ್ಕರಿಸುತ್ತಾರೆ. ಹೇಯವಾದ ಪ್ರಮೇಯಗಳಲ್ಲಿ ನಂಬುಗೆ ಇಟ್ಟುಕೊಂಡಿದ್ದಕ್ಕಾಗಿ ಆ ಪ್ರತಿವಾದಿಗಳನ್ನು ಭರ್ತ್ಸಿಸುತ್ತಾರೆ. ಈ ರೀತಿಯಾಗಿ ತಥ್ಯವಾದ ಪ್ರಮೇಯಗಳಲ್ಲಿ ಪರಿಣತಿಯನ್ನು ಪಡೆದಿರುವ ಯೋಗೀಂದ್ರರು ನಮ್ಮಲ್ಲಿರುವ ದೋಷಗಳನ್ನು ನಿವಾರಿಸಿ ಅಂತಃಕರಣ ಶುದ್ಧಿಯನ್ನು ದಯಪಾಲಿಸಿ ನಿಜವಾದ ತತ್ವಜ್ಞಾನವನ್ನು ಬೋಧಿಸಿ ಉದ್ಧರಿಸಲಿ ಎಂದು ಪ್ರಾರ್ಥಿಸಲಾಗಿದೆ.

ವಿಗ್ರಹವಾಕ್ಯಗಳು- ವಿದ್ಯಾಭದ್ರಾಸನ ಶ್ರೀಪರಿಣಯಸುಭಗಂ - ವಿದ್ಯಯಾ ಲಬ್ಧಂ ಚ ತತ್ ಭದ್ರಾಸನಂ ಚ, ಭದ್ರಂ ಚ ತತ್ ಆಸನಂ ಚ, ತಸ್ಯ ಶ್ರೀಃ, ತಸ್ಯಾಃ ಪರಿಣಯಃ, ತೇನ ಸುಭಗಂ. **ವೈರಿಸೂರಿಶ್ರೇಣೀಶ್ಲಾಘಾತಿಲಂಘಾಘನಲಘಿಮಸುಜಂಘಾಲವಾಚಾಲತಾಭಿಃ -** ವೈರಿಷು (ಪ್ರತಿವಾದಿಷು) ಸೂರಯಃ, ವೈರಿಸೂರೀಣಾಂ ಶ್ರೇಣಿಃ ತಸ್ಯಾಃ ಶ್ಲಾಘಾತಿಲಂಘಾ, ಶ್ಲಾಘಾಯಾಃ ಅತಿಲಂಘಾ, ಘನಾ ಚಾಸೌ ಲಘಿಮಾ ಚ, ವೈರಿಸೂರಿಶ್ರೇಣೀಶ್ಲಾಘಾತಿಲಂಘಾಯಾಂ ಘನಲಘಿಮಾ, ತಸ್ಯಾಂ ಸುಜಂಘಾಲಾ ವಾಚಾಲತಾ ಯಾಸು ತಾಃ ತಾಭಿಃ.

ಕೋಶಗಳು- ಭದ್ರಂ - ''ಶ್ವಃ ಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಂ । ಭಾವುಕಂ ಭವುಕಂ ಭವ್ಯಂ ಕುಶಲಂ ಕ್ಷೇಮಮಸ್ತ್ರಿಯಾಂ'' ಇತ್ಯಮರಃ (1-4-25-26). ಜಂಘಾಲಃ - ''ಜಂಘಾಲೋತಿಜವಸ್ತುಲ್ಯೌ'' (ಅಮರ 2-8-73). ವಾಚಾಲಃ - ''ಸ್ಯಾಜ್ಜಲ್ಪಕಸ್ತು ವಾಚಾಲೋ ವಾಚಾಟೋ ಬಹುಗರ್ಹ್ಯವಾಕ್ (ಅಮರ 3-1-36). ಅಘಂ - ''ಅಘಂ ದುಃಖೇ ವ್ಯಸನ್ಯೈನಸೋಃ'' ಇತಿ ಹೈಮಃ (2-53).

Rarest Archiver

ವ್ಯಾಕರಣ ವಿಚಾರಗಳು- ಕಸ್ಯಃ ಕಃ ಕಃ ಇತಿ ಕಸ್ಕಃ. ಕೌತಸ್ಕುತಃ - ಕುತಃ ಕುತಃ ಕೌತಸ್ಕುತಃ, ವೀಪ್ಸಾಯಾಂ ದ್ವಿರ್ಭಾವಃ ಅಣ್ ''ತತ ಆಗತಃ'' ಅಸ್ಮಿನ್ನರ್ಥೇ ಪಂಚಮ್ಯಂತಾದ್ಯಥಾವಿಹಿತಂ, ಪ್ರತ್ಯಯಾಃ ಸ್ಯುರಿತ್ಯರ್ಥಃ (4-3-74), ವಿಸರ್ಗಸ್ಯ ಸಃ (8-3-74) ಎಂಬ ಸೂತ್ರಗಳಿಂದ ರೂಪಸಿದ್ಧಿಯಾಗುತ್ತದೆ. ''ಕಸ್ಕಾದಿಷು ಚ'' ಕಃ ಪಯೋರಪವಾದಃ ಏಷ್ವಿಣಃ ಉತ್ತರಸ್ಯ ವಿಸರ್ಗಸ್ಯ ಷಃ ಸ್ಯಾತ್, ಅನ್ಯಸ್ಯ ತು ಸಃ । ಪತತಿ - ಪತ್ ಪತನೆ - ಪ್ರಥಮಗಣ ಪರಸ್ಮೈಪದ ವ. ಕಾಲ, ತೃ.ಪು. ಏ. ವ. ಜಯ - ಜಿ ಜಯೇ ಅಭಿಭವೇ ಚ, ಪ್ರ.ಗಣ, ಪ.ಪದ, ಲೋಟ್ ಆಜ್ಞಾರ್ಥ, ಮಧ್ಯಮ ಪು. ಏ.ವ.

ಇಲ್ಲಿ ಮಘಾ ಎಂಬ ನಕ್ಷತ್ರದ ವಿನ್ಯಾಸವಿರುವುದರಿಂದ ಮುದ್ರಾಲಂಕಾರ ವಿದೆ. ಶ್ರೀಯೋಗೀಂದ್ರತೀರ್ಥರು ವಿಜಯದಿಂದ ಶೋಭಿಸಲು ಹೇತುವಾದುದು ಪರವಾದಿಗಳ ಪತನ. ಇದಕ್ಕೆ ಹೇತುವಾದದು ಯೋಗೀಂದ್ರತೀರ್ಥರು ತಮ್ಮ ವಿದ್ಯೆಯ ಪ್ರಭಾವದಿಂದ ಅಲಂಕರಿಸಿದ ವಿದ್ಯಾಸಿಂಹಾಸನ. ಹೀಗೆ ಹೇತುವನ್ನು ಹಾಗೂ ಹೇತುವಿನ ಪರಿಣಾಮವನ್ನು ಒಂದೇ ಶ್ಲೋಕದಲ್ಲಿ ಉಲ್ಲೇಖಿಸುವುದಕ್ಕೆ ''ಹೇತು''ವೆಂಬ ಅಲಂಕಾರವೆನ್ನುತ್ತಾರೆ. ಶ್ರೀಸುಧೀಂದ್ರತೀರ್ಥರು ಇದನ್ನು ಹೀಗೆ ವ್ಯಾಖ್ಯಾಯಿಸಿದ್ದಾರೆ. ''ಹೇತುಸ್ತತದ್ವತೋರೈಕ್ಯಂ ಸಹೋಕ್ತಿರ್ವಾ ತಯೋರ್ಭವೇತ್ । ವಿಜಯೀಂದ್ರ ಕೃಪಾದೃಷ್ಟಿಃ ಸ್ವರ್ಣವೃಷ್ಟಿರ್ಮನೀಷಿಣಾಂ''.

ಅವತಾರಿಕಾ

ಈ ಹಿಂದಿನ ಒಂಭತ್ತು ಶ್ಲೋಕಗಳಲ್ಲಿ ಶ್ರೀಯೋಗೀಂದ್ರತೀರ್ಥರು ಮಾಡಿದ್ದ ಪರವಾದಿವಿಜಯವನ್ನು ವರ್ಣಿಸಲಾಯಿತು. ಈ ಮುಂದಿನ ಒಂಭತ್ತು ಶ್ಲೋಕಗಳಲ್ಲಿ ಅವರ ಕೀರ್ತಿಯನ್ನು ವರ್ಣಿಸುತ್ತಾರೆ.

ಪಾದಾಕ್ರಾಂತಾಹಿಲೋಕಾ ಪದಮಿತಧರಣೀಮಂಡಲಾಖಂಡಲಾದಿ-
ಸ್ಥಾನಾ ಮಾ ನಾಮ ಯೋಗಿಪ್ರಭುಯತಿವರಜಾ
ಕೀರ್ತಿರೇತದ್ವ್ಯಕರ್ತೀತ್ ।
ಇತ್ಥಂ ವಿಧ್ಯಂಡಮಾಧಾತ್ಕಿಲ ಹರಿರುದರೇ ತದ್ಗಣಾ ಫಲ್ಗುನೀಡೇ ।

Rarest Archiver

ಸಾ ಭಿತ್ವೋಜ್ಜೃಂಭತೇತ್ರ ದ್ವಯಮಪಿ
ಸಿತತನ್ನಾಭಿಜಾಂಭೋಜದಂಭಾತ್ ।।11।।

ಅನ್ವಯಾರ್ಥಃ – ಪಾದಾಕ್ರಾಂತಾಹಿಲೋಕಾ – ಪಾದ – ತನ್ನ ಒಂದು ಭಾಗದಿಂದ ಇಲ್ಲವೇ ತನ್ನ ಕಿರಣಗಳಿಂದ, **ಆಕ್ರಾಂತ** – ವ್ಯಾಪಿಸಲ್ಪಟ್ಟಂಥ, **ಅಹಿಲೋಕಾ** – ಸರ್ಪಗಳ ಲೋಕ ಅಂದರೆ ಪಾತಾಳ ಲೋಕವುಳ್ಳಂಥ, ಅಂದರೆ ತನ್ನ ಪ್ರಭೆಯಿಂದ ಪಾತಾಳ ಲೋಕವನ್ನು ತಲುಪಿ ವ್ಯಾಪಿಸಿದಂಥ, **ಪದಮಿತಧರಣೀಮಂಡಲಾಖಂಡಲಾ ದಿಸ್ಥಾನಾ – ಪದ** – ತನ್ನ ಒಂದು ಭಾಗದಿಂದ ಅಥವಾ ಕಿರಣಗಳಿಂದ, **ಮಿತ** – ಅಳೆಯಲ್ಪಟ್ಟಂಥ ಅಂದರೆ ವ್ಯಾಪಿಸಲ್ಪಟ್ಟಂಥ, **ಧರಣೀಮಂಡಲ** – ಭೂಮಂಡಲ ಹಾಗೂ **ಅಖಂಡಲಾದಿಸ್ಥಾನಾ** – ಇಂದ್ರ ರ್‍ಮೊದಲಾದವರ ಲೋಕವುಳ್ಳಂಥ, ಅಂದರೆ ತನ್ನ ಪ್ರಭೆಯಿಂದ ಭೂಮಂಡಲ, ಸ್ವರ್ಗಲೋಕ, ಮಹರ್ಲೋಕ, ಇತ್ಯಾದಿ ಲೋಕ ಗಳನ್ನು ವ್ಯಾಪಿಸಿದಂಥ, **ಯೋಗಿಪ್ರಭುಯತಿವರಜಾ** – ಯೋಗೀಂದ್ರವ್ರತೀಂದ್ರ ರಿಂದ ಹುಟ್ಟಿದಂಥ, **ಕೀರ್ತಿಃ** – ಕೀರ್ತಿಯು, **ಏತತ್‌ನಾಮ** – ಈ ಬ್ರಹ್ಮಾಂಡವನ್ನು ಮಾತ್ರ, **ಮಾ ವ್ಯಕರ್ತೀತ್** – ವಿಶೇಷವಾಗಿ ಭೇದನ ಮಾಡದೇ ಇರಲಿ, **ಇತ್ಥಂ** – ಹೀಗೆಂದುಕೊಂಡು, **ಹರಿಃ** – ವಿಷ್ಣುವು, **ವಿಧ್ಯಂಡಂ** – ಬ್ರಹ್ಮಾಂಡವನ್ನು, **ತದ್ಗಣಾಘ ಲ್ಗುನೀಡೇ – ತದ್ಗಣ** – ಬ್ರಹ್ಮಾಂಡಗಣದ, **ಅಘಲ್ಗು** – ಮಹತ್ವಪೂರ್ಣವಾದ, ವಿಸ್ತಾರವಾದ, **ನೀಡೇ** – ಗೂಡಿನಲ್ಲಿ, **ಉದರೇ** – ಅದರ ಮಧ್ಯದ ಹೊಟ್ಟೆಯಲ್ಲಿ, **ಅಧಾತ್ ಕಿಲ** – ಸ್ಥಾಪಿಸಿದನಷ್ಟೇ। ಆದರೆ, **ಸಾ** – ಆ ಯೋಗೀಂದ್ರತೀರ್ಥರ ಕೀರ್ತಿ ಪ್ರಭೆಯು, **ದ್ವಯಂ ಅಪಿ** – ಬ್ರಹ್ಮಾಂಡವನ್ನೂ ಅದರ ಉದರವನ್ನೂ, **ಭಿತ್ವಾ** – ಒಡೆದು, **ಅತ್ರ** – ಇಲ್ಲಿ, **ಸಿತತನ್ನಾಭಿಜಾಂಭೋಜದಂಭಾತ್** – **ಸಿತ** – ಶುಭ್ರವಾದ, **ತನ್ನಾಭಿಜ** – ಆ ವಿಷ್ಣುವಿನ ನಾಭಿಯಿಂದ ಹುಟ್ಟಿದ, **ಅಂಭೋಜ** – ಕಮಲದ, **ದಂಭಾತ್** – ನಿಮಿತ್ತದಿಂದ, ಅಂದರೆ ಬೆಳ್ಳಗಿರುವ ನಾಭಿಕಮಲದ ರೂಪದಲ್ಲಿ, **ಉಜ್ಜೃಂಭತೇ** – ವಿಶೇಷವಾಗಿ ಪ್ರಕಾಶಿಸುತ್ತದೆ.

ಪ್ರತಿವಾದಿಗಳನ್ನು ವಾದದಲ್ಲಿ ಸೋಲಿಸಿ ನಿಜವಾದ ತತ್ವಗಳನ್ನು ಸ್ಥಾಪಿಸಿ, ಪೋಷಿಸಿ, ಪ್ರಸಾರ ಮಾಡುವ ಕಾರ್ಯದಿಂದಾಗಿ ಶ್ರೀಯೋಗೀಂದ್ರತೀರ್ಥರ ಕೀರ್ತಿಯು ಸರ್ವತ್ರ ಪ್ರಸೃತವಾಗಿತ್ತು. ಅವರ ಕೀರ್ತಿಪ್ರಭೆಯು ಪಾತಾಳ ಲೋಕ, ಭೂಮಂಡಲ, ಇಂದ್ರಲೋಕ ಇತ್ಯಾದಿಲೋಕಗಳಲ್ಲಿ ವ್ಯಾಪಿಸಿದ್ದಲ್ಲದೆ ಬ್ರಹ್ಮಾಂಡ

Rarest Archiver

ವನ್ನು ಹಾಗೂ ಅದನ್ನು ಇಟ್ಟುಕೊಂಡಿರುವ ವಿಷ್ಣುವಿನ ಉದರವನ್ನು ಭೇದಿಸಿ ನಾಭಿಕಮಲದ ರೂಪದಲ್ಲಿ ಹೊರಬಂದು ಶುಭ್ರವಾಗಿ ಶೋಭಿಸುತ್ತಿತ್ತು ಎಂದು ಉತ್ಪ್ರೇಕ್ಷಿಸಿ ಶ್ರೀಯೋಗೀಂದ್ರತೀರ್ಥರ ವಿಸ್ತಾರವಾದ ಕೀರ್ತಿಯನ್ನು ವರ್ಣಿಸುತ್ತಾರೆ.

ಇಲ್ಲಿ ಫಲ್ಗುನೀ ಎಂಬ 11ನೇಯ ನಕ್ಷತ್ರದ ವಿನ್ಯಾಸವಿದೆ. ಇಲ್ಲಿ ಈ ಕೆಳಗಿನ ಸಂಸಾರತಾರಕ ಉಪಾಯಗಳು ಸೂಚಿತವಾಗಿವೆ.

1) ಈ ಕರ್ಮಬಂಧವನ್ನು ಒಡೆದುಕೊಂಡು ಚತುರ್ಮುಖಬ್ರಹ್ಮನ ಸನ್ನಿಧಿಗೆ ಹೋಗಿ ನಂತರ ವಿಷ್ಣುವಿನ ಸನ್ನಿಧಾನವನ್ನು ಪಡೆಯಲು ಶ್ರೀಯೋಗೀಂದ್ರತೀರ್ಥರು ತೋರಿಸಿಕೊಟ್ಟಿರುವ ಜ್ಞಾನ ಭಕ್ತಿ ವೈರಾಗ್ಯಗಳ ಮಾರ್ಗವನ್ನು ಅನುಸರಿಸಬೇಕು.

2) ಭಕ್ತಿ, ವಿರಕ್ತಿ, ಅಂತಃಕರಣಶುದ್ಧಿ, ಭಗವತ್ಪ್ರಸಾದ ಇವೆಲ್ಲವುಗಳನ್ನು ಶುಭ್ರವಾದವುಗಳು ಎಂದು ವರ್ಣಿಸುವ ಪರಿಪಾಠವಿದೆ. ಶುಭ್ರತೆಯು ಚೇತನವನ್ನು ಆವರಿಸಬೇಕು ಎಂದು ಸೂಚಿಸಿದ್ದರಿಂದ, ಭಕ್ತಿ, ವಿರಕ್ತಿ, ಅಂತಃಕರಣಶುದ್ಧಿ ರೂಪವಾದ ಸಾಧನಕಲಾಪಗಳಿಂದ ಭಗವತ್ಪ್ರಸಾದವನ್ನು ಪಡೆಯಬೇಕು ಎಂದು ಸಾಧನ ಮಾರ್ಗವನ್ನು ಉಲ್ಲೇಖಿಸಿದಂತಾಗಿದೆ.

ವಿಗ್ರಹವಾಕ್ಯಗಳು– ಪಾದಾಕ್ರಾಂತಾಹಿಲೋಕಾ – ಪಾದೇನ ಆಕ್ರಾಂತಃ ಅಹಿಲೋಕಃ ಯಯಾ ಸಾ. **ಪದಮಿತಧರಣೀಮಂಡಲಾಖಂಡಲಾದಿಸ್ಥಾನಾ** – ಆಖಂಡಲಃ ಆದಿಃ ಏಷಾಂ ತೇ, ತೇಷಾಂ ಸ್ಥಾನಾನಿ, ಧರಣೀಮಂಡಲಂ ಚ ಆಖಂಡಲಾದಿಸ್ಥಾನಾನಿ ಚ ಧರಣೀಮಂಡಲಾಖಂಡಲಾದಿಸ್ಥಾನಾನಿ. ಪದೇನ ಮಿತಾನಿ ಧರಣೀಮಂಡಲಾಖಂಡಲಾದಿಸ್ಥಾನಾನಿ ಯಯಾ ಸಾ. **ಯೋಗಿಪ್ರಭುಯತಿವರಜಾ** – ಯೋಗಿಷು ಪ್ರಭುಃ ಯೋಗಿಪ್ರಭುಃ, ಯತಿಷು ವರಃ ಯತಿವರಃ, ಯೋಗಿಪ್ರಭುಶ್ಚಾಸೌ ಯತಿವರಶ್ಚ, ತೇನ ಜಾತಾ. **ತದ್ಗಣಾಫಲ್ಗುನೀಡೇ** – ತೇಷಾಂ ಗಣಂ ತದ್ಗಣಂ, ಅಫಲ್ಗು ಚ ತತ್ ನೀಡಂ ಚ, ತದ್ಗಣಸ್ಯ ಅಫಲ್ಗುನೀಡಂ ತಸ್ಮಿನ್. **ಸಿತತನ್ನಾಭಿಜಾಂಭೋಜದಂಭಾತ್** – ತಸ್ಯ ನಾಭಿಃ ತನ್ನಾಭಿಃ, ತಸ್ಮಾತ್ ಜಾಯತ ಇತಿ ತನ್ನಾಭಿಜಂ. ತನ್ನಾಭಿಜಂ

Rarest Archiver

ಚ ತತ್ ಅಂಭೋಜಂ ಚ, ಸಿತಂ ಚ ತತ್ ತನ್ನಾಭಿಜಾಂಭೋಜಂ ಚ, ತಸ್ಯ ದಂಭಃ ತಸ್ಮಾತ್.

ಕೋಶಗಳು– ಪಾದಃ - ''ಪಾದೋ ಬುಧ್ನೇ ತುರೀಯಾಂಶೇ ಶೈಲೇ ಪ್ರತ್ಯಂತಪರ್ವತೇ । ಚರಣೇ ಚ ಮಯೂಖೇ ಚ'' ಇತಿ ಮೇದಿನೀ(75/9-10). ''ಅಹಿರ್ವೃತ್ರಾಸುರೇ ಸರ್ಪೇಽಪಿ'' ಇತಿ ವಿಶ್ವಃ. ಆಖಂಡಲಃ - ''ಇಂದ್ರೋ ಮರುತ್ವಾನ್ ಮಘವಾ ಬಿಡೌಜಾಃ ಪಾಕಶಾಸನಃ --- ಆಖಂಡಲಃ ಸಹಸ್ರಾಕ್ಷಃ ಋಭುಕ್ಷಾಃ'' ಇತ್ಯಮರಃ (1-1-44). ವಿಧಿಃ - ''ವಿಧಿರ್ನಾ ನಿಯತೌ ಕಾಲೇ ವಿಧಾನೇ ಪರಮೇಷ್ಠಿನಿ'' ಇತಿ ಮೇದಿನೀ (80/117). ಫಲ್ಗು - ''ಫಲ್ಗ್ವಸಾರೇ ಅಭಿಧೇಯವತ್ । ನದೀಭೇದೇ ಮಲಯ್ಯಾಂ ಸ್ತ್ರೀ'' ಇತಿ ಮೇದಿನೀ (22/10-11). ''ಫಲ್ಗುಃ ಪ್ರೋಕ್ತೋ ಮಲೇ ಸಾರೇ ನಿಃಸಾರೇ ಫಲ್ಗು ವಾಚ್ಯವತ್'' ಇತಿ ವಿಶ್ವಃ. ನೀಡಂ- ''ನೀಡಂ ಸ್ಥಾನಕುಲಾಲಯೋಃ'' ಇತಿ ಮೇದಿನೀ (44/17). ಸಿತ - ''ಅವದಾತಃ ಸಿತೋ ಗೌರೋ ವಲಕ್ಷೋ ಧವಲೋಽರ್ಜುನಃ'' ಇತ್ಯಮರಃ (1-5-13).

ವ್ಯಾಕರಣ ವಿಚಾರಗಳು– ವ್ಯಕರ್ತೀತ್ - ವಿ + ಅಕರ್ತೀತ್, ವಿ ಉಪಸರ್ಗಪೂರ್ವಕ ಕೃತೀ ಚ್ಛೇದನೇ ಧಾತುವಿನ (ತುದಾದಿಗಣ, ಸಕರ್ಮಕ, ಸೇಟ್, ಪರಸ್ಮೈಪದ) ಲಙ, ಪ್ರ. ಪು., ಏ.ವ., ಅಕರ್ತೀತ್ ಅಕರ್ತಿಷ್ಟಾಂ ಅಕರ್ತಿಷುಃ, ಅಕರ್ತೀಃ ಅಕರ್ತಿಷ್ಟಂ ಅಕರ್ತಿಷ್ಟ । ಅಕರ್ತಿಷಂ ಅಕರ್ತಿಷ್ವ ಅಕರ್ತಿಷ್ಮ. ಆಧಾತ್ - ಆ + ಅಧಾತ್ ಆ ಉಪಸರ್ಗಪೂರ್ವಕ (ಡು) ಧಾ (ಞ) ಧಾರಣಪೋಷಣಯೋಃ ಧಾತುವಿನ (ಜುಹೋತ್ಯಾದಿಗಣ ಸಕ, ಅನಿ, ಉಭಯಪದೀ), ಲುಙ, ಪ್ರ.ಪು., ಏ.ವ., ಅಧಾತ್ ಅಧಾತಾಮ್ ಅಧುಃ । ಅಧಾಃ ಅಧಾತಮ್ ಅಧಾತ, ಅಧಾಮ್ ಅಧಾವ ಅಧಾಮ. ಉಜ್ಜೃಂಭತೇ - ಉತ್ + ಜೃಂಭತೇ, ಜೃಭಿ ಗಾತ್ರವಿನಾಮೇ (ಭುವಾದಿಗಣ, ಆ.ಪ. ಅಕರ್ಮಕ, ಸೇಟ್) ಜೃಂಭತೇ ಜೃಂಭೇತೇ ಜೃಂಭಂತೇ ಜೃಂಭಸೇ ಜೃಂಭೇಥೇ ಜೃಂಭಧ್ವೇ । ಜೃಂಭೇ ಜೃಂಭಾವಹೇ ಜೃಂಭಾಮಹೇ ॥

ಇಲ್ಲಿ ಉದರವನ್ನೂ ಬ್ರಹ್ಮಾಂಡವನ್ನೂ ಭೇದಮಾಡಿದ ಉಲ್ಲೇಖದಿಂದ ಒಂದು ರೀತಿಯ ಅನಿಷ್ಟವೆನಿಸುತ್ತದೆ. ಆದರೆ ಆ ಉಲ್ಲೇಖವನ್ನು ನಿಮಿತ್ತಮಾಡಿಕೊಂಡು ಕೀರ್ತಿಯ ವ್ಯಾಪ್ತಿಯನ್ನು ಹೇಳಿರುವುದು ಇಷ್ಟವಾಗಿದೆ. ಇಂಥ ಅಲಂಕಾ

Rarest Archiver

ರವು ವಿಷಮಾಲಂಕಾರವೆಂದು ಹೇಳಲ್ಪಡುತ್ತದೆ. ಶ್ರೀಸುಧೀಂದ್ರತೀರ್ಥರು ತಮ್ಮ ಅಲಂಕಾರಮಂಜರಿಯಲ್ಲಿ ವಿಷಮಾಲಂಕಾರದ ವ್ಯಾಖ್ಯೆಯನ್ನು ಹೀಗೆ ಕೊಟ್ಟಿದ್ದಾರೆ.

> ವಿಷಮಾ ತತ್ ತ್ರಿಧಾನಿಷ್ಟಾವಾಪ್ತಿರಿಷ್ಟಸಮುದ್ಯಮೇ ।
> ವಿರೂಪಕಾರ್ಯಜನನಂ ವಿರೂಪದ್ವಯಸಂಗತಿಃ ॥
> ಜಿಗೀಷವೋ ಜಿತಾ ಪ್ರಾಪ್ಯ ಜಯೀಂದ್ರಂ ಪಾಂಡುರಾನನೈಃ ।
> ಸ್ತುವಂತಿ ಕೀರ್ತಿಮಸಿತಾಂ ಬುಧಾಃ ಕ್ವೈತೇ ಕ್ವ ತಜ್ಜಯಃ ॥

ವೇಲಾ ಶೈಲಾವರುದ್ಧಾ ಶಶಿರುಚಿರತಥಾಭೂತಯಾತೀದಮಾ ತೇ ।
ಗಾಂ ಗಂಗಾಕ್ಷ್ಣೋತಿ ವಿಷ್ಣೋರಥ
ಉಪರಿ ಪದಾದ್ವ್ಯಾಪ್ತ್ಯಯಾತ್ಯೇತದಾ ಚ ।।
ಶ್ವೇತಂತೇ ಕೇ ನ ಲೋಕಾಃ ಪ್ರಸೃಮರಘನ-
ಕರ್ಪೂರಪೂರಾಭಮೂರ್ತ್ಯಾ ।
ಕೀರ್ತ್ಯಾ ಯೋಗೀಂದ್ರಧೀರಶ್ರುತಚಣ
ಸುಗುಣೈರುತ್ತರಾಫಲ್ಗುನೀತೇ ।।12।।

ಅನ್ವಯಾರ್ಥಃ – **ಹೇ ಶ್ರುತಚಣ** – ಹೇ ಅತಿಶಯವಾಗಿ ಪ್ರಸಿದ್ಧರಾಗಿರುವಂಥ, (ಶ್ರೀಯೋಗೀಂದ್ರತೀರ್ಥರೇ), **ಸುಗುಣೈಃ** – ಉತ್ತಮವಾದ ಗುಣಗಳಿಂದ ಕೂಡಿರುವುದರಿಂದ, **ಉತ್ತರಾಫಲ್ಗುನೀತೆ** – **ಉತ್ತರ** – ಶ್ರೇಷ್ಠವಾದ ಹಾಗೂ, **ಅಫಲ್ಗು** – ಸಾರಭೂತವಾಗಿರುವ, **ನೀತೆ** – ನೀತಿ ಎಂದರೆ ಚಾರಿತ್ರ್ಯವುಳ್ಳಂಥ, **ಯೋಗೀಂದ್ರಧೀರ** – ಜ್ಞಾನಗಾಂಭೀರ್ಯದಿಂದ ಧೀರರಾದ ಯೋಗೀಂದ್ರತೀರ್ಥರೇ, **ತೇ** – ನಿಮ್ಮ, **ಪ್ರಸೃಮರಘನಕರ್ಪೂರಪೂರಾಭಮೂರ್ತ್ಯಾ** – **ಪ್ರಸೃಮರ** – ಎಲ್ಲ ಕಡೆಗೆ ವಿಶೇಷವಾಗಿ ಪ್ರಸೃತವಾಗಿರುವ, **ಘನ** – ನಿಬಿಡವಾಗಿರುವ, **ಕರ್ಪೂರ** – ಕರ್ಪೂರದ **ಪೂರ** – ರಾಶಿಯ, **ಆಭಾ** – ಕಾಂತಿಯಂತೆ ಕಾಂತಿಯುಳ್ಳ, **ಮೂರ್ತ್ಯಾ** – ಸ್ವರೂಪವುಳ್ಳಂಥ, **ಕೀರ್ತ್ಯಾ** – ಕೀರ್ತಿಯಿಂದ, **ಕೇ** – ಯಾವ, **ಲೋಕಾಃ** – ಲೋಕಗಳು, **ನ ಶ್ವೇತಂತೇ** – ಬೆಳ್ಳಗಾಗುವುದಿಲ್ಲ ? ಎಲ್ಲ ಲೋಕಗಳು ಶುಭ್ರವಾಗಿ ಶೋಭಿಸುತ್ತವೆ. ಕೀರ್ತಿಯು ಎಂಥದು ಎಂಬುದನ್ನು ವರ್ಣಿಸುತ್ತಾರೆ, **ಶಶಿರುಚಿಃ** – ಚಂದ್ರನ ಕಿರಣವು, **ವೇಲಾಶೈಲಾವರುದ್ಧಾ** – ಭೂಮಂಡಲದ ಗಡಿಯಲ್ಲಿಯ ಪರ್ವತದಿಂದ

Rarest Archiver

ತಡೆಗಟ್ಟಲ್ಪಟ್ಟಿರುತ್ತದೆ. ಆದರೆ ಶ್ರೀಯೋಗೀಂದ್ರತೀರ್ಥರ ಕೀರ್ತಿಯು, **ಅತಥಾ ಭೂತಯಾ** - ಆ ರೀತಿಯಾಗಿ ಇಲ್ಲದಿರುವುದರಿಂದ, **ಅತೀದಮಾ** - ಚಂದ್ರನನ್ನೂ ಮೀರಿಸುವಂತಹದಾಗಿದೆ, **ಚ** - ಮತ್ತು, **ಗಂಗಾ** - ಗಂಗಾಪ್ರವಾಹವು, **ವಿಷ್ಣೋಃ** - ವಿಷ್ಣುವಿನ, **ಪದಾತ್** - ಪಾದದಿಂದ, **ಅಧಃ** - ಕೆಳಗೆ ಇರುವ, **ಗಾಂ** - ಭೂಮಂಡಲವನ್ನು, **ಅಕ್ರೋಣ್ಣೀತಿ** - ವ್ಯಾಪಿಸುತ್ತದೆ, ಆದರೆ ಶ್ರೀಯೋಗೀಂದ್ರತೀರ್ಥರ ಕೀರ್ತಿಯ ಪ್ರವಾಹವು, **ವಿಷ್ಣೋಃ** - ವಿಷ್ಣುವಿನ, **ಪದಾತ್** - ಪಾದದಿಂದ, **ಅಧಃ** - ಕೆಳಗೆ ಇರುವ, **ಗಾಂ** - ಭೂಮಂಡಲವನ್ನು, ಮತ್ತು **ಉಪರಿ** - ಪಾದದ ಮೇಲೆ ಇರುವ ವೈಕುಂಠ ಲೋಕದಲ್ಲಿ, **ವ್ಯಾಪ್ತಯಾ** - ವ್ಯಾಪಿಸಿರುವುದರಿಂದ, **ಅತ್ಯೇತರಾ** - ಗಂಗಾ ಪ್ರವಾಹವನ್ನೂ ಮೀರಿಸಿದೆ. ಈ ರೀತಿಯಾಗಿ ಎಲ್ಲ ಲೋಕಗಳಲ್ಲಿ ವ್ಯಾಪ್ತವಾಗಿರುವ ಕೀರ್ತಿಪ್ರಭೆಯು ಆ ಲೋಕಗಳನ್ನೆಲ್ಲ ಶುಭ್ರವಾಗಿ ಮಾಡಿಬಿಡುತ್ತದೆ ಎಂದು ಅರ್ಥ.

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರು ಅನೇಕ ಸದ್ಗುಣಗಳಿಂದ ಶೋಭಿತರು. ಅವರು ಮಾಡುವ ಕಾರ್ಯಗಳು, ಉಪದೇಶ ಮಾಡುವ ತವಗವಗಳು, ಅವರ ಉಪನ್ಯಾಸ ಶೈಲಿ ಇವೆಲ್ಲ ಬಹಳ ಉತ್ಕೃಷ್ಟವೂ ಸಾರವತ್ತಾಗಿಯೂ ಇದ್ದವು. ಅವರ ಕೀರ್ತಿಯು ಎಲ್ಲ ಲೋಕಗಳಲ್ಲಿಯೂ ಪ್ರಸೃತವಾಗಿದ್ದಿತು. ಕೀರ್ತಿಯು ಶುಭ್ರವಾದ ಕಾಂತಿಯುಳ್ಳದ್ದು ಎಂದು ವರ್ಣಿಸುವುದು ಸಾಮಾನ್ಯ ಪರಿಪಾಠ. ದಟ್ಟವಾಗಿ ಶೇಖರಿಸಿದ್ದ ಕರ್ಪೂರದ ರಾಶಿಯು ಬೆಳ್ಳಗಾಗಿ ಶೋಭಿಸುವುದಲ್ಲದೇ, ಎಲ್ಲೆಡೆ ಅದರ ಸುವಾಸನೆಯೂ ಪಸರಿಸಿರುತ್ತದೆ. ಕರ್ಪೂರದ ಕಾಂತಿಯಂತೆ ಕಾಂತಿಯನ್ನು ಪಡೆದಿರುವ ಕೀರ್ತಿಪ್ರಭೆಯು ಎಲ್ಲ ಲೋಕಗಳನ್ನು ಶುಭ್ರವಾಗಿ ಮಾಡಿದೆ ಎಂದು ಕವಿಗಳು ಉತ್ಪ್ರೇಕ್ಷಿಸುತ್ತಾರೆ. ಚಂದ್ರಕಿರಣಗಳ ಕಾಂತಿಯೂ ಬೆಳ್ಳಗಿರುತ್ತದೆ. ಅದರಂತೆ ಗಂಗಾಪ್ರವಾಹವೂ ಬೆಳ್ಳಗೆ ಇರುತ್ತದೆ. ಚಂದ್ರಕಿರಣಗಳು ಭೂಮಂಡಲದ ಪರಿಮಿತಿಯನ್ನು ದಾಟಿ ಮುಂದೆ ಹೋಗುವುದಿಲ್ಲ. ಭೂವಲಯದ ಸುತ್ತಲಿರುವ ಬೆಟ್ಟದಿಂದ ಚಂದ್ರಕಿರಣಗಳು ಅವರುದ್ಧವಾಗಿ ನಿಂತುಬಿಡುತ್ತವೆ. ಆದರೆ ಶ್ರೀಯೋಗೀಂದ್ರತೀರ್ಥರ ಕೀರ್ತಿಪ್ರಭೆಯು ಭೂಮಂಡಲವನ್ನೂ ದಾಟಿ ಹೋಗುವ ಸಾಮರ್ಥ್ಯವುಳ್ಳದ್ದಾಗಿರುವುದರಿಂದ ಅದು ಚಂದ್ರನನ್ನೂ ಪರಾಭವಗೊಳಿಸಿದೆ. ಗಂಗೆಯ ಪ್ರವಾಹವು ವಿಷ್ಣುವಿನ ವಾಮಪಾದದ ಅಂಗುಷ್ಠದಿಂದ ಹೊರಟು,

Rarest Archiver

ಅವನ ಪಾದದ ಕೆಳಭಾಗದಲ್ಲಿಯ ಭೂಮಂಡಲವನ್ನು ಮಾತ್ರ ವ್ಯಾಪಿಸಿದೆ. ಆದರೆ ಶ್ರೀಯೋಗೀಂದ್ರತೀರ್ಥರ ಕೀರ್ತಿಪ್ರವಾಹವು ವಿಷ್ಣುಪಾದದ ಕೆಳಗಿರುವ ಭೂಮಂಡಲವನ್ನೆಲ್ಲ ವ್ಯಾಪಿಸಿದ್ದಲ್ಲದೇ, ಮೇಲ್ಭಾಗದಲ್ಲಿರುವ ವೈಕುಂಠಲೋಕವನ್ನೂ ವ್ಯಾಪಿಸಿದ್ದರಿಂದ ಗಂಗೆಗಿಂತಲೂ ಹೆಚ್ಚಿನ ಮಹತ್ತೆಯುಳ್ಳದ್ದಾಗಿದೆ ಎಂಬುದು ತಾತ್ಪರ್ಯ.

ಈ ಶ್ಲೋಕದಲ್ಲಿ ಸಂಸಾರಸಾಗರದಿಂದ ತಾರಣ ಮಾಡಲು ಉಪಯುಕ್ತವಾದ ಕೆಳಗಿನ ಉಪಾಯಗಳು ಸೂಚಿತವಾಗಿವೆ.

1) ಚಂದ್ರಕಿರಣಗಳು ಕಾಮಪಾಶದ ಸಂಕೇತಗಳಾಗಿವೆ. ಶ್ರೀಯೋಗೀಂದ್ರತೀರ್ಥರ ಉಪದೇಶ ವಚನಗಳನ್ನು ಕೇಳಿ ಅದರಂತೆ ಸಾಧನಮಾರ್ಗದಲ್ಲಿ ತೊಡಗಿರುವ ಭಕ್ತರುಗಳು ಕಾಮಾದ್ಯರಿಷಡ್ವರ್ಗಗಳ ಪಾಶವನ್ನು ಮೀರಿಸಿ ದೂರವಿರಲು ಸಮರ್ಥರಾಗುತ್ತಾರೆ.

2) ಗಂಗಾಪ್ರವಾಹದಲ್ಲಿ ಸ್ನಾನ ಮಾಡಿ ಬಹಿಃಶುದ್ಧಿಯನ್ನು ಮಾತ್ರ ಪಡೆಯುವುದು ಸಾಧ್ಯವಿದೆ, ಆದರೆ ಶ್ರೀಯೋಗೀಂದ್ರರು ಉಪದೇಶಿಸಿದ ಸಾಧನಮಾರ್ಗದ ಪ್ರವಾಹದಲ್ಲಿ ಮಿಂದವರಿಗೆ ಅಂತಃಶುದ್ಧಿ ಹಾಗೂ ಬಹಿಃಶುದ್ಧಿ ಎರಡೂ ದೊರೆಯುತ್ತವೆ.

3) ಸದ್ಗುಣಗಳು ಹಾಗೂ ಸಾರವತ್ತಾದ ಚಾರಿತ್ರ್ಯ ಇವು ಸಾಧನಜೀವಿಗೆ ಅವಶ್ಯವಾಗಿ ಬೇಕು.

ಇಲ್ಲಿ ಉತ್ತರಾಫಲ್ಗುನೀ ನಕ್ಷತ್ರದ ಉಲ್ಲೇಖವಿದೆ.

ವಿಗ್ರಹವಾಕ್ಯಗಳು– ವೇಲಾಶೈಲಾವರುದ್ಧಾ – ವೇಲಾಯಾಂ ಶೈಲಃ ವೇಲಾಶೈಲಃ ತೇನ ಅವರುದ್ಧಾ. **ಶಶಿರುಚಿಃ** – ಶಶೇಃ ರುಚಿಃ. **ಪ್ರಸೃಮರಘನಕರ್ಪೂರಪೂರಾಭಮೂರ್ತ್ಯಾ** – ಕರ್ಪೂರಸ್ಯ ಪೂರಂ, ಘನಂ ಚ ತತ್ ಕರ್ಪೂರಪೂರಂ, ಪ್ರಸೃಮರಂ ಚ ತತ್ ಘನಕರ್ಪೂರಪೂರಂ, ತಸ್ಯ ಆಭಾ ಇವ ಆಭಾ ಯಸ್ಯಾಃ ಸಾ। ಪ್ರಸೃಮರಘನಕರ್ಪೂರಪೂರಾಭಾ ಮೂರ್ತಿಃ ಯಸ್ಯಾಃ ಸಾ ತಯಾ. ಉತ್ತರಾಫಲ್ಗುನೀತೇ –

Rarest Archiver

ಉತ್ತರಾ ಚ ಸಾ ಅಫಲ್ಗುಶ್ಚ ತಾದೃಶೀ ನೀತಿಃ ಯಸ್ಯ ಸಃ ತತ್ಸಂಬುದ್ಧಿಃ.

ಕೋಶಗಳು– ವೇಲಾ - ''ವೇಲಾ ಕಾಲೇ ಚ ಸೀಮಾಯಾಮಬ್ಧೇಃ ಕೂಲವಿಕಾರಯೋಃ । ಅಕ್ಲಿಷ್ಟ ಮರಣೇ ರಾಗೇ ಈಶ್ವರಸ್ಯ ಚ ಭೋಜನೇ'', ಇತಿಮೇದಿನೀ. ಶೈಲಃ - ''ಶೈಲೋ ಭೂಭೃತಿ ಶೈಲಂ ತು ಶೈಲೇಯೇ ತಾರ್ಕ್ಷ್ಯಶೈಲಕೇ'' ಇತಿ ಹೈಮಃ । ಗೌಃ - ''ಗೌರ್ನಾದಿತ್ಯೇ ಬಲೀವರ್ದೇ ಕಿರಣಕ್ರತುಭೇದಯೋಃ । ಸ್ತ್ರೀ ತು ಸ್ಯಾದ್ದಿಶಿ ಭಾರತ್ಯಾಂ ಭೂಮೌ ಚ ಸುರಭಾವಪಿ''. ರಶ್ಮೀ - ನೃಸ್ತ್ರಿಯೋಃ ಸ್ವರ್ಗವಜ್ರಾಂಬುರಶ್ಮಿದೃಗ್ಬಾಣಲೋಮಸು'' ಇತಿ ಕೇಶವಃ. ಕರ್ಪೂರಃ - ''ವೇಣು ಸಾರಸ್ತು ಕರ್ಪೂರೋ ಚಂದ್ರಭಸ್ಮಹಿಮಾಹ್ವಯಂ, ವೇಧಕಃ'' ಇತಿ ತ್ರಿಕಾಂಡ ಶೇಷಃ. ಫಲ್ಗು - ''ಫಲ್ಗುಃ ಕಾಕೋದುಂಬರಿಕೇ ವೃಕ್ಷೇ ನಿರರ್ಥಕೇಪಿ ಚ'' ಇತಿ ಹೈಮಃ.

ವ್ಯಾಕರಣ ವಿಚಾರಗಳು– ''ತೇನ ವಿತ್ತಶ್ಚುಂಚುಪ್ ಚಣಪೌ'' (5-2-26), - ವಿದ್ಯಯಾ ವಿತ್ತಃ ವಿದ್ಯಾಚುಂಚುಃ ವಿದ್ಯಾಚಣಃ. ಇದರಂತೆಯೇ ಶ್ರುತಚಣಃ ಎಂಬ ರೂಪವಾಗುತ್ತದೆ. ಅತೀದಮಾ - ಇಮಾಂ ಶಶಿರುಚಿಂ ಅತಿಕ್ರಾಂತಯಾ. ಇಲ್ಲಿ ''ಉಪಸರ್ಜನತ್ವೇನ ಸರ್ವನಾಮತ್ವಾಭಾವಾತ್ ಕಾರ್ಯಾಭಾವಃ'' ಎಂಬ ನಿಯಮವು ಅನ್ವಯಿಸುತ್ತದೆ.

ವೇಲಾಶ್ಶೈಲಾಲವಾಲಾದ್ವಯಿತ ವಿಪುಲಾವಪ್ರತಶ್ಶ್ರೋತ್ರರೂಢಾಂ ।
ಸಂಪೂರ್ಣಾಂ ಪ್ರೋರ್ಣುವಾನಾಂ ಭುಜಗಜಗದಲಂ
ರೂಢಿಮೂಲೈರ್ವಿಶಾಲೈಃ ।
ಅಷ್ಟಾವಷ್ಟಂಭಕಾಷ್ಠಾಶ್ರಯಕೃತವಿತತಿಂ ಲಕ್ಷ್ಯಭೇನ್ನಕ್ಷಸೂನಾಂ ।
ಕೋ ಯೋಗೀಂದ್ರವ್ರತೀಂದೋರ್ನಿರವಧಿಮಹಹ-
ಸ್ತೋಷ್ಯತೇ ಕೀರ್ತಿವಲ್ಲೀಂ ।।13।।

ಅನ್ವಯಾರ್ಥಃ - ವೇಲಾಶ್ಶೈಲಾಲವಾಲಾತ್ - ವೈಲಾಶ್ಶೈಲ - ಭೂಮಂಡಲದ ಸುತ್ತಲಿರುವ ಪರ್ವತವೆಂಬ, **ಆಲವಾಲಾತ್** - ಗಿಡದ ಪಾತಿಯಿಂದ (ಗಿಡದ ಬೇರಿನ ಸುತ್ತಲೂ ಮಾಡುವ ಮಣ್ಣಿನ ಒಡ್ಡಿನಿಂದ), **ವಲಯಿತವಿಪುಲಾವಪ್ರತಃ - ವಲಯಿತ**

Rarest Archiver

- ಸುತ್ತುಗಟ್ಟಲ್ಪಟ್ಟಿರುವ, **ವಿಪುಲಾ** - ಭೂಮಿಯೆಂಬ, **ವಪ್ರತಃ** - ಕ್ಷೇತ್ರದಿಂದ (ಗದ್ದೆಯಿಂದ), **ಉತ್ಪ್ರರೂಢಾಂ** - ಚೆನ್ನಾಗಿ ಬೆಳೆದಿರುವ, **ವಿಶಾಲೈಃ** - ವಿಶಾಲವಾದ, **ರೂಢಿಮೂಲೈಃ** - ಸರ್ವತ್ರ ಖ್ಯಾತಿಯೆಂಬ ಬೇರುಗಳಿಂದ, **ಭುಜಗಜಗತ್** - **ಭುಜಗ** - ಸರ್ಪಗಳ, **ಜಗತ್** - ಜಗತ್ತು ಅಂದರೆ ಪಾತಾಳವನ್ನು, **ಅಲಂ** - ಚೆನ್ನಾಗಿ - **ಸಂಪೂರ್ಣಂ** - ವ್ಯಾಪಕವಾಗಿ, **ಪ್ರೋರ್ಣುವಾನಾಂ** - ಆಚ್ಛಾದಿಸಿರುವ, **ಅಷ್ಟಾವಷ್ಟಂಭಕಾಷ್ಠಾಶ್ರಯಕೃತವಿತತಿಂ** - **ಅಷ್ಟ** - ಎಂಟು, **ಅವಷ್ಟಂಭ** - ಕಂಭಗಳಂತಿರುವ, **ಕಾಷ್ಠಾಃ** - ದಿಕ್ಕುಗಳನ್ನೇ, **ಆಶ್ರಯ** - ಆಶ್ರಯವಾಗಿ ಇಟ್ಟುಕೊಂಡು, **ಕೃತವಿತತಿಂ** - ವಿಸ್ತಾರವನ್ನು ಪಡೆದಿರುವ, ಅಂದರೆ ಎಲ್ಲ ಎಂಟೂ ದಿಕ್ಕುಗಳಲ್ಲಿ ಪಸರಿಸಿರುವ, **ಲಕ್ಷ್ಯಭೇನರ್ಕ್ಷಸೂನಾಂ** - **ಲಕ್ಷ್ಯ** - ದೃಗ್ಗೋಚರವಾಗಿರುವ, ಭ - ನಕ್ಷತ್ರೇಶನಾಗಿರುವ ಚಂದ್ರ, ಇನ - ಸೂರ್ಯ -ಹಾಗೂ, **ಋಕ್ಷ** - ಇತರ ನಕ್ಷತ್ರಗಳೇ, **ಸೂನಾಂ** - ಪುಷ್ಪಗಳಂತಿರುವ, **ನಿರವಧಿಂ** - ಅನಂತವಾಗಿರುವ, **ಯೋಗೀಂದ್ರವ್ರತೀಂದೋಃ** - ಶ್ರೀಯೋಗೀಂದ್ರತೀರ್ಥರೆಂಬ ಶ್ರೇಷ್ಠರಾದ ವ್ರತಿಗಳ, **ಕೀರ್ತಿವಲ್ಲೀಂ** - ಕೀರ್ತಿಯೆಂಬ ಲತೆಯನ್ನು, **ಕಃ** - ಯಾರು ತಾನೇ, **ಸ್ತೋಷ್ಯತೇ** - ಸ್ತೋತ್ರ ಮಾಡಲು, ವರ್ಣಿಸಲು ಸಮರ್ಥರಾದಾರು ? ಯಾರೂ ವರ್ಣಿಸಲಾರರು. **ಅಹಹ** - ಆಶ್ಚರ್ಯವು.

ತಾತ್ಪರ್ಯಾರ್ಥ : ಈ ಶ್ಲೋಕದಲ್ಲಿ ಕೀರ್ತಿಯನ್ನು ಒಂದು ವಿಶಾಲವಾದ ಬಳ್ಳಿಯೆಂದು ಗಮನಿಸಿ ಅದರ ವಿಸ್ತೃತಿಯನ್ನೂ, ಸ್ವರೂಪವನ್ನೂ ವರ್ಣಿಸುತ್ತಾರೆ. ಬಳ್ಳಿಗಳ ಮೂಲದ ಸಮೀಪದಲ್ಲಿ ವರ್ತುಲಾಕಾರವಾಗಿ ಮಡಿ ಮಾಡುವ ಪರಿಪಾಠವಿದೆಯಷ್ಟೇ. ಈ ಕೀರ್ತಿಲತೆಗೆ ಭೂಮಂಡಲದ ಸುತ್ತಲಿರುವ ಪರ್ವತವೇ ಒಡ್ಡು ಇದ್ದಂತೆ ಆಗಿದೆ. ಭೂಮಂಡಲವೇ ಇದರ ಮಡಿಯಲ್ಲಿಯ ಮಣ್ಣು. ಕೀರ್ತಿಲತೆಯ ಪ್ರಸಿದ್ಧಿ ಎಂಬ ನಾನಾ ತರಹದ ಬೇರುಗಳು ಪಾತಾಳ ಲೋಕದ ವರೆಗೂ ಪಸರಿಸಿವೆ. ಬಳ್ಳಿಯು ಹಬ್ಬಲು ಅನುಕೂಲವಾಗಲೆಂದು ಕಟ್ಟಿಗೆಯ ಕಂಬಗಳನ್ನು ನಿಲ್ಲಿಸಿ ಹಂದರವನ್ನು ಕಟ್ಟುತ್ತಾರಷ್ಟೇ. ಈ ಕೀರ್ತಿಲತೆಗೆ ಅಷ್ಟದಿಕ್ಕುಗಳೇ ಈ ಹಂದರದ ಕಂಬಗಳಾಗಿವೆ. ಇಲ್ಲಿ ''ಕಾಷ್ಠಾ'' ಎಂದರೆ ದಿಕ್ಕುಗಳೆಂದೂ ''ಕಾಷ್ಠಂ'' ಎಂದರೆ ಕಟ್ಟಿಗೆಯ ಕಂಬವೆಂದೂ ಕಾಷ್ಠ ಶಬ್ದದ ವೈಚಿತ್ರ್ಯವನ್ನು ಉಪಯೋಗಿಸಿದ್ದಾರೆ. ಈ ಕೀರ್ತಿಲತೆಗೆ ಸೂರ್ಯ, ಚಂದ್ರ, ನಕ್ಷತ್ರಗಳೇ ಹೂವುಗಳಿದ್ದಂತೆ. ಈ ಲತೆಯ ವಿಸ್ತಾರಕ್ಕೆ

Rarest Archiver

ಎಲ್ಲಿಯೇ ಇಲ್ಲ. ಅದೆಷ್ಟು ಅಮೋಘವಾಗಿದೆ ಈ ಕೀರ್ತಿಯೆಂಬ ಬಳ್ಳಿಯು !

ಈ ಶ್ಲೋಕದಲ್ಲಿ ಹಸ್ತಾನಕ್ಷತ್ರದ ಉಲ್ಲೇಖವಿದೆ. ಈ ಶ್ಲೋಕದಲ್ಲಿ ಸಂಸಾರಾರ್ಣವ ತಾರಕವಾದ ಈ ಕೆಳಗಿನ ಉಪಾಯವನ್ನು ನಿರೂಪಿಸಲಾಗಿದೆ.

1) ಅಗಮ್ಯಮಹಿಮರಾದ ಶ್ರೀಯೋಗೀಂದ್ರತೀರ್ಥರ ಕೀರ್ತಿಯು ದಶದಿಕ್ಕುಗಳಲ್ಲಿಯೂ ವ್ಯಾಪಿಸಿದೆ (ಅಷ್ಟದಿಕ್ಕುಗಳು, ಊರ್ಧ್ವಲೋಕ, ಹಾಗೂ ಅಧೋಲೋಕ ಸೇರಿ ದಶದಿಕ್ಕುಗಳು). ''ಇಂಥ ಕೀರ್ತಿಯನ್ನು ಅದಾರು ವರ್ಣಿಸಲು ಸಮರ್ಥರಾದಾರು ?'' ಎಂದು ಹೇಳುತ್ತ ಶ್ರೀಯೋಗೀಂದ್ರತೀರ್ಥರ ಕೀರ್ತಿಯ ವಿಸ್ತೃತಿಯನ್ನೂ ಹಾಗೂ ಮಹತಿಯನ್ನೂ ಶ್ರೀಸುಮತೀಂದ್ರತೀರ್ಥರು ತಾವೇ ಸ್ತುತಿಸಿದ್ದಾರೆ.

ಅಸ್ಮದ್ಗುರೂಣಾಂ ಆಧಿಕ್ಯಂ ಕವಿಃ ಕೋವಾನುವರ್ಣಯೇತ್ ।
ತಥಾಪಿ ತತ್ಪ್ರಸಾದೇನ ಭಕ್ತ್ಯಾ ಕಿಂಚಿದ್ವದಾಮ್ಯಹಮ್ ॥

-- ''ಶ್ರೀರಾಘವೇಂದ್ರಗುರುಗಳ ಮಹಾತ್ಮ್ಯೆಯನ್ನು ವರ್ಣಿಸುವುದು ನಮ್ಮಂಥವರಿಗೆ ಸಾಧ್ಯವಿಲ್ಲ. ಆದರೂ ನಮ್ಮ ಗುರುಗಳ ಅನುಗ್ರಹದಿಂದ ಯಥಾಮತಿ ಭಕ್ತಿಯಿಂದ ನಿರೂಪಿಸುವೆವು''. ಎಂದು 'ಶ್ರೀರಾಘವೇಂದ್ರವಿಜಯ'ವೆಂಬ ಮಹಾಕಾವ್ಯದ ಕರ್ತೃಗಳು ಹೇಳಿದಂತೆ ಶ್ರೀಸುಮತೀಂದ್ರತೀರ್ಥರು ಶ್ರೀಯೋಗೀಂದ್ರತೀರ್ಥರ ಕೀರ್ತಿಯನ್ನು ವರ್ಣಿಸಿದ್ದಾರೆಂದು ತಿಳಿಯಬೇಕು.

ಇದೆಲ್ಲವನ್ನು ಗಮನಿಸಿದಾಗ ಸಂಸಾರಸಾಗರದಲ್ಲಿ ಬಿದ್ದಿರುವ ಯೋಗ್ಯಜೀವಿಯ ಉದ್ಧಾರವಾಗಬೇಕಾದರೆ ಗುರುಗಳ ಅನುಗ್ರಹವನ್ನು ಸಂಪಾದಿಸಬೇಕು. ಅದಕ್ಕಾಗಿ ಗುರುಗಳ ಮಹಿಮೆಗಳು ಅಗಮ್ಯವಾಗಿದ್ದರೂ ಯಥಾಮತಿ ಸ್ತುತಿಸಿ ಅವರ ಅನುಗ್ರಹವನ್ನು ಸಂಪಾದಿಸಬೇಕು ಎಂಬ ವಿಷಯವು ವಿದಿತವಾಗುವುದು.

ವಿಗ್ರಹ ವಾಕ್ಯಗಳು- ವೇಲಾಶ್ಶೈಲಾಲವಾಲಾತ್ - ವೇಲಾಯಾಃ ಶೈಲಃ, ತಸ್ಯ ಆಲವಾಲಂ ತಸ್ಮಾತ್. **ವಲಯಿತವಿಪುಲಾವಪ್ರತಃ** - ವಲಯಿತಾ ಚ ಸಾ ವಿಪುಲಾ ಚ, ಸಾ ಏವ ವಪ್ರಃ ತಸ್ಮಾತ್. **ಭುಜಗಜಗತ್** - ಭುಜಗಾನಾಂ ಜಗತ್ ತತ್.

Rarest Archiver

ಆಷ್ಟಾವಷ್ಟಂಭಕಾಷ್ಠಾಶ್ರಯಕೃತವಿತತಿಂ - ಅವಷ್ಟಂಭಾಃ ಇವ ಕಾಷ್ಠಾಃ, ಅಷ್ಟ ಅವಷ್ಟಂಭಕಾಷ್ಠಾಃ, ತಾಸಾಂ ಆಶ್ರಯಃ, ತೇನ ಕೃತಾ ವಿತತಿಃ ಯಸ್ಯಾಃ ಸಾ ತಾಂ. **ಲಕ್ಷ್ಯಭೇನ್ಯಕ್ಷಸೂನಾಂ** - ಭಶ್ಚ ಇನಶ್ಚ ಋಕ್ಷಾಣಿ ಚ - ಭೇನ್ಯಕ್ಷಾಣಿ, ಭೇನ್ಯಕ್ಷಾಣಿ ಏವ ಸೂನವಃ, ಲಕ್ಷ್ಯಾ ಭೇನ್ಯಕ್ಷಸೂನವಃ ಯಸ್ಯಾಃ ಸಾ ತಾಂ. **ಯೋಗೀಂದ್ರವ್ರತೀಂದೋಃ** - ವ್ರತೀನಾಂ ಇಂದುಃ ವ್ರತೀಂದುಃ, ಯೋಗೀಂದ್ರ ಏವ ವ್ರತೀಂದುಃ ತಸ್ಯ. **ನಿರವಧಿಂ** - ನ ವಿದ್ಯತೇ ಅವಧಿಃ ಯಸ್ಯಾಃ ಸಾ ತಾಂ. **ಕೀರ್ತಿವಲ್ಲೀಂ** - ಕೀರ್ತಿಃ ಏವ ವಲ್ಲೀ ತಾಂ.

ಕೋಶಗಳು- ವೇಲಾ - ''ವೇಲಾ ಕಾಲೇ ಚ ರಾಗೇ ಚ ಸೀಮ್ನಿ ವಾಚಿ ಬುಧಸ್ತ್ರಿಯಾಂ'' - ವಿಶ್ವ. ಆಲವಾಲ - ''ಸ್ಯಾದಾಲವಾಲಮಾಲಾಪೋ''(ಅಮರ 1-13-29). ''ಆಲವಾಲವಲಯೇಷು ಶಾಖಿನಾಂ''(ಯದು. 17-23). ವಪ್ರ - ''ವಪ್ರಸ್ತ್ರಾತೇ ಪುಮಾನಸ್ತ್ರೀ ರೇಣೌ ಕ್ಷೇತ್ರೇ ಚಯೇ ತಟೇ'' (ಮೇದಿನೀ). ಭುಜಗ -''ಸರ್ಪಃಪೃದಾಕುರ್ಭುಜಗೋಭುಜಂಗೋಹಿರ್ಭುಜಂಗಮಃ''(ಅಮರ1-11-16). ಅವಷ್ಟಂಭ - ''ಅವಷ್ಟಂಭಃ ಸುವರ್ಣೇ ಚ ಸ್ತಂಭಪ್ರಾರಂಭಯೋರಪಿ''(ಮೇದಿ.). ಕಾಷ್ಠಾಃ - ''ದಿಶಸ್ತು ಕಕುಭಃ ಕಾಷ್ಠಾ ಆಶಾಶ್ಚ ಹರಿತಶ್ಚ ತಾಃ(ಅಮರ 1-6-1); ''ಸಾದ್ದಿಶಿ ಸ್ಥಾನಮಾತ್ರೇ ಚ''(ವಿಶ್ವ). ಭ, ಋಕ್ಷಂ - ''ನಕ್ಷತ್ರಮೃಕ್ಷಂ ಭಂ ತಾರಾ ತಾರಕಾಪ್ಯುಡು ವಾಸ್ತ್ರಿಯಾಮ್''(ಅಮರ 1-6-45). ಇನ - ''ಇನಃ ಸೂರ್ಯೇ ಪ್ರಭೌ'' (ಅಮರ 3-5-111). ಅಹಹ - ''ಅಹಹೇತ್ಯದ್ಭುತೇ ಖೇದೇ'' (ಅಮರ 3-5-512).

ವ್ಯಾಕರಣ ವಿಚಾರಗಳು- ಸ್ತೋಷ್ಯತೇ - ಸ್ತುಧಾತು 2ನೇಯ ಗಣ ಉಭಯಪದೀ ಸ್ತೌತಿ - ಸ್ತವೀತಿ, ಸ್ತುತೇ- ಸ್ತುವೀತೆ 2ನೇಯ ಗಣ ಸ್ತೋಷ್ಯತಿ, ಸ್ತೋಷ್ಯತೇ.

ನ್ಯಸ್ತಂ ಪಾತಾಲಪಾತ್ರೇ ಕಲಶಜಲನಿಧಿಂ ಕ್ಷೀರಪಾಯಂ ಪಿಬಂತೀ ।
ಪಾದಾಗ್ರಾಸಕ್ತನಕ್ತಂದಿವಲಸಿತಕಲೇಶಾರ್ಕಶಾಲೂಕಲೇಶಾ ।।
ಬ್ರಹ್ಮಾಂಡಾಖಂಡನೀಡೇ ಭತತಿಗುರುಗರುತ್ ಕ್ಷ್ವೋದಚಿತ್ರಾಂತರಿಕ್ಷಾ ।
ಧೀಮನ್ಯೋಗೀಂದ್ರಯೋಗಿನ್ ವಿಲಸತಿ ಭವತಃ
ಕೀರ್ತಿಕೇಲೀಮರಾಲೀ ।।14।।

Rarest Archiver

ಅನ್ವಯಾರ್ಥಃ - (ಭೋ) - ಧೀಮನ್ - ಬುದ್ಧಿಶಾಲಿಗಳಾದ, **ಯೋಗೀಂದ್ರ ಯೋಗಿನ್** - ಯೋಗೀಂದ್ರಯೋಗಿಗಳೇ, **ಭವತಃ** - ತಮ್ಮ, **ಕೀರ್ತಿಕೇಲೀಮರಾಲೀ - ಕೀರ್ತಿ** - ಕೀರ್ತಿಯೆಂಬ, **ಕೇಲೀಮರಾಲೀ** - ಲೀಲಾಹಂಸಿಯು, **ಬ್ರಹ್ಮಾಂಡಾಖಂಡನೀಡೇ** - ಬ್ರಹ್ಮಾಂಡವೆಂಬ ಅಖಂಡವಾದ ಪಂಜರದಲ್ಲಿ, **ವಿಲಸತಿ**- ವಿಶೇಷವಾಗಿ ಶೋಭಿಸುತ್ತದೆ. ಲೀಲಾಹಂಸಿಯನ್ನೂ, ಕೀರ್ತಿಯ ವಿಸ್ತಾರವನ್ನೂ ವರ್ಣಿಸುತ್ತಾರೆ. **ಪಾತಾಲಪಾತ್ರೇ** - ಪಾತಾಲವೆಂಬ ಪಾತ್ರೆಯಲ್ಲಿ, **ನ್ಯಸ್ತಂ** - ಇಡಲ್ಪಟ್ಟಿರುವ, **ಕಲಶಜಲನಿಧಿಂ** - ಕಲಶದಲ್ಲಿಯ ಕ್ಷೀರಸಾಗರವನ್ನು, **ಕ್ಷೀರಪಾಯಂ** - ಹಾಲನ್ನು ಕುಡಿಯುವಂತೆ, **ಪಿಬಂತೀ** - ಕುಡಿಯುವ, ಅಂದರೆ ಪಾತಾಳಲೋಕದಲ್ಲಿಯೂ ಪಸರಿಸಿರುವ (ಕೀರ್ತಿಯು), **ಪಾದಾಗ್ರಾಸಕ್ತನಕ್ತಂದಿವಲಸಿತಕಲೇಶಾರ್ಕಶಾಲೂಕಲೇಶಾ - ಪಾದಾಗ್ರ** - ಎರಡೂ ಪಾದಗಳ ತುದಿಯಲ್ಲಿ, **ಆಸಕ್ತ** - ಅಂಟಿಕೊಂಡಿರುವ, **ನಕ್ತಂದಿವ** - ರಾತ್ರಿ ಹಾಗೂ ಹಗಲುಗಳಲ್ಲಿ ಕ್ರಮವಾಗಿ, **ಲಸಿತ** - ಶೋಭಿಸುವ, **ಕಲೇಶಾರ್ಕ - ಕಲೇಶ** - ಚಂದ್ರ ಹಾಗೂ, **ಅರ್ಕ** - ಸೂರ್ಯ ಇವರೇ, **ಶಾಲೂಕಲೇಶ - ಶಾಲೂಕ** - ಕಮಲದ ದೇಟು ಹಾಗೂ ಬೇರುಗಳ ತುಂಡುಗಳಂತೆ ಇರುವ ಅಂದರೆ ಹಗಲು ರಾತ್ರಿಗಳಲ್ಲಿಯೂ ಅಂತರಿಕ್ಷದಲ್ಲಿಯೂ ಸದಾ ಗೀಯಮಾನವಾಗಿರುವ (ಕೀರ್ತಿಯು), **ಭತತಿಗುರುಗರುತ್ಕ್ಷೋದಚಿತ್ರಾಂತರಿಕ್ಷಾ - ಭ** - ನಕ್ಷತ್ರಗಳ, **ತತಿ** - ಸಮೂಹಗಳೆಂಬ, **ಗುರು** - ದೊಡ್ಡದಾದ, **ಗರುತ್** - ರೆಕ್ಕೆಗಳ, **ಕ್ಷೋದ** - ತುಂಡುಗಳು, ಅಂದರೆ ಸಣ್ಣ ಸಣ್ಣ ಪುಚ್ಛಗಳು, ಅವುಗಳಿಂದ, **ಚಿತ್ರ** - ಚಿತ್ರವಿಚಿತ್ರವಾಗಿ ಮಂಡಿತವಾಗಿರುವ, **ಅಂತರಿಕ್ಷಾ** - ಅಂತರಿಕ್ಷವುಳ್ಳ, ಅಂದರೆ ಆಕಾಶದಲ್ಲೆಲ್ಲಾ ಪ್ರಸೃತವಾಗಿರುವ ಕೀರ್ತಿಯೆಂಬ ಲೀಲಾಹಂಸಿಯು ಶೋಭಿಸುತ್ತದೆ ಎಂದು ಅನ್ವಯ.

ಶ್ರೀಯೋಗೀಂದ್ರತೀರ್ಥರ ಕೀರ್ತಿಯ ವಿಸ್ತಾರವನ್ನೇ ಈ ಶ್ಲೋಕದಲ್ಲಿ ವರ್ಣಿಸುತ್ತಾರೆ. ಕೀರ್ತಿಯೇ ಲೀಲಾಹಂಸಿಯೆಂದು ಹೇಳಿದ್ದರಿಂದ ರೂಪಕಾಲಂಕಾರ ವಿದೆ. ಹಂಸಪಕ್ಷಿಯು ತನ್ನ ಮುಂದೆ ಇಡಲ್ಪಟ್ಟ ಪಾತ್ರೆಯಲ್ಲಿರುವ ಹಾಲನ್ನು ಕುಡಿಯುತ್ತದೆ. ಕೀರ್ತಿಯೆಂಬ ಹಂಸಪಕ್ಷಿಯು ಪಾತಾಳವೆಂಬ ಪಾತ್ರೆಯಲ್ಲಿರುವ ಕ್ಷೀರಸಾಗರವನ್ನೇ ಕುಡಿಯುತ್ತದೆ. ಅಂದರೆ ಕೀರ್ತಿಯು ಪಾತಾಳದವರೆಗೆ ವ್ಯಾಪಿಸಿ ರುತ್ತದೆ. ಹಂಸಪಕ್ಷಿಯು ಕಮಲಗಳಿರುವ ಸರೋವರದಲ್ಲಿ ವಿಹರಿಸುತ್ತಿರುತ್ತದೆ.

Rarest Archiver

ಆಗ ಕಮಲದ ಬಳ್ಳಿಯ ಬೇರುಗಳ ತುಂಡುಗಳು, ಸಣ್ಣ ಸಣ್ಣ ದೇಟುಗಳ ತುಂಡುಗಳು ಪಕ್ಷಿಯ ಕಾಲುಗಳಿಗೆ ಅಂಟಿಕೊಳ್ಳುತ್ತವೆ. ಕೀರ್ತಿಯೆಂಬ ಹಂಸಪಕ್ಷಿಯು ಹಗಲು ಹಾಗೂ ರಾತ್ರಿಯೆಂಬ ಸರೋವರದಲ್ಲಿ ವಿಹರಿಸುವುದರಿಂದ ಅದರ ಕಾಲುಗಳಿಗೆ ಸೂರ್ಯ ಚಂದ್ರರೆಂಬ ತುಂಡುಗಳು ಅಂಟಿಕೊಂಡಿರುತ್ತವೆ. ಅಂದರೆ ಕೀರ್ತಿಯು ಹಗಲು ಹಾಗೂ ರಾತ್ರಿಯೆನ್ನದೇ ಸದಾಕಾಲದಲ್ಲಿಯೂ ವ್ಯಾಪ್ತವಾಗಿರುತ್ತದೆ. ಹಂಸಪಕ್ಷಿಯು ವಿಹರಿಸುವಾಗ ಅದರ ವಿಸ್ತಾರವಾದ ರೆಕ್ಕೆಗಳಿಂದ ಸಣ್ಣ ಸಣ್ಣ ಪುಚ್ಛಗಳು ಅಲ್ಲಲ್ಲಿ ಬಿದ್ದು ಅದು ವಿಹರಿಸುವ ಸ್ಥಳವೆಲ್ಲ ಚಿತ್ರವಿಚಿತ್ರವಾಗಿ ತೋರುತ್ತಿರುತ್ತದೆ. ಕೀರ್ತಿಯೆಂಬ ಹಂಸಪಕ್ಷಿಯು ಆಕಾಶದಲ್ಲಿ ವಿಹರಿಸುವಾಗ ಅದರ ಪುಚ್ಛಗಳು ಅಲ್ಲಲ್ಲಿ ಪ್ರಸೃತವಾಗಿರುತ್ತವೆ. ಆಕಾಶದಲ್ಲಿಯ ತಾರೆಗಳ ಸಮೂಹವೇ ಇಂಥ ಪುಚ್ಛಗಳಿರಬೇಕೆಂದು ತೋರುತ್ತದೆ ಎಂದು ಕವಿಕಲ್ಪನೆ. ಅಂದರೆ ಕೀರ್ತಿಯು ಆಕಾಶದಲ್ಲಿ ಹಾಗೂ ಎಲ್ಲ ನಕ್ಷತ್ರಲೋಕಗಳಲ್ಲಿ ಖ್ಯಾತವಾಗಿದೆ ಎಂಬುದು ತಾತ್ಪರ್ಯ. ಇಡೀ ಬ್ರಹ್ಮಾಂಡವೇ ಪಂಜರದಂತೆ ಇರುವುದರಿಂದ ಭೂಲೋಕದಲ್ಲಿಯೂ ಕೀರ್ತಿಯು ಪ್ರಸೃತವಾಗಿದೆ ಎಂಬುದು ಸ್ಪಷ್ಟವಾಗಿದೆ.

ಈ ಶ್ಲೋಕದಲ್ಲಿ ಸಂಸಾರಾರ್ಣವತಾರಕವಾದ ಉಪಾಯಗಳನ್ನು ಈ ಕೆಳಗಿನಂತೆ ನಿವೇದಿಸಲಾಗಿದೆ.

1) ಹಂಸಪಕ್ಷಿಯ ಉಲ್ಲೇಖದಿಂದಾಗಿ ಜೀವನದಲ್ಲಿಯ ಪರಮಹಂಸಾಶ್ರಮದ ಅಂದರೆ ಚತುರ್ಥಾಶ್ರಮವಾದ ಸನ್ಯಾಸಾಶ್ರಮದ ಮಹತ್ವವನ್ನೂ ಸೂಚಿಸಿದಂತಾಗಿದೆ. ಸಾಂಸಾರಿಕವಾದ ಸುಖದುಃಖಗಳಿಂದ ಉದ್ರೇಕಗೊಳ್ಳದೇ, ಐಹಿಕವಾದ ಸುಖಸಾಮಗ್ರಿಗಳನ್ನು ಹೇಯವೆಂದು ತ್ಯಾಗಮಾಡಿ, ಕರ್ಮಫಲಾಪೇಕ್ಷೆಯನ್ನೂ ಕೂಡ ತ್ಯಜಿಸಿ ಸ್ವಸ್ವವಿಹಿತವಾದ ಕರ್ಮಗಳನ್ನು ಭಗವದಾರಾಧನೆಯೆಂಬ ಶ್ರದ್ಧೆಯಿಂದ ಮಾಡುತ್ತಿರುವುದೇ ಪರಮಹಂಸಾಶ್ರಮದ ಲಕ್ಷಣವಾಗಿದೆ.

2) ಪರಮಹಂಸಾಶ್ರಮದಲ್ಲಿ ಇರುವವರು ಕ್ಷೀರದಂತೆ ಶುಭ್ರವರ್ಣದವರಾಗಿ ಅಂದರೆ ಚಿತ್ತಶುದ್ಧಿಯನ್ನು ಇಟ್ಟುಕೊಂಡವರಾಗಿರಬೇಕುಅಲಅಲದೆದೇ ಹಂಸಕ್ಷೀರನ್ಯಾಯದಂತೆ ಸಾರಸಾರವಿವೇಚನೆಯಲ್ಲಿ ನಿಷಣತಣತರಾಗಿದ್ದು ಸಾರವನ್ನೇ ಗ್ರಹಿಸುವ ಪ್ರವೃತ್ತಿಯುಳ್ಳವರಾಗಿರಬೇಕು.

Rarest Archiver

3) ''ಪದ್ಯತೇ ಗಮ್ಯತೇ ಅನೇನ ಇತಿ ಪಾದಃ'' ಎಂಬ ವ್ಯುತ್ಪತ್ತಿಯಲ್ಲಿ ಗಮ್ಯತೇ ಎಂದರೆ ಜ್ಞಾನ ಮಾಡಿಕೊಳ್ಳಲ್ಪಡುತ್ತದೆ ಎಂಬ ಅರ್ಥದಿಂದ ಪಾದ ಶಬ್ದಕ್ಕೆ ಜ್ಞಾನಸಾಧಕವಾದ ಶಾಸ್ತ್ರ ಎಂದು ಅರ್ಥ ಮಾಡಬಹುದು. ಪಾದಾಗ್ರವೆಂದರೆ ಶಾಸ್ತ್ರಗಳ ಅಗ್ರ ಭಾಗ ಎಂದರೆ ಮುಖ್ಯ ಸಾರ ಅಥವಾ ಸಿದ್ಧಾಂತ ಎಂದು ತಾತ್ಪರ್ಯ- ''ಅಂತೇ ಸಿದ್ಧಸ್ತು ಸಿದ್ಧಾಂತಃ''. ಸಿದ್ಧಾಂತದಲ್ಲಿಯ ತತ್ವಜ್ಞಾನವನ್ನು ಪಡೆಯುವ ಸರಣಿಯಲ್ಲಿ ಆಸಕ್ತರಾಗಿರುವಾಗ ಸದಾಕಾಲದಲ್ಲಿ ಪೂರ್ವಪಕ್ಷಗಳು ಹಾಗೂ ಅವುಗಳ ಸಮಾಧಾನ ಇವುಗಳ ನಿಷ್ಕರ್ಷೆಯಲ್ಲಿ ಪರಿಶ್ರಮಿಸಬೇಕು. ರಾತ್ರಿಯೆಂದರೆ ಕತ್ತಲೆ ಅಂದರೆ ಅಜ್ಞಾನ ಮತ್ತು ವಿಪರ್ಯಯ ಜ್ಞಾನದ ಪ್ರತೀಕವಾಗಿರುವ ಪೂರ್ವಪಕ್ಷವೆಂತಲೂ ಪ್ರತಿವಾದಿಗಳ ಪ್ರಮೆಯವೆಂತಲೂ ತಿಳಿಯಬಹುದು. ದಿವಂ ಅಂದರೆ ಹಗಲು ಅಂದರೆ ಕತ್ತಲೆಯನ್ನು ಹೋಗಲಾಡಿಸುವ ಪ್ರಕಾಶ. ಇದರ ತಾತ್ಪರ್ಯವೆಂದರೆ ಪೂರ್ವಪಕ್ಷವನ್ನು ಹಾಗೂ ಪ್ರತಿವಾದಿಗಳ ಪ್ರಮೇಯಗಳನ್ನು ನಿರಾಕರಿಸುವ ಸಮಾಧಾನಗಳು ಹಾಗೂ ಸಿದ್ಧಾಂತದ ಪ್ರಮೇಯಗಳೆಂದು ತಿಳಿಯಬಹುದು. ಪೂರ್ವಪಕ್ಷ ಹಾಗೂ ಸಮಾಧಾನಗಳ ನಿಷ್ಕರ್ಷೆಯಿಂದ ಸಿದ್ಧಾಂತದ ಪ್ರಮೇಯಗಳು ಚಂದ್ರಸೂರ್ಯರಂತೆ ಸ್ಪಷ್ಟವಾಗಿ ಪ್ರಕಾಶಿಸಿ ಶೋಭಿಸುತ್ತವೆ. ಸಿದ್ಧಾಂತದ ಪ್ರಮೇಯಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ವೇದವ್ಯಾಸರಿಂದ ರಚಿತವಾದ ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನು ಹಾಗೂ ಅವುಗಳಿಗೆ ಸರಿಯಾದ ಅರ್ಥವನ್ನು ತಿಳಿಸಿ ಹೇಳುವ ಶ್ರೀಮದಾನಂದತೀರ್ಥ ಭಗವತ್ಪಾದರಿಂದ ರಚಿತವಾದ ಸೂತ್ರಭಾಷ್ಯ, ಅನುವ್ಯಾಖ್ಯಾನ, ನ್ಯಾಯವಿವರಣ ಇತ್ಯಾದಿ ಗ್ರಂಥಗಳ ಸಹಾಯವನ್ನು ಹಾಗೂ ಈ ಗ್ರಂಥಗಳನ್ನು ವಿಷಯಿಸಿ ಪ್ರವಚನ ಮಾಡುವ ಶ್ರೀಯೋಗೀಂದ್ರ ತೀರ್ಥರ ಉಪದೇಶವಚನಗಳನ್ನು ಆಶ್ರಯಿಸಬೇಕೆಂದು ಸೂಚಿಸಲಾಗಿದೆ.

ಶಾಲೂಕಲೇಶವೆಂಬ ಪದಕ್ಕೆ ವೇದವ್ಯಾಸದೇವರೆಂತಲೂ ಮಧ್ವಾಚಾರ್ಯರೆಂತಲೂ ಅರ್ಥ ಮಾಡಬಹುದು. ಶಾಲೂಕವೆಂದರೆ ಕಮಲದ ಮೂಲ - ಪದ್ಮನಾಭನಾದ ನಾರಾಯಣನೇ ಶಾಲೂಕಪದವಾಚ್ಯನು. ಆ ನಾರಾಯಣನ ಲೇಶವೆಂದರೆ ಅವನ ಅಭಿನ್ನಸ್ವರೂಪವಾದ ವೇದವ್ಯಾಸದೇವರೆಂದು ಸೂಚಿತವಾಗುತ್ತದೆ. ಅಥವಾ ಶಾಲೂಕ ಪದಕ್ಕೇ ನಾರಾಯಣಾಭಿನ್ನರಾದ ವೇದವ್ಯಾಸರೆಂದು ಅರ್ಥ ಮಾಡಬಹುದು. ಶಾಲೂಕಲೇಶವೆಂದರೆ ವೇದವ್ಯಾಸಮುನಿಗಳ ಅಂಶಸ್ವರೂಪಗಳು ಅಂದರೆ

Rarest Archiver

ಅವರಿಂದ ರಚಿತವಾದ ಬ್ರಹ್ಮಸೂತ್ರ, ಸತ್ಪುರಾಣಾದಿ ಗ್ರಂಥಗಳು ಎಂದು ತಾತ್ಪರ್ಯ. ಇನ್ನು ಶಾಲೂಕವೆಂದರೆ ಕಮಲೋದ್ಭವನು ಅರ್ಥಾತ್ ಚತುರ್ಮುಖ ಬ್ರಹ್ಮದೇವರು ಹಾಗೂ ಬ್ರಹ್ಮಪದವಿಗೆ ಅರ್ಹರಾಗಿರುವ ಆದ್ದರಿಂದಲೇ ಭಾವೀಬ್ರಹ್ಮರೆಂದು ಖ್ಯಾತರಾಗಿರುವ ವಾಯುದೇವರು. ಅವರ ಲೇಶವೆಂದರೆ ವಾಯುವಿನ ಅವತಾರವಾಗಿರುವ ಶ್ರೀಮಧ್ವಾಚಾರ್ಯರು, ಹಾಗೂ ಅವರ ಮುಖದಿಂದ ನಿಃಸೃತ ವಾಗಿರುವ ಭಾಷ್ಯ, ಅನುವ್ಯಾಖ್ಯಾನಾದಿ ಗ್ರಂಥಗಳು, ಎಂದು ಸೂಚಿತವಾಗುತ್ತದೆ.

4) ಭ - ಅಂದರೆ ಶಂಕರ, ತತಿ - ಅಂದರೆ ಪರಂಪರೆ, ಭತತಿ - ಶಂಕರನ ಅನುಯಾಯಿಗಳ ಪರಂಪರೆ. ಶಂಕರನೇ ಸರ್ವೋತ್ತಮನೆಂದು ಹೇಳುವ ಮಾಯಾ ವಾದಿಗಳ ಸಮೂಹಕ್ಕೆ ಗುರುಗಳೆಂದು ಪರಿಗಣಿಸಲ್ಪಟ್ಟಿರುವ ಶಂಕರಾಚಾರ್ಯರ ಗರುತ್ ಅಂದರೆ ಪಕ್ಷ ಅಂದರೆ ಪ್ರಮೇಯಗಳನ್ನು ಕ್ಷೋದ ಮಾಡಿ ಅಂದರೆ ಖಂಡಿಸಿ ಪುಡಿ ಪುಡಿ ಮಾಡುವುದರಿಂದ ಅಂತರಿಕ್ಷವೆಲ್ಲ ಚಿತ್ರವಿಚಿತ್ರವಾಗಿ ತೋರುತ್ತದೆ. ಅಂದರೆ ಪರಮಹಂಸಾಶ್ರಮದಲ್ಲಿರುವ ಸಾಧಕನು ಮಾಯಾವಾದದ ಪ್ರಮೇಯಗಳನ್ನು ಖಂಡಿಸಿ ಅವುಗಳಿಂದ ದೂರವಿರಬೇಕು ಎಂಬ ಸಾಧನಮಾರ್ಗವನ್ನು ಸೂಚಿಸಿದಂತಾಗಿದೆ.

ವಿಗ್ರಹವಾಕ್ಯಗಳು- ಪಾತಾಲಪಾತ್ರೇ - ಪಾತಾಲಮೇವ ಪಾತ್ರಂ ತಸ್ಮಿನ್, **ಕಲಶಜಲನಿಧಿಂ** - ಜಲಸ್ಯ ನಿಧಿಃ ಜಲನಿಧಿಃ, ಕಲಶೇ ಜಲನಿಧಿಃ, ತಮ್. **ಪಾದಾಗ್ರಾಸಕ್ತನಕ್ತಂದಿವಲಸಿತಕಲೇಶಾರ್ಕಶಾಲೂಕಲೇಶಾ** - ಶಾಲೂಕಸ್ಯ ಲೇಶಃ - ಶಾಲೂಕಲೇಶಃ ಕಲೇಶಶ್ಚ ಅರ್ಕಶ್ಚ ಕಲೇಶಾರ್ಕೌ, ಪಾದಸ್ಯ ಅಗ್ರಂ, ಪಾದಾಗ್ರೇ ಸಕ್ತೌ ನಕ್ತಂದಿವೇ ಚ ಲಸಿತೌ ಕಲೇಶಾರ್ಕೌ, ತಾವೇವ ಶಾಲೂಕಲೇಶಃ ಯಸ್ಯಾಃ ಸಾ. **ಬ್ರಹ್ಮಾಂಡಾಖಂಡನೀಡೇ** - ಬ್ರಹ್ಮಾಂಡಂ ಏವ ಅಖಂಡನೀಡಂ ತಸ್ಮಿನ್, ಅಖಂಡಂ ಚ ತತ್ ನೀಡಂ ಚ. **ಭತತಿಗುರುಗರುತ್‌ಕ್ಷೋದಚಿತ್ರಾಂತರಿಕ್ಷಾ** - ಗುರುಶ್ಚಾಸೌ ಗರುತ್ ಚ ಗುರುಗರುತ್, ತಯೋಃ ಕ್ಷೋದಾನಿ. ಭಾನಾಂ ತತಿಃ ಭತತಿಃ, ಭತತಿಃ ಏವ ಗುರುಗರುತ್ - ಕ್ಷೋದಾನಿ, ತೈಃ ಚಿತ್ರಂ ಅಂತರಿಕ್ಷಂ ಯಯಾ ಸಾ. **ಕೀರ್ತಿಕೇಲೀಮರಾಲೀ** - ಕೇಲೀಚಾಸೌ ಮರಾಲೀ ಚ, ಕೀರ್ತಿರೇವ ಕೇಲೀಮರಾಲೀ.

ಕೋಶಗಳು- ನಕ್ತಂ - ''ಅಥ ದೋಷಾ ಚ ನಕ್ತಂ ಚ ರಜನಾವಿತಿ'' ಇತಿ

Rarest Archiver

ಅಮರಃ. ಅರ್ಕಃ - ''ಅರ್ಕೋ ದ್ರುಭೇದೇ ಸ್ಫಟಿಕೇ ತಾಮ್ರೇ ಸೂರ್ಯೇ ಬಿಡೌಜಸಿ'' ಇತಿ ಹೈಮಃ. ಶಾಲೂಕಃ- ''ಸ್ಯಾದುತ್ಪಲಂ ಕುವಲಯಂ ಅಥ ನೀಲಾಂಬು ಜನ್ಮ ಚ । ಇಂದೀವರಂ ಚ ನೀಲೇಽಸ್ಮಿನ್ ಸಿತೇ ಕುಮುದಕೈರವೇ । ಶಾಲೂಕಮೇಷಾಂ ಕಂದಃ ಸ್ಯಾತ್'' ಇತ್ಯಮರಃ, (ಏಷಾಂ - ಸೌಗಂಧಿಕಾದೀನಾಂ). ನೀಡಃ - ''ಕುಲಾಯೋ ನೀಡಮಸ್ತ್ರಿಯಾಂ'' ಇತ್ಯಮರಃ. ಭಂ - ''ಭಂ ನಕ್ಷತ್ರೇ ಗಭಸ್ತೌ ಸ್ತ್ರೀ ಪುಂಸಿ ಸ್ಯಾದ್ಭೃಗು ನಂದನೇ'' ಇತಿ ಮೇದಿನೀ.

ವ್ಯಾಕರಣ ವಿಚಾರಗಳು- ಕ್ಷೀರಪಾಯಂ - ಪಾಯಂ ಪಾಯಂ ಎಂಬ ರೂಪವು ಪೀತ್ವಾ ಎಂಬ ಅರ್ಥದಲ್ಲಿ ''ಆಭೀಕ್ಷ್ಣ್ಯೇ ಣಮುಲ್'' (111-4-22) ಎಂಬ ಪಾಣಿನೀ ಸೂತ್ರದ ಪ್ರಕಾರ ಆಗುತ್ತದೆ. ಇಲ್ಲವೇ ''ಉಪಮಾನೇ ಕರ್ಮಣಿ ಚ'' (111-4-45) ಎಂಬ ಪಾಣಿನೀ ಸೂತ್ರದ ಪ್ರಕಾರ 'ಕ್ಷೀರಪಾಯಂ ಪಿಬಂತೀ' ಅಂದರೆ 'ಕ್ಷೀರಮಿವ ಪಿಬಂತಿ' ಎಂಬ ಅರ್ಥವು ಪ್ರಾಪ್ತವಾಗುತ್ತದೆ. 'ಘೃತನಿದಾಯಂ ನಿಹಿತಂ ಜಲಂ' ಎಂಬಲ್ಲಿ 'ಘೃತಮಿವ ಸುರಕ್ಷಿತಂ ಇತ್ಯರ್ಥಃ' ಎಂದು ಹೇಳಲಾಗಿದೆ. ''ಣಮುಲ್'' ಪ್ರತ್ಯಯವು ಉಪಮಾನ ಎಂಬ ಅರ್ಥದಲ್ಲಿ ಪಾ - ಪಿಬತಿ - ಧಾತುವಿಗೆ ಅನ್ವಯಿಸುತ್ತದೆ. ಇಲ್ಲಿ ಉಪಮಾನ ಎಂಬ ಅರ್ಥದಲ್ಲಿಯೇ ಈ ಪ್ರತ್ಯಯವನ್ನು ತೆಗೆದುಕೊಳ್ಳಬೇಕು. ವಿಲಸತಿ - ವಿ ಉಪಸರ್ಗಪೂರ್ವಕ ಲಸ್ - ಲಸತಿ ಧಾತು ವರ್ತಮಾನಕಾಲ ಪ್ರಥಮಪುರುಷ ಏಕವಚನ, ವಿಲಸತಿ ವಿಲಸತಃ ವಿಲಸಂತಿ.

ಯದ್ರಾಜಾಸಿ ದ್ವಿಜಾನಾಮನಿಶಮರಿಸುಧೀ ಚಕ್ರವಾಲಾತಿಲಂಘೀ ।
ತದ್ರಾಜಾನಂ ದ್ವಿಜಾನಾಂ ಪಿದಧತಮಸಕೃಚ್ಚಕ್ರವಾಲಂ ವಿಲಂಘ್ಯ ।।
ಸ್ಫೂರ್ತಿಂ ಸೂತೇಽಸ್ಯ ಪಶ್ಚಾದ್ವಲಯಕುವಲಯೇ
ತಾವಕೀ ಸೈವ ಕೀರ್ತಿಃ ।
ಭ್ರಾಜಸ್ವಾತೀವ ಯೋಗಿಪ್ರವರ ಭುವಿ ತಯಾ
ಕಲ್ಯಯಾ ತುಲ್ಯಯಾ ತೇ ।।15।।

ಅನ್ವಯಾರ್ಥಃ - ಭೋ ಯೋಗಿಪ್ರವರ - ಭೋ ಯೋಗಿಗಳಲ್ಲಿ ಶ್ರೇಷ್ಠರಾದ ಶ್ರೀಯೋಗೀಂದ್ರತೀರ್ಥರೇ, ಯತ್ - ಯಾವ ಕಾರಣದಿಂದ ತಾವು, ಅರಿಸುಧೀಚಕ್ರ

Rarest Archiver

ವಾಲಾತಿಲಂಘೀ - ಅರಿಸುಧೀ - ಪರವಾದಿ ಪಂಡಿತರ, **ಚಕ್ರವಾಲ** - ಸಮೂಹವನ್ನು, **ಅತಿಲಂಘೀ** - ವಿಶೇಷವಾಗಿ ದಾಟಿಹೋಗುವಿರೋ ಅಂದರೆ ಪರವಾದಿಗಳನ್ನು ಸೋಲಿಸುವಿರೋ, **ತತ್** - ಆ ಕಾರಣದಿಂದ ಅಂದರೆ ಪರವಾದಿಗಳನ್ನು ಸೋಲಿಸುವುದರಿಂದಾಗಿ, **ದ್ವಿಜಾನಾಂ** - ಸಚ್ಛಾಸ್ತ್ರಗಳನ್ನು ಅಧ್ಯಯನ ಮಾಡುವ ಬ್ರಾಹ್ಮಣರಿಗೆ, **ರಾಜಾ** - ಗುರುಗಳಾಗಿ ರಾಜರಾಗಿ, **ಅಸಿ** - ಇರುವಿರಿ, **ತಾವಕೀ** - ತಮ್ಮ, **ಸಾ ಏವ** - ಆ ಪ್ರಸಿದ್ಧವಾದ, **ಕೀರ್ತಿಃ** - ಕೀರ್ತಿಯೂ ನಿಮ್ಮಂತೆಯೇ, **ದ್ವಿಜಾನಾಂ** - ನಕ್ಷತ್ರಗಳ, **ರಾಜಾನಂ** - ರಾಜನಾದ ಚಂದ್ರನನ್ನು, **ಅಸಕೃತ್** - ಯಾವಾಗಲೂ, **ಪಿದಧತಂ** - ಆಚ್ಛಾದಿಸಿ ಮರೆಮಾಡುವ, **ಚಕ್ರವಾಲಂ** - ಪರ್ವತವನ್ನು, **ವಿಲಂಘ್ಯ** - ದಾಟಿ, **ಅಸ್ಯ** - ಈ ಚಕ್ರವಾಲಗಿರಿಯ, **ಪಶ್ಚಾದ್ವಲಯಸ್ಯ** - ಆ ಕಡೆಗೆ ಇರುವ ಮಂಡಲದ, **ಕುವಲಯೇ** - ರಾತ್ರಿಕಮಲದಲ್ಲಿ, **ಸ್ಫೂರ್ತಿಂ** - ಪ್ರಕಾಶದ ವಿಕಾಸವನ್ನು, **ಸೂತೇ** - ಹುಟ್ಟಿಸುತ್ತದೆ, **ತೇ** - ತಮಗೆ, **ತುಲ್ಯಯಾ** - ಸಮಾನವಾದ, **ಕಲ್ಯಯಾ** - ಆ ಶುಭಕರವಾದ ಕೀರ್ತಿಯೊಡನೆ, **ಅತೀವ** - ವಿಶೇಷವಾಗಿ, **ಭ್ರಾಜಸ್ವ** - ತಾವು ಪ್ರಕಾಶಿಸಿರಿ.

ತಾತ್ಪರ್ಯಾರ್ಥ : ಇಲ್ಲಿ 'ಚಕ್ರವಾಲ', 'ದ್ವಿಜ' ಈ ಪದಗಳ ಬೇರೆ ಬೇರೆ ಅರ್ಥಗಳಿಂದಾಗಿ, ಶ್ರೀಯೋಗೀಂದ್ರತೀರ್ಥರಿಗೂ ಅವರ ಕೀರ್ತಿಗೂ ಸಾಮ್ಯವನ್ನು ಒಂದು ಸ್ವಾರಸ್ಯ ರೀತಿಯಲ್ಲಿ ಪ್ರತಿಪಾದಿಸಲಾಗಿದೆ. ಶ್ರೀಯೋಗೀಂದ್ರತೀರ್ಥರು ಪರವಾದಿಗಳ ಚಕ್ರವಾಲ (ಸಮೂಹ)ವನ್ನು ಮೀರಿಸಿ ಸದ್ವಿಜರುಗಳಿಗೆ ಗುರುಗಳಾಗಿದ್ದಾರೆ. ಅವರ ಕೀರ್ತಿಪ್ರಭೆಯು ಭೂಮಂಡಲದ ಸೀಮೆಯಲ್ಲಿರುವ ಚಕ್ರವಾಲವನ್ನೂ ಅಂದರೆ ಗಿರಿಯನ್ನೂ ದಾಟಿ ದೂರದ ಪ್ರದೇಶಗಳಲ್ಲಿಯೂ ಪಸರಿಸಿರುತ್ತದೆ.

ಚಕ್ರವಾಲವೆಂದರೆ ಭೂಮಂಡಲಕ್ಕೆ ದೊರಕುವ ಸೂರ್ಯ ಚಂದ್ರರ ಪ್ರಕಾಶಕ್ಕೂ ಸೀಮೆಯಾಗಿದೆ. ಚಕ್ರವಾಲವನ್ನು ದಾಟಿ ಇರುವ ಪ್ರದೇಶಗಳಲ್ಲಿ ಯಾವ ಪ್ರಕಾಶಕ್ಕೂ ಅವಕಾಶವಿಲ್ಲ. ಹಾಗಿದ್ದರೆ ಅಲ್ಲಿ ಇರುವ ರಾತ್ರಿಕಮಲಗಳು ವಿಕಾಸಗೊಳ್ಳುವ ಬಗೆ ಹೇಗೆ ಎಂದು ಪ್ರಶ್ನೆ ಬರುತ್ತದೆ. ಇದಕ್ಕೆ ಸ್ವಾರಸ್ಯವಾದ ಉತ್ತರವನ್ನು ಕೊಡುತ್ತಾರೆ. ಚಕ್ರವಾಲದ ಆಚೆಗೆ ಇರುವ ಕುವಲಯಗಳನ್ನು ಅಲ್ಲಿಯೂ ಕೂಡ ಪ್ರಸೃತವಾಗಿರುವ ಶ್ರೀಯೋಗೀಂದ್ರತೀರ್ಥರ ಕೀರ್ತಿಪ್ರಭೆಯು ವಿಕಾಸಗೊಳಿಸುತ್ತದೆ. ಶ್ರೀಯೋಗೀಂದ್ರತೀರ್ಥರೂ ಹಾಗೂ ಅವರ ಕೀರ್ತಿಯೂ ಬೇರೆ ಬೇರೆ

Rarest Archiver

ಕಾರಣಗಳಿಂದಾಗಿ ಚಕ್ರವಾಲವನ್ನು ಮೀರಿ ಇರುವುದರಿಂದ ಸಮಾನ ಗುಣಗಳಾಗಿವೆ ಎಂಬ ಭಾವ.

ಇಲ್ಲಿ ಈ ಕೆಳಗಿನ ಸಂಸಾರತಾರಕ ಉಪಾಯಗಳು ಸೂಚಿತವಾಗಿವೆ.

1) 'ಕೀರ್ತಿ' ಪದದಿಂದ ಪರಮಾತ್ಮನ ನಾಮಸಂಕೀರ್ತನವು ಸೂಚಿತವಾಗಿದೆ. ಜೀವನು ಈ ಭೂಲೋಕವನ್ನು ದಾಟಿ ಚಂದ್ರಲೋಕ, ಮಹರ್ಲೋಕ, ಸ್ವರ್ಗಲೋಕ ಇತ್ಯಾದಿ ಲೋಕಗಳಲ್ಲಿ ಪ್ರವೇಶಿಸಿದಾಗಲೂ ಕೂಡ ಅವನಿಗೆ ಪ್ರಕಾಶಕವಾಗಿ ಇರುವುದು ನಾಮಸಂಕೀರ್ತನೆಯೊಂದು ಮಾತ್ರ. ಅಜ್ಞಾನವೆಂಬ ಕತ್ತಲೆಯನ್ನು ಹರಿನಾಮಸಂಕೀರ್ತನೆಯಿಂದ ಹೋಗಲಾಡಿಸಿ ಜ್ಞಾನದ ಪ್ರಕಾಶವನ್ನು ಪಡೆಯುವುದು ಸಾಧ್ಯವಿದೆ. ಆದ್ದರಿಂದ ಸದಾ ಹರಿನಾಮಸಂಕೀರ್ತನೆಯಲ್ಲಿ ರತರಾಗಿರಬೇಕು.

2) ''ಕೀರ್ತಿ'' ಶಬ್ದವು ಶ್ರೀಯೋಗೀಂದ್ರತೀರ್ಥರಿಗೆ ಸಂಬದ್ಧವಾಗಿದೆ. ಅವರು ಪರವಾದಿಗಳನ್ನು ಪರಾಸ್ತಗೊಳಿಸಿ ಸಜ್ಜನರಿಗೆ ಗುರುಗಳಾಗುತ್ತಾರೆ ಎಂದು ಹೇಳಲಾಗಿದೆ. ಇದರಿಂದ ಮಿಥ್ಯಾಜ್ಞಾನ, ವಿಪರೀತ ಜ್ಞಾನಗಳನ್ನು ನಿವಾರಿಸಿಕೊಂಡು ಸುಜ್ಞಾನದ ತಳಹದಿಯ ಮೇಲೆ ಹರಿನಾಮಸಂಕೀರ್ತನೆಯನ್ನು ಮಾಡಬೇಕೆಂದು ಸೂಚಿಸಿದಂತಾಗುತ್ತದೆ.

ವಿಗ್ರಹವಾಕ್ಯಗಳು– ಅರಿಸುಧೀಚಕ್ರವಾಲಾತಿಲಂಘೀ - ಅರಯಶ್ಚ ತೇ ಸುಧಯಶ್ಚ - ಅರಿಸುಧಯಃ ತೇಷಾಂ ಚಕ್ರವಾಲಂ ತತ್ ಅತಿಲಂಘತಿ ಇತಿ.

ಕೋಶಗಳು– ದ್ವಿಜ - ''ದ್ವಿಜಃ ಸ್ಯಾದ್ ಬ್ರಾಹ್ಮಣಕ್ಷತ್ರ ವೈಶ್ಯದಂತಾಂಡಜೇಷು ನಾ । ಇತಿ ಮೇದಿನೀ (30/9-10). ಚಕ್ರವಾಲಂ - ''ಚಕ್ರವಾಲೋದ್ರಿಭೇದೇ ಸ್ಯಾಚ್ಚಕ್ರವಾಲಂ ತು ಮಂಡಲೇ'' ಇತಿ ಹೈಮಃ. ಕುವಲಯಂ - ''ಗೋತ್ರಾ ಕುಃ ಪೃಥಿವೀ ಪೃಥ್ವೀ ಕ್ಷ್ಮಾವನಿರ್ಮೇದಿನೀ ಮಹೀ'' ಇತ್ಯಮರಃ(2-1-3). ಕಲ್ಯಾ - ''ಸ್ಯಾತ್ ಕಲ್ಯಾ ತು ಶುಭಾತ್ಮಿಕಾ'' ಇತ್ಯಮರಃ(1-6-18).

ವ್ಯಾಕರಣ ವಿಚಾರಗಳು– ಸೂತೇ - ಸೂ - ಪ್ರಾಣಿಗರ್ಭವಿಮೋಚನೆ 2ನೇಯ ಗಣ 4ನೇಯ ಗಣ ಆ. ಪದ, ಸೂತೇ. ಭ್ರಾಜಸ್ವ - ಭ್ರಾಜ್ ದೀಪ್ತೌ 1ನೇಯ

Rarest Archiver

ಗಣ ಆ. ಪದ, ಭ್ರಾಜತೇ ಲೋಟ್ ಮಧ್ಯಮ ಪು.ಏ.ವ.

ಸದ್ಯೋ ವೈಶದ್ಯಕಾರಂ ಹರಿದಭಿಧಪಟೀಮಂಡಲಂ ಪಾಂಡಯಂತೀ ।
ಗೌರೀಭಾವಂ ಪ್ರಣೀತಾ ಮುದಮಪರಿಮಿತಾಮೇತ್ಯ
ಪತ್ಯಾಪಿ ಸತ್ಯಾಃ ।।
ಸರ್ವೇಷ್ಟಸ್ರಗ್ವಿಶಾಖಾನುಗಮಮಹಿಮವದ್ಭೂತಜಾತಪ್ರತೀಕ್ಷ್ಯಾ ।
ಕೀರ್ತಿಶ್ಚಂಚೂರ್ತಿ ಯೋಗಿತ್ರಿದಶವರ ಮುನೇ
ಶ್ರೀಪುಷಾ ತೇ ವೃಷೇಣ ।।16।।

ಅನ್ವಯಾರ್ಥಃ - ಹೇ ಯೋಗಿತ್ರಿದಶವರ - ಭೋ, ಯೋಗಿ - ಯೋಗಿಗಳಲ್ಲಿ, **ತ್ರಿದಶವರ** - ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನಂತೆ ಇರುವ, ಅಂದರೆ ಯೋಗೀಂದ್ರರೆಂಬ, **ಮುನೇ** - ಮುನಿಗಳೇ, **ತೇ** - ತಮ್ಮ, **ಕೀರ್ತಿಃ** - ಕೀರ್ತಿಯು, **ಶ್ರೀಪುಷಾ** - ಶೋಭೆಯನ್ನು ಪೋಷಿಸುವ, **ವೃಷೇಣ** - ಧರ್ಮದಿಂದ ಕೂಡಿದಂಥಾದ್ದಾಗಿ, **ಸದ್ಯಃ** - ಒಂದು ಕ್ಷಣದಲ್ಲಿಯೇ, **ವೈಶ್ಯದ್ಯಕಾರಂ** - ಎಲ್ಲ ಕಡೆಗೆ ನೈರ್ಮಲ್ಯವನ್ನು ಉಂಟುಮಾಡಿ, **ಹರಿದಭಿಧಪಟೀಮಂಡಲಂ - ಹರಿತ್** - ದಿಕ್ಕುಗಳು, **ಅಭಿಧ** - ಎಂಬ, **ಪಟೀ** - ರೇಶಮೆ ವಸ್ತ್ರಗಳ, **ಮಂಡಲಂ** - ಸಮೂಹವನ್ನು, **ಪಾಂಡಯಂತೀ** - ಶುಭ್ರವನ್ನಾಗಿ ಮಾಡುತ್ತ, ಆದ್ದರಿಂದಲೇ, **ಸತ್ಯಾಃ** - ಸತೀದೇವಿಯ ಅಂದರೆ ಪಾರ್ವತೀದೇವಿಯ, **ಪತ್ಯಾ ಅಪಿ** - ಪತಿಯಾದ ಈಶ್ವರನಿಂದಲೂ ಕೂಡ, **ಅಪರಿಮಿತಾಂ** - ಅಪಾರವಾದ, **ಮುದಂ** - ಸಂತೋಷವನ್ನು, **ಏತ್ಯ** - ಪಡೆದು, **ಗೌರೀಭಾವಂ** - ಗೌರೀತ್ವವನ್ನು - ಶುಭ್ರವಾಗಿರುವುದರಿಂದ ಗೌರಿಯಂತೆಯೇ ಆಚರಿಸಲು, **ಪ್ರಣೀತಾ** - ಯೋಜಿಸಲ್ಪಟ್ಟದ್ದಾಗಿ, **ಸರ್ವೇಷ್ಟಸ್ರಗ್ವಿಶಾಖಾನುಗಮಮಹಿಮವದ್ಭೂತಜಾತಪ್ರತೀಕ್ಷ್ಯಾ - ಸರ್ವ** - ಎಲ್ಲ ಪ್ರಕಾರದ, **ಇಷ್ಟ** - ಯಜ್ಞಗಳಿಂದ, **ಸ್ರಗ್ವಿ** - ಮಾಲೆಯನ್ನು ಧರಿಸಿದಂತಿರುವ, **ಶಾಖಾ** - ವೇದಗಳನ್ನು, **ಅನುಗಮ** - ಅನುಸರಿಸುವುದರಿಂದ, **ಮಹಿಮವತ್** - ಹೆಚ್ಚಿನ ವರ್ಚಸ್ಸುಳ್ಳವರಾಗಿರುವ, **ಭೂತ** - ಬ್ರಾಹ್ಮಣರುಗಳ, **ಜಾತ** - ಸಮೂಹದಿಂದ, **ಪ್ರತೀಕ್ಷ್ಯಾ** - ಗೌರವದಿಂದ ಪೂಜಿಸಲ್ಪಟ್ಟದ್ದಾಗಿ, **ಚಂಚೂರ್ತಿ** - ಅತ್ತಿತ್ತ ಅಂದರೆ ಎಲ್ಲ ಕಡೆಗೆ ಸಂಚರಿಸುತ್ತದೆ. ಕೀರ್ತಿಯು ತನ್ನ ಶುಭ್ರಪ್ರಭೆಯಿಂದ ದಿಕ್ಕುಗಳನ್ನೆಲ್ಲ ಶುಭ್ರವನ್ನಾಗಿ ಮಾಡಿ, ಯಜ್ಞಯಾಗಾದಿಗಳಲ್ಲಿ ರತರಾದ ಸಕಲವೇದ ಪಾರಂಗತರಾದ ಬ್ರಾಹ್ಮಣರಿಂದ ಪೂಜಿಸಲ್ಪ

Rarest Archiver

ಟ್ಟಿದ್ದಾಗಿ ಎಲ್ಲೆಡೆ ವ್ಯಾಪ್ತವಾಗಿದೆ ಎಂದು ಭಾವ.

ತಾತ್ಪರ್ಯಾರ್ಥ : ಕೀರ್ತಿಯು ಶುಭ್ರವಾಗಿರುವುದೆಂದು ವರ್ಣಿಸುವುದು ಸ್ವಾಭಾವಿಕ ಸಂಪ್ರದಾಯವಾಗಿದೆ. ಗೌರ ಅಂದರೆ ಶುಭ್ರವರ್ಣ ಎಂಬ ಪದಸಾಮ್ಯ ದಿಂದ ಕೀರ್ತಿಯು ಗೌರೀತ್ವವನ್ನು ಪಡೆಯಿತು ಎಂದು ಕಲ್ಪಿಸಲಾಗಿದೆ. ಕೀರ್ತಿಗೆ ಅನ್ವಯಿಸುವ ಕೆಲವು ವಿಶೇಷಣಗಳು ಗೌರಿಗೂ ಕೂಡ ಅನ್ವಯಿಸುತ್ತವೆ. **ಸರ್ವೇಷ್ಟ ಸ್ರಗ್** - ಗೌರಿಯು ಎಲ್ಲರಿಗೂ ಇಷ್ಟವಾದ ಮನೋಹರವಾದ ಮಾಲೆಗಳನ್ನು ಧರಿಸಿದವಳಾಗಿದ್ದಾಳೆ. **ವಿಶಾಖಾನುಗಮಮಹಿಮವದ್ಭೂತಜಾತಪ್ರತೀಕ್ಷ್ಯಾ** - **ವಿಶಾಖ** - ಸ್ಕಂದನನ್ನು, **ಅನುಗಮ** - ಅನುಸರಿಸುವುದರಿಂದ, **ಮಹಿಮವತ್** - ಬಹಳ ಮಹಿಮಾಶಾಲಿಗಳಾದ, **ಭೂತಜಾತ** - ಭೂತಗಣಗಳ ಸಮೂಹದಿಂದ, **ಪ್ರತೀಕ್ಷ್ಯಾ** - ಪೂಜಿಸಲ್ಪಟ್ಟವಳು ಆಗಿದ್ದಾಳೆ. ಗೌರಿಯು, **ಶ್ರೀಪುಷಾ** - ಶೋಭೆ ಯನ್ನು ಪೋಷಿಸುವ, **ವೃಷೇಣ** - ಈಶ್ವರನ ವಾಹನವಾದ ನಂದಿಯಿಂದ ಕೂಡಿದವ ಳಾಗಿ, **ಚಂಚೂರ್ತಿ** - ಅತ್ತಿತ್ತ ಸಂಚಾರ ಮಾಡುತ್ತಿರುತ್ತಾಳೆ.

ಈಶ್ವರನಿಗೆ ಶುಭ್ರವರ್ಣದವಳಾದ ಪಾರ್ವತಿಯಂತೆ, ಶ್ರೀಯೋಗೀಂದ್ರತೀರ್ಥರಿಗೆ ಶುಭ್ರವರ್ಣವಾದ ಕೀರ್ತಿಯು ಧರ್ಮದಿಂದ ಪೋಷಿತವಾಗಿ ಶೋಭಿಸು ತ್ತದೆ ಎಂದು ತಾತ್ಪರ್ಯ.

ಇಲ್ಲಿ ಈ ಕೆಳಗಿನ ಸಂಸಾರತಾರಕ ಉಪಾಯಗಳು ಸೂಚಿತವಾಗಿವೆ.

1) ಸರ್ವತ್ರ ಶುಭ್ರತೆಯ ಉಲ್ಲೇಖದಿಂದಾಗಿ ಮನಸ್ಸಿನ ಹಾಗೂ ಇಂದ್ರಿಯ ಗಳ ಶುದ್ಧಿಯನ್ನು ಪಡೆಯಬೇಕು ಎಂದು ಸೂಚಿಸಿದಂತದಾಗಿದೆ.

2) ''ಸ್ವವಿಹಿತ ವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ, ತದ್ವಿರುದ್ಧಃ ಸರ್ವೋಽಪ್ಯಧರ್ಮಃ'' ಎಂಬ ಆಚಾರ್ಯರ ಉಕ್ತಿಯಂತೆ, ನಮ್ಮ ನಮ್ಮ ವರ್ಣಾಶ್ರಮಗಳಿಗೆ ವಿಹಿತವಾದ ಕರ್ಮಗಳಲ್ಲಿ ರತರಾಗಿದ್ದುಕೊಂಡು ಭಗವದಾರಾ ಧನೆ ಮಾಡುತ್ತಿರಬೇಕು. ಇಂಥ ಧರ್ಮಾಚರಣೆಯಿಂದಲೇ ಚಿತ್ತಶುದ್ಧಿಯು ಪ್ರಾಪ್ತ ವಾಗುತ್ತದೆ.

Rarest Archiver

3) ಮನೋಭಿಮಾನಿಯಾದ ರುದ್ರದೇವರ ಅನುಗ್ರಹದಿಂದ ಚಿತ್ತಶುದ್ಧಿಯನ್ನು ಪಡೆಯಬೇಕು.

4) ಯಜ್ಞಯಾಗಾದಿಗಳು, ವೇದಾಧ್ಯಯನ ಇತ್ಯಾದಿ ಸಾಧನಕಲಾಪಗಳಲ್ಲಿ ರತರಾಗಿರಬೇಕು.

ವಿಗ್ರಹವಾಕ್ಯಗಳು– ಹರಿದಭಿಧಪಟೀಮಂಡಲಂ – ಹರಿತಃ ಏವ ಅಭಿಧಃ ಯಾಸಾಂ ತಾಃ ಹರಿದಭಿಧಾಃ, ಹರಿದಭಿಧಾಶ್ಚ ತಾಃ ಪಟಯಶ್ಚ, ತಾಸಾಂ ಮಂಡಲಂ. **ಸರ್ವೇಷ್ಟಸ್ರಗ್ವಿಶಾಖಾನುಗಮಮಹಿಮವದ್ಭೂತಜಾತಪ್ರತೀಕ್ಷ್ಯಃ** – ಸರ್ವಾಣಿ ಚ ತಾನಿ ಇಷ್ಟಾನಿ – ಸರ್ವೇಷ್ಟಾನಿ, ತೈಃ ಸ್ರಗ್ವಿಣೀ ಚ ಸಾ ಶಾಖಾ (ವೇದಃ), ತಸ್ಯಾಃ ಅನುಗಮಃ, ತೇನ ಮಹಿಮವಂತಶ್ಚ ತೇ ಭೂತಾಶ್ಚ, ತೇಷಾಂ ಜಾತಂ, ತೇನ ಪ್ರತೀಕ್ಷ್ಯಃ. **ಶ್ರೀಪುಷಾ** – ಶ್ರಿಯಂ ಪುಷ್ಣಾತಿ ಇತಿ ಶ್ರೀಪುಷ್ ತೇನ, **ಯೋಗಿತ್ರಿದಶವರ** – ತ್ರಿದಶೇಷು ವರಃ ತ್ರಿದಶವರಃ, ಯೋಗಿಷು ತ್ರಿದಶವರಃ ತತ್ಸಂಬುದ್ಧಿಃ.

ಕೋಶಗಳು– ಹರಿತ್ – ''ದಿಶಸ್ತು ಕಕುಭಃ ಕಾಷ್ಠಾ ಆಶಾಶ್ಚ ಹರಿತಶ್ಚ ತಾಃ'' ಇತ್ಯಮರಃ (1-3-1). ''ಹರಿದ್ದಿಶಿ ಸ್ತ್ರಿಯಾಂ ಪುಂಸಿ ಹಯವರ್ಣವಿಶೇಷಯೋಃ । ಅಸ್ತ್ರಿಯಾಂ ಸ್ಯಾತ್ತೃಣೇ ಚ'' ಇತಿ ಮೇದಿನೀ (6/174-75). ಇಷ್ಟಂ – ''ಇಷ್ಟಂ ಯಾಗೇ ಚ ದಾನೇ ಚ ವಾಂಛಿತೇಽಪಿ ಪ್ರಯುಜ್ಯತೇ'' ಇತ್ಯಜಯಃ । ''ಏಕಾಗ್ನಿಕರ್ಮ ಹವನಂ ತ್ರೇತಾಯಾಂ ಯಚ್ಚ ಹೂಯತೇ । ಅಂತರ್ವೇದ್ಯಾಂ ಚ ಯದ್ದಾನಂ ಇಷ್ಟಂ ತದಭಿಧೀಯತೇ ।।'' ಇತಿ ಮನುಃ । ತ್ರಿದಶ – ''ಅಮರಾ ನಿರ್ಜರಾ ದೇವಾಸ್ತ್ರಿದಶಾ ವಿಬುಧಾಃ ಸುರಾಃ'' ಇತ್ಯಮರಃ (1-1-7). ವೃಷಃ – ''ವೃಷೋ ಧರ್ಮೇ ಬಲೀವರ್ದೇ ಶೃಂಗ್ಯಾಂ ಪುಂ ರಾಶಿಭೇದಯೋಃ । ಶ್ರೇಷ್ಠೇ ಸ್ಯಾದುತ್ತರಸ್ಥಶ್ಚ ವಾಸಮೂಷಕಶುಕ್ರಲೇ'' ಇತಿ ಮೇದಿನೀ (167-26).

ವ್ಯಾಕರಣ ವಿಚಾರಗಳು– ಪಾಂಡಯಂತೀ – ಪಾಂಡುಂ ಕರೋತಿ ಇತಿ ಪಾಂಡಯತಿ, ''ತತ್ ಕರೋತಿ ತದಾಚಷ್ಟೇ'' ಇತಿ ಣಿಚ್ ಶತ್ರಂತರೂಪ ಸ್ತ್ರೀಲಿಂಗ ಪ್ರ.ವಿ.ಏ. ವ. ಚಂಚೂರ್ತಿ – ಚರ – ಚರತಿ ಧಾತುವಿಗೆ, ''ಧಾತೋರೇಕಾಚೋ ಹಲಾದೇಃ ಕ್ರಿಯಾಸಮಭಿಹಾರೇ ಯಙ'' ಎಂಬ ಸೂತ್ರದಂತೆ ಯಙ ಪ್ರತ್ಯಯವು

Rarest Archiver

ಹತ್ತಿ ಚಂಚೂರ್ತಿ ರೂಪವಾಗುತ್ತದೆ.

ಇಲ್ಲಿ ''ಹೇತು'' ಎಂಬ ಅಲಂಕಾರವಿದೆ. ಅದರ ಲಕ್ಷಣ ಹೀಗಿದೆ ''ಹೇತುಸ್ತ್ವತೋರೈಕ್ಯಂ ಸಹೋಕ್ತಿರ್ವಾ ತಯೋರ್ಭವೇತ್ । ವಿಜಯೀಂದ್ರಕೃಪಾದೃಷ್ಟಿಃ ಸ್ವರ್ಣವೃಷ್ಟಿರ್ಮನೀಷಿಣಾಂ'' (ಶ್ರೀಸುಧೀಂದ್ರತೀರ್ಥರ ಅಲಂಕಾರಮಂಜರೀ). ಇದಲ್ಲದೇ ವಿಶಾಖಾ ನಕ್ಷತ್ರದ ಉಲ್ಲೇಖವಿರುವುದರಿಂದ ಮುದ್ರಾ ಎಂಬ ಅಲಂಕಾರವಿದೆ.

ಗೌರ್ಯಾ ಚಾಸ್ಮಾಸು ಚರ್ಯಾತ್ಸಹ ಹರ ಇತಿ
ಕಿಂ ಪ್ರಾರ್ಥ್ಯಮಾನಾ ಮಹೀಧ್ರೈಃ ।
ಗೌರೀ ಭೂರೀಭವಂತ್ಯಾ ಭುವಿ ನಿಜವಿಭಯಾ
ಸ್ವೇಷು ಕೈಲಾಸಭಾಸಮ್ ।।
ಕೀರ್ತಿರ್ಮೂರ್ತೀರಮೀಷಾಂ ವಿಲಸತಿ
ಸತಟೀಕೂಟಪಾದಾಟವೀ ಭೂ- ।
ಸಾನೂರಾಧಾರಯಂತೀ ಭುವಿ ನಿಜಮಹಸಾಂ
ದಿಕ್ಷು ಯೋಗೀಂದ್ರಯೋಗಿನ್ ।।17।।

ಅನ್ವಯಾರ್ಥಃ - **ಹೇ ಯೋಗೀಂದ್ರಯೋಗಿನ್** - ಹೇ ಯೋಗೀಂದ್ರತೀರ್ಥರೆಂಬ ಯೋಗಿಗಳೇ, **ಭೂರೀಭವಂತ್ಯಾ** - ಬಹಳಷ್ಟು ಪ್ರಮಾಣದ್ದಾಗಿರುವ, **ನಿಜವಿಭಯಾ** - ತನ್ನ ಕಾಂತಿಯಿಂದ, **ಗೌರೀ** - ಶುಭ್ರವರ್ಣದ್ದಾಗಿರುವ, **ತವ** - ತಮ್ಮ, **ಕೀರ್ತಿಃ** - ಕೀರ್ತಿಯು, ಕೀರ್ತಿಪ್ರಭೆಯು, **ಭುವಿ** - ಭೂಲೋಕದಲ್ಲಿರುವ, **ಮಹೀಧ್ರೈಃ** - ಪರ್ವತಗಳಿಂದ, **ಹರಃ** - ಈಶ್ವರನು, **ಗೌರ್ಯಾ ಸಹ** - ಗೌರೀದೇವಿಯಿಂದ ಕೂಡಿಕೊಂಡು, **ಅಸ್ಮಾಸು ಚ** - ನಮ್ಮಲ್ಲಿಯೂ ಕೂಡ, **ಚರ್ಯಾತ್** - ಸಂಚರಿಸಲಿ, **ಇತಿ** - ಎಂದು, **ಸ್ವೇಷು** - ತಮ್ಮಲ್ಲಿ (ಪರ್ವತಗಳಲ್ಲಿ), **ಕೈಲಾಸಭಾಸಂ** - ಕೈಲಾಸಪರ್ವತದ ಪ್ರತೀಕತೆಯನ್ನು, **ಪ್ರಾರ್ಥ್ಯಮಾನಾ** - ಪ್ರಾರ್ಥಿಸಲ್ಪಟ್ಟಂತಹದಾಗಿ, **ಅಮೀಷಾಂ** - ಈ ಪರ್ವತಗಳ, **ಸತಟೀಕೂಟಪಾದಾಟವೀಭೂಸಾನೂಃ** - **ತಟೀ** - ದಂಡೆಗಳು, **ಕೂಟ** - ಶಿಖರಗಳು, **ಪಾದ** - ಸುತ್ತಲಿರುವ ಸಣ್ಣ ಸಣ್ಣ ಪರ್ವತಗಳು, ದಿನ್ನೆಗಳು, **ಅಟವೀಭೂ** - ಅರಣ್ಯಪ್ರದೇಶ, **ಸಾನೂ**

Rarest Archiver

- ಎತ್ತರದಲ್ಲಿರುವ ಸಮನಾದ ಭೂಪ್ರದೇಶ (ತಪ್ಪಲುಭೂಮಿ) ಇವೆಲ್ಲವುಗಳಿಂದ, **ಸ** - ಸಹಿತವಾದ, **ಮೂರ್ತೀ** - ಶರೀರಗಳನ್ನು, ರೂಪಗಳನ್ನು, **ನಿಜಮಹಸಾಂ** - ತನ್ನ ಕಾಂತಿಗಳಿಗೆ, **ಆಧಾರಯಂತೀ** - ಆಧಾರವಾಗಿ ಮಾಡಿಕೊಂಡು, **ದಿಕ್ಷು** - ದಿಕ್ಕುಗಳಲ್ಲಿ, **ವಿಲಸತಿ** - ವಿಶೇಷವಾಗಿ ಶೋಭಿಸುತ್ತದೆ.

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರ ಶುಭ್ರವಾದ ಕೀರ್ತಿಪ್ರಭೆಯು ಭೂಲೋಕದ ಎಲ್ಲ ಭಾಗಗಳಲ್ಲಿಯೂ ಪ್ರಸೃತವಾಗಿ ಶೋಭಿಸುತ್ತಿತ್ತು ಎಂಬ ವಿಷಯವನ್ನು ಸ್ವಾರಸ್ಯವಾದ ರೀತಿಯಲ್ಲಿ ವರ್ಣಿಸಿದ್ದಾರೆ. ಶುಭ್ರವಾದ ಕೀರ್ತಿಪ್ರಭೆಯು ಗೌರೀ ಎಂದು ಕಲ್ಪಿಸಿ, ಈ''ಗೌರಿ''ಯು ಭೂಲೋಕದ ಪರ್ವತಗಳ ಶಿಖರಗಳಲ್ಲಿ, ತಪ್ಪಲು ಪ್ರದೇಶಗಳಲ್ಲಿ, ತಟದ ಪ್ರದೇಶದಲ್ಲಿ ವ್ಯಾಪಿಸಲಿ ಎಂದು ಆ ಪರ್ವತಗಳೇ ಕೀರ್ತಿಪ್ರಭೆಯನ್ನು ಪ್ರಾರ್ಥಿಸಿದವಂತೆ. ''ಗೌರಿ''ಯು ತಮ್ಮಲ್ಲಿ ಸಂಚಾರ ಮಾಡಿದರೆ, ಈಶ್ವರನೂ ಗೌರಿಯೊಡನೆ ಸಂಚಾರ ಮಾಡುವನು. ಇದರಿಂದ ತಮಗೆಲ್ಲ ಭೂಲೋಕದಲ್ಲಿದ್ದರೂ ಕೈಲಾಸತ್ವದ ಸ್ಥಾನವು ಪ್ರಾಪ್ತವಾಗುತ್ತದೆ ಎಂಬ ಅಭಿಲಾಷೆಯಿಂದ ಈ ಗೌರವರ್ಣದ ಕೀರ್ತಿಪ್ರಭೆಯನ್ನು ಪರ್ವತಗಳೇ ಪ್ರಾರ್ಥಿಸಿದವೆಂದು ಉತ್ಪ್ರೇಕ್ಷಿಸಲಾಗಿದೆ. ಈ ಪ್ರಾರ್ಥನೆಯಂತೆ ಕೀರ್ತಿಪ್ರಭೆಯು ಪರ್ವತಗಳ ಎಲ್ಲ ಭಾಗಗಳನ್ನೂ ಭೂಪ್ರದೇಶವನ್ನೂ ಆಶ್ರಯಿಸಿ ಎಲ್ಲ ದಿಕ್ಕುಗಳಲ್ಲಿ ವಿಶೇಷವಾಗಿ ಕಂಗೊಳಿಸಿತು ಎಂದು ತಾತ್ಪರ್ಯ.

ಇಲ್ಲಿ ಸಂಸಾರತಾರಕವಾದ ಉಪಾಯಗಳು ಕೆಳಗಿನಂತೆ ಇವೆ.

1) ಮನೋನಿಯಾಮಕನಾದ ರುದ್ರನು ಶುಭ್ರವರ್ಣದ ಗೌರಿಯೊಡನೆ ಸಂಚಾರ ಮಾಡಲಿ ಎಂದರೆ ಮನಃಶುದ್ಧಿಯಾಗಿ ವೈರಾಗ್ಯ, ಭಕ್ತಿ, ಜ್ಞಾನಗಳ ಸಂಪಾದನೆಗೆ ಅನುಕೂಲವಾಗಲಿ ಎಂದರ್ಥ.

2) ಶ್ರೀಯೋಗೀಂದ್ರತೀರ್ಥರ ತತ್ವದ ಉಪದೇಶಗಳಿಗೆ ತಮ್ಮ ಹೃದಯದಲ್ಲಿ ಆಶ್ರಯ ಕೊಟ್ಟವರಿಗೆ ಕೈಲಾಸದಂತೆ ಉತ್ತಮ ಸ್ಥಾನವು ಪ್ರಾಪ್ತವಾಗುತ್ತದೆ. ಆದ್ದರಿಂದ ತತ್ವಜ್ಞಾನದ ತಳಹದಿಯ ಮೇಲೆ ಸಾಧನೆಯನ್ನು ಮಾಡಬೇಕು ಎಂದು ಸೂಚಿಸಲಾಗಿದೆ.

Rarest Archiver

ವಿಗ್ರಹ ವಾಕ್ಯಗಳು- **ಸತಟೀಕೂಟಪಾದಾಟವೀಭೂಸಾನೂಃ** - ತಟಯಶ್ಚ, ಕೂಟಾಶ್ಚ, ಪಾದಾಶ್ಚ, ಅಟವೀಭುವಶ್ಚ, ಸಾನವಶ್ಚ, ತಟೀಕೂಟಪಾದಾಟವೀಭೂ ಸಾನವಃ ತ್ಯೈಃ ಸಹಿತಾಃ, (ಮೂರ್ತಿಃ ಇದಕ್ಕೆ ವಿಶೇಷಣವಾಗಿದೆ).

ಕೋಶಗಳು- ಮಹೀಧ್ರಃ - ''ಮಹೀಧ್ರೇ ಶಿಖರಿಕ್ಷ್ಮಾಭೃದಹಾರ್ಯಧರಪರ್ವತಾಃ'' ಇತ್ಯಮರಃ (2-3-1). ವಿಭಾ (ವಿ + ಭಾ) - ''ಸ್ಯುಃ ಪ್ರಭಾರುಗ್ರುಚಿಸ್ತ್ವಿಡ್ಭಾಭಾಶ್ಚ ವಿದ್ಯುತಿ ದೀಪ್ತಯಃ'' ಇತ್ಯಮರಃ (1-4-34). ಕೈಲಾಸಃ - ಹೇಮಕೂಟಸ್ತು ಸುಮಹಾನ್ ಕೈಲಾಸೋ ನಾಮ ಪರ್ವತಃ । ಯತ್ರ ವೈಶ್ರವಣೋ ರಾಜನ್ ಗುಹ್ಯಕೈಃ ಸಹ ಮೋದತೇ'' (ಮಹಾಭಾರತ, ಭೀಷ್ಮಪರ್ವ), ''ಅಲಕಾಂ ಸಮಯಾ ಚೈಷಃ ಕೈಲಾಸಃ ಶಂಕರಾಲಯಃ'' ಕಾಶೀಖಂಡ. ಕೂಟಃ - ''ಕೂಟೋಸ್ತ್ರೀ ಶಿಖರಂ ಶೃಂಗಂ'' ಇತ್ಯಮರಃ (2-3-4). ಪಾದಾಃ - ''ಪಾದಾಃ ಪ್ರತ್ಯಂತಪರ್ವತಾಃ'' ಇತ್ಯಮರಃ(2-4-6). ಸಾನುಃ - ''ಸಾನುರಸ್ತ್ರೀವನೇ ಪ್ರಸ್ಥೇ ವಾತ್ಯಾಮಾರ್ಗಾಗ್ರಕೋವಿದೇ'' ಇತಿ ಮೇದಿನೀ (84/22). ಮಹಃ - ''ಮಹೋ ನದ್ಯಂತರೇ ಭೂಮ್ನೌ ಮಹ ಉತ್ಸವತೇಜಸೋಃ'' ಇತಿ ಮೇದಿನೀ (175).

ವ್ಯಾಕರಣ ವಿಚಾರಗಳು- ಚರ್ಯಾತ್ - ಚ - ಚರತಿ, 1ನೇಯ ಗಣ ಪ.ಪ. ಈ ಧಾತುವಿನ ಆಶೀರ್ಲಿಙ ರೂಪ ಪ್ರ.ಪು.ಏ.ವ. ಆಧಾರಯಂತೀಃ - ಆಧಾರಂ ಕರೋತಿ ಆಧಾರಯತಿ ಇದರ ಶತ್ರಂತರೂಪ ಸ್ತ್ರೀಲಿಂಗ ಪ್ರ.ವಿ.ಏ.ವ. ಅಥವಾ ಆ + ಧೃ - ಧಾರಣೇ 10ನೇಯ ಗಣ ಉ. ಪದೀ. ಆಧಾರಯತಿ, ಆಧಾರಯತೇ ಶತ್ರಂತರೂಪ.

ಇಲ್ಲಿ ಉತ್ಪ್ರೇಕ್ಷೆ ಎಂಬ ಅಲಂಕಾರವಿದೆ. ಅದರ ಲಕ್ಷಣವು ಹೀಗೆ ಇದೆ. ''ಉತ್ಪ್ರೇಕ್ಷಾ ಸ್ಯುರ್ಹೇತು ಫಲವಸ್ತು ಸಂಭಾವನಾ ದ್ವಿಧಾ । ಸಿದ್ಧಾಸಿದ್ಧಾಶ್ರಯೇ ಪೂರ್ವೇ ಪರೋಕ್ತಾನುಕ್ತಸಂಶ್ರಯಾಃ ।। ತರ್ಕ್ಯಮಾಣಾ ಶರಜ್ಜ್ಯೋತ್ಸ್ನಾ ಧೋರಣೀತಿ ನಿರಂತರಂ । ಜಯೀಂದ್ರಕೀರ್ತಿರ್ಬ್ರಹ್ಮಾಂಡೇ ಪ್ರಾಸಾದಂ ಲಿಂಪತಿ ಧ್ರುವಂ ।।'' (ಅಲಂಕಾರಮಂಜರೀ).

ಇಲ್ಲಿ ಅನುರಾಧಾ ನಕ್ಷತ್ರದ ವಿನ್ಯಾಸವಿರುವುದರಿಂದ ಮುದ್ರಾಲಂಕಾರವೂ

Rarest Archiver

ಇದೆ.

ದೇವಾ ಜಾನಂತು ದೇವಂ ಕಥಮಪಿ ಮಹಿತೈಃ ನಾಭಿನಾಲೀಕಗಂಧೈಃ ।
ಕೈಲಾಸಾಧೀಶಮಗ್ನೇರುಪಗಮವಿಕೃತಾಜ್ಜಾನತಾಮಾನತಾಂಗಾಃ ।।
ದೇವಾ ಜ್ಯೇಷ್ಠಾಕೃತಿಂ ತೇ ಧೃತಹಿಮಮಹಿಮಸ್ಥೇಮ್ನಿ
ವಿದ್ಯುಃ ಕಥಂ ತಾಂ ।
ಸಾಂದ್ರೇ ಯೋಗೀಂದ್ರಧೀರವ್ರತಿವರಯಶಸಿ
ವ್ಯಾಪ್ತವಿಧ್ಯಂಡಮಧ್ಯೇ ।।18।।

ಅನ್ವಯಾರ್ಥಃ - ಯೋಗೀಂದ್ರಧೀರವ್ರತಿವರಯಶಸಿ - ಧೀರರಾದ ಹಾಗೂ ಶ್ರೇಷ್ಠರಾದ ಯೋಗೀಂದ್ರಯತಿಗಳ ಯಶಸ್ಸು, **ಸಾಂದ್ರೇ** - ಅತಿ ದಟ್ಟವಾಗಿದ್ದು ಕೊಂಡು, **ಧೃತಹಿಮಮಹಿಮಸ್ಥೇಮ್ನಿ - ಧೃತ** - ಧರಿಸಲ್ಪಟ್ಟಂಥ, **ಹಿಮ** - ಹಿಮದ, **ಮಹಿಮ** - ಮಹತ್ತೆ ಹಾಗೂ, **ಸ್ಥೇಮ್ನಿ** - ನಿಬಿಡತೆಯುಳ್ಳದ್ದು ಆಗಿ, **ವ್ಯಾಪ್ತವಿಧ್ಯಂಡ ಮಧ್ಯೇ - ವ್ಯಾಪ್ತ** - ವ್ಯಾಪಿಸಲ್ಪಟ್ಟಿರುವ, **ವಿಧ್ಯಂಡಮಧ್ಯೇ** - ಬ್ರಹ್ಮಾಂಡದ ಅಂತರಿಕ್ಷ ಪ್ರದೇಶವುಳ್ಳದ್ದಾಗಿರುವಾಗ, ಅಂದರೆ ಬ್ರಹ್ಮಾಂಡದ ಭಾಗಗಳನ್ನೆಲ್ಲ ಹಿಮದಂತೆ ಶುಭ್ರವಾಗಿಯೂ ದಟ್ಟವಾಗಿಯೂ ಇರುವ ಕೀರ್ತಿಪ್ರಭೆಯು ವ್ಯಾಪಿಸಿಬಿಟ್ಟಿರುವಾಗ, **ಆನತಾಂಗಾಃ - ಆನತ** - ವಿನಮ್ರತೆಯಿಂದ ಬಾಗಿದ, **ಅಂಗಾಃ** - ಅವಯವಗಳುಳ್ಳ, **ದೇವಾಃ** - ದೇವತೆಗಳು, **ಮಹಿತೈಃ** - ಉತ್ಕೃಷ್ಟವಾಗಿರುವ, **ನಾಭಿನಾಲೀಕ ಗಂಧೈಃ - ನಾಭಿ** - ವಿಷ್ಣುವಿನ ನಾಭಿಯಲ್ಲಿರುವ, **ನಾಲೀಕ** - ಕಮಲದ ದೇಟಿನ, **ಗಂಧೈಃ** - ವಾಸನೆಗಳಿಂದ, **ದೇವಂ** - ವಿಷ್ಣುವನ್ನು, **ಕಥಮಪಿ** - ಹೇಗೋ ಊಹಿಸಿ, **ಜಾನಂತು** - ತಿಳಿದುಕೊಳ್ಳಬಹುದು. ಆ ದೇವತೆಗಳು, **ಅಗ್ನೇಃ** - ತಮ್ಮಲ್ಲಿ ಒಬ್ಬರಾದ ಅಗ್ನಿದೇವತೆಯ, **ಉಪಗಮವಿಕೃತಾತ್ - ಉಪಗಮ** - ಸಮೀಪದಲ್ಲಿ ಬರುವುದರಿಂದ, **ವಿಕೃತಾತ್** - ಕರಗಿ ವಿಕಾರ ಹೊಂದಿರುವುದರಿಂದ, **ಕೈಲಾಸಾಧೀಶಂ** - ರಜತಮಯವಾದ ಕೈಲಾಸಪರ್ವತದ ಅಧೀಶ್ವರನಾದ ಈಶ್ವರನ ಸನ್ನಿಧಿಯನ್ನು, **ಜಾನತಾಂ** - ತಿಳಿದುಕೊಳ್ಳಬಹುದು. ಆದರೆ, ಅದೇ ದೇವತೆಗಳು, **ಕಥಂ** - ಅದು ಹೇಗೆ, **ತಾಂ** - ಆ, **ಜ್ಯೇಷ್ಠಾಕೃತಿಂ - ಜ್ಯೇಷ್ಠ** - ಬ್ರಹ್ಮನ, **ಆಕೃತಿಂ** - ಆಕಾರವನ್ನು ಅಂದರೆ ಬ್ರಹ್ಮಾಂಡದ ಸ್ವರೂಪವನ್ನು, **ವಿದ್ಯುಃ** - ತಿಳಿದುಕೊಂಡಾರು ?

Rarest Archiver

ತಾತ್ಪರ್ಯಾರ್ಥ : ಇಲ್ಲಿ ಸುಂದರವಾದ ಕಲ್ಪನೆಗಳಿಂದ ಶ್ರೀಯೋಗೀಂದ್ರತೀರ್ಥರ ಕೀರ್ತಿಯ ವ್ಯಾಪ್ತಿಯನ್ನು ವರ್ಣಿಸುತ್ತಾರೆ. ದೇವತೆಗಳು ವಿನಮ್ರತೆಯಿಂದ ಕೂಡಿದವರಾಗಿ, ವಿಷ್ಣುವಿನ ಅಸ್ತಿತ್ವವನ್ನು, ಕೈಲಾಸದ ಸ್ವರೂಪವನ್ನು ಹಾಗೂ ಬ್ರಹ್ಮಾಂಡದ ಆಕಾರವನ್ನು ತಿಳಿಯಲು ಬಯಸುತ್ತಾರೆ. ವಿಷ್ಣುವಿನ ನಾಭಿಯಿಂದ ಕಮಲವು ಉದ್ಭೂತವಾಗಿದೆಯಷ್ಟೇ ? ಆ ನಾಭಿಕಮಲದ ಹಾಗೂ ಅದರ ದೇಟಿನ ಸುವಾಸನೆಯು ದೇವಲೋಕದಲ್ಲೆಲ್ಲ ಪ್ರಸೃತವಾಗಿರುತ್ತದೆ. ದೇವತೆಗಳೆಲ್ಲ ಈ ಸುವಾಸನೆಯ ಸುಳಿವನ್ನು ಹಿಡಿದು ಅದರ ಮೂಲವನ್ನು ಊಹಿಸಿ ವಿಷ್ಣುವಿನ ಇರವನ್ನು ತಿಳಿದುಕೊಳ್ಳಲು ಸಮರ್ಥರಾದಾರು. ಅದರಂತೆ ಕೈಲಾಸವು ಹೇಗಿದೆ, ಎಲ್ಲಿದೆ ಎಂದು ತಿಳಿದುಕೊಳ್ಳಲು ಹೊರಟಾಗ ಅವರಲ್ಲಿ ಒಬ್ಬರಾದ ಅಗ್ನಿದೇವತೆಯು ಸಮೀಪದಲ್ಲಿ ಬಂದಕೂಡಲೇ ಕೈಲಾಸದಲ್ಲಿಯ ರಜತವು ಕರಗಿ ವಿಕೃತವಾದಾಗ ''ಓಹೋ ಇದು ಕೈಲಾಸಪರ್ವತ, ಈಶ್ವರನಿರುವ ಸ್ಥಾನ'' ಎಂದು ತಿಳಿದುಕೊಳ್ಳುವುದು ಸಾಧ್ಯವಿದೆ. ಆದರೆ ಆ ದೇವತೆಗಳಿಗೆ ಬ್ರಹ್ಮಾಂಡದ ಆಕಾರವನ್ನು ತಿಳಿಯುವುದೇ ಅಸಾಧ್ಯವಾಗಿದೆ. ಏಕೆಂದರೆ ಬ್ರಹ್ಮಾಂಡದ ಅವಕಾಶದಲ್ಲೆಲ್ಲ ಶ್ರೀಯೋಗೀಂದ್ರತೀರ್ಥರ ಕೀರ್ತಿಪ್ರಭೆಯು ಹಿಮದ ಸಂಹತಿಯಂತೆ ನಿಬಿಡವಾಗಿ, ಸ್ಥೈರ್ಯದಿಂದ ವ್ಯಾಪ್ತವಾಗಿದೆ. ಇದರಿಂದ ಬ್ರಹ್ಮಾಂಡದ ಆಕಾರದ ಸುಳಿವೇ ಸಿಗುವುದು ಅಸಾಧ್ಯವಾಗಿ ದೇವತೆಗಳು ಬ್ರಹ್ಮಾಂಡದ ಆಕಾರವನ್ನು ತಿಳಿಯಲು ಅಸಮರ್ಥರಾಗಿದ್ದಾರೆ ಎಂದು ಉದ್ಗಾರವನ್ನು ತೆಗೆಯಲಾಗಿದೆ.

ಸಂಸಾರ ತಾರಕ ಉಪಾಯಗಳು ತತ್ತ್ವವಿಚಾರಗಳು ಕೆಳಗಿನಂತೆ ಇವೆ.

1) ಜಿಜ್ಞಾಸುಗಳಾದವರು ವಿನಮ್ರತೆಯಿಂದ ಜ್ಞಾನಮಾರ್ಗವನ್ನು ಸಾಧಿಸಬೇಕು..

2) ವಿಷ್ಣುವಿನ ಸ್ವರೂಪದ ಅರಿವನ್ನು ಅಗಮಪೋಷಿತವಾದ ಅನುಮಾನದಿಂದ, ಹಾಗೂ ಸೃಷ್ಟ್ಯಾದಿಗಳಿಗೆ ಮೂಲ ಕಾರಣವೆಂಬ ಲಕ್ಷಣಗಳಿಂದ ಪಡೆಯಬಹುದು.

3) ಪೃಥಿವೀ, ಅಪ್, ತೇಜಸ್ (ಅಗ್ನಿ), ವಾಯು, ಆಕಾಶ ಎಂಬ ಪಂಚ

Rarest Archiver

ಮಹಾಭೂತಗಳ ಅನೇಕ ವಿಕಾರಗಳ ಬಂಧವೇ ಈ ಸಂಸಾರ. ಮನೋಭಿಮಾನಿಯಾದ ರುದ್ರದೇವನ ಅಸ್ತಿತ್ವವನ್ನು ಈ ಅನೇಕ ವಿಕಾರಗಳ ಪರಿಣಾಮಗಳಿಂದಾಗಿ ಊಹಿಸಬಹುದು. ಸಂಸಾರದ ಆಗು ಹೋಗುಗಳಿಂದ ಉಂಟಾಗುವ ಮನಸ್ಸಿನ ಪ್ರಕ್ಷೋಭದಿಂದ ಇದಕ್ಕೆಲ್ಲ ಅಭಿಮಾನಿಯಾದ ದೇವತೆಯೊಬ್ಬ ಇರಬೇಕು ಎಂಬ ಕಲ್ಪನೆಗೆ ಅವಕಾಶವಿದೆ.

4) ವಿಷ್ಣುವಿನ ಶ್ರೇಷ್ಠವಾದ ಸರ್ವತ್ರವ್ಯಾಪ್ತವಾದ ವಿಶ್ವರೂಪದ ಜ್ಞಾನವನ್ನು ಮಾಡಿಕೊಂಡು ವ್ಯಾಪ್ತ್ಯೋಪಾಸನೆಯನ್ನು ಮಾಡುವುದು ಕಷ್ಟಸಾಧ್ಯವಾಗಿದೆ. ಯೋಗ, ಧೈರ್ಯ, ವ್ರತನಿಯಮ ಇತ್ಯಾದಿ ಸಾಧನೆಗಳಿಂದ ಮಾತ್ರ ಪರಮಾತ್ಮನ ವ್ಯಾಪ್ತಿಯನ್ನು ಅರಿತುಕೊಳ್ಳಬಹುದು. ಇಲ್ಲಿ ಧೀರರಾದ ವ್ರತಿಗಳಾದ ಯೋಗಿಗಳಾದ ಯೋಗೀಂದ್ರರು ತಮ್ಮ ಯಶಸ್ಸಿನ ವಯಪಯಪ್ತಿಯಿಂದ ಪರಮಾತ್ಮನ ವ್ಯಾಪ್ತ್ಯೋಪಾಸನೆಯನ್ನು ಮಾಡುತ್ತಿರುತ್ತಾರೆ ಎಂದು ಸೂಚಿತವಾಗಿದೆ.

ವಿಗ್ರಹವಾಕ್ಯಗಳು- ನಾಭಿನಾಲೀಕಗಂಧೈಃ - ನಾಭ್ಯಾಂ ಉತ್ಪನ್ನಂ ನಾಲೀಕಂ, ತಸ್ಯ ಗಂಧಾಃ, ತೈಃ. **ಕೈಲಾಸಾಧೀಶಂ** - ಕೈಲಾಸಸ್ಯ ಅಧೀಶಃ ತಂ. **ಉಪಗಮವಿಕೃತಾತ್** - ಉಪಗಮೇನ ವಿಕೃತಂ ತಸ್ಮಾತ್, **ಆನತಾಂಗಾಃ** - ಆನತಾನಿ ಅಂಗಾನಿ ಏಷಾಂ ತೇ, **ಧೃತಹಿಮಮಹಿಮಸ್ಥೇಮ್ನಿ** - ಮಹಿಮಾ ಚ ಸ್ಥೇಮಾ ಚ ಮಹಿಮಸ್ಥೇಮಾನೌ, ಹಿಮಾನಾಂ ಮಹಿಮಸ್ಥೇಮಾನೌ, ಧೃತೌ ಹಿಮಮಹಿಮಸ್ಥೇಮಾನೌ ಯೇನ ತತ್ ತಸ್ಮಿನ್. **ವ್ಯಾಪ್ತವಿಧ್ಯಂಡಮಧ್ಯೇ** - ವ್ಯಾಪ್ತಂ ಚ ತತ್ ವಿಧ್ಯಂಡಂ ವ್ಯಾಪ್ತವಿಧ್ಯಂಡಂ ತಸ್ಮಿನ್.

ಕೋಶಗಳು- ನಾಲೀಕಂ - ''ಕಲಂಬಃ ಸಾಯಕೇ ನೀಪೇ ನಾಲೀಶಾಕೇ ಕಲಂಬ್ಯಪಿ '' ಇತಿ ಮೇದಿನಿ (105/9). ಹಿಮಂ - ''ಅವಶ್ಯಾಯಸ್ತು ನೀಹಾರಸ್ತುಷಾರಸ್ತು-ಹಿನಂ ಹಿಮಂ । ಪ್ರಾಲೇಯಂ ಮಹಿಕಾ ಚ'' ಇತ್ಯಮರಃ (1-3-18). ಯಶಸ್ - ''ಯಶಃ ಕೀರ್ತಿಃ ಸಮಜ್ಞಾ ಚ'' ಇತ್ಯಮರಃ (1-6-11).

ವ್ಯಾಕರಣ ವಿಚಾರಗಳು- ಜಾನತಾಂ - ಜ್ಞಾ - ಅವಭೋದನೇ, 9ನೇಯ ಗಣ ಉ.ಪ. ಜಾನಾತಿ, ಜಾನೀತೇ, ಈ ಧಾತುವಿನ ಲೋಟ್ ಪ್ರ.ಪು. ಏ.ವ.

Rarest Archiver

ಜಾನಂತು - ಜ್ಞಾ - ಅವಬೋಧನೇ ಧಾತುವಿನ ಪ. ಪದದ ಲೋಟ್ ಪ್ರ.ಪು. ಬಹುವಚನ. ವಿದ್ಯುಃ - ವಿದ್ ಜ್ಞಾನೇ ವೇತ್ತಿ 7ನೇಯ ಗಣ, ಈ ಧಾತುವಿನ ವಿಧಿಲಿಜ ಪ್ರ.ಪು. ಬಹುವಚನ.

ಯಾವನ್ನೇನೇಕ್ತಿ ಪಾದಾನಧಿಜಲಧಿರ್ನಭಸ್ವಾನನಿಸ್ವಾನಪಕ್ಷಿ -
ಕ್ಷಿಪ್ನುಃ ಸ್ವಪ್ನಂ ತದದ್ಭಿಶ್ಶುಚಿಭಿರಥ ನಿಜಂ ನೇನಜತ್ಪಾದಯುಗ್ಮಂ ।।
ಯಾವದ್ಬಾಹ್ಯಂ ತಮಃ ಸ್ವೈರ್ನ ಸ ಧುವತಿ
ಕರೈರಾಂತರಂ ತತ್ಸಮೂಲಂ ।
ಶ್ರೀಯೋಗೀಂದ್ರಃ ಪರಿವ್ರಾಡಿತಿಹರಿ ಹರತೇ
ತಾವದೇವಾಶ್ರಿತಾನಾಮ್ ।।19।।

ಅನ್ವಯಾರ್ಥಃ - ನಭಸ್ವಾನ್ - ಸೂರ್ಯನು, **ಯಾವತ್** - ಯಾವ ಸಮಯದ ಒಳಗೇ, **ಅನಿಸ್ವಾನಪಕ್ಷಿ** - ಪಕ್ಷಿಗಳೆಲ್ಲ ನಿಶ್ಯಬ್ದವಾಗದೇ ಇರುವ ರೀತಿಯಲ್ಲಿ, ಅಂದರೆ ಪಕ್ಷಿಗಳೆಲ್ಲ ಚಿಲಿಪಿಲಿ ಶಬ್ದಮಾಡುವಂತೆ ಇರುವಾಗ, **ಪಾದಾನ್** ತನ್ನ ಪಾದಗಳನ್ನು ಹಾಗೂ ಕಿರಣಗಳನ್ನು **ಅಧಿಜಲಧಿ** - ಸಮುದ್ರದಲ್ಲಿ, **ನೇನೇಕ್ತಿ** - ತೊಳೆಯುತ್ತಾನೆಯೋ, **ತಾವತ್** - ಅಷ್ಟರಲ್ಲಿ ಅಂದರೆ ಅದಕ್ಕಿಂತ ಮೊದಲೇ, **ಪರಿವ್ರಾಡ್** - ಚತುರ್ಥಾಶ್ರಮದಲ್ಲಿ ಇರುವ, **ಶ್ರೀಯೋಗೀಂದ್ರಃ** - ಶ್ರೀಯೋಗೀಂದ್ರತೀರ್ಥರು, **ಸ್ವಪ್ನಂ** - ನಿದ್ರೆಯನ್ನು, **ಕ್ಷಿಪ್ನುಃ** - ಹೊಡೆದೋಡಿಸುತ್ತ, **ಶುಚಿಭಿಃ** - ಶುದ್ಧವಾದ, **ಅದ್ಭಿಃ** - ನೀರುಗಳಿಂದ, **ನಿಜಂ** - ತಮ್ಮ, **ಪಾದಯುಗ್ಮಂ** - ಎರಡೂ ಪಾದಗಳನ್ನು, **ನೇನಜತ್** - ತೊಳೆಯುತ್ತ, ಮತ್ತೆ, **ಯಾವತ್** - ಎಷ್ಟರಲ್ಲಿ, **ಸಃ** - ಸೂರ್ಯನು, **ಸ್ವೈಃ ಕರೈಃ** - ತನ್ನ ಕೈಗಳಿಂದ ಅಂದರೆ ಕಿರಣಗಳಿಂದ, **ಬಾಹ್ಯಂ** - ಹೊರಗಿನ, **ತಮಃ** - ಕತ್ತಲೆಯನ್ನು, **ನ ಧುವತಿ** - ನಾಶಮಾಡಲಿಲ್ಲವೋ, **ತಾವತ್ ಏವ** - ಅಷ್ಟರಲ್ಲಿಯೇ, ಅಂದರೆ ಸೂರ್ಯನು ಹೊರಗಿನ ಕತ್ತಲೆಯನ್ನು ಹೋಗಲಾಡಿಸುವಷ್ಟರಲ್ಲಿ, ಶ್ರೀಯೋಗೀಂದ್ರತೀರ್ಥರು. **ಆಶ್ರಿತಾನಾಂ** - ತಮ್ಮನ್ನು ಆಶ್ರಯಿಸಿದವರ ಅಂದರೆ ತಮ್ಮ ಶಿಷ್ಯಭಕ್ತರುಗಳ, **ಆಂತರಂ** - ಆಂತರಿಕವಾದ, ಹೃದಯದಲ್ಲಿರುವ, **ತಮಃ** - ಕತ್ತಲೆಯನ್ನು ಅಂದರೆ ಅಜ್ಞಾನವನ್ನು, **ಸಮೂಲಂ** - ಬೇರುಸಹಿತವಾಗಿ, **ಶ್ರೀಯೋಗೀಂದ್ರಃ ಪರಿವ್ರಾಡ್ ಇತಿ ಹರಿ** - ಶ್ರೀಯೋಗೀಂದ್ರರು ಶ್ರೇಷ್ಠ ಸನ್ಯಾಸಿಗಳು ಎಂದು ಶಿಷ್ಯರು ಶಬ್ದೋಚ್ಚಾರಣ ಮಾಡುತ್ತಿರುವಾಗಲೇ, **ಹರತೇ** -

Rarest Archiver

ನಾಶಮಾಡಿಬಿಡುತ್ತಾರೆ.

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರು ಸೂರ್ಯನ ವರ್ಚಸ್ಸನ್ನೂ ಮೀರಿಸಿದ್ದಾರೆ. ಸೂರ್ಯನು ಉಷಃ ಕಾಲದಲ್ಲಿ ತನ್ನ ಕಿರಣಗಳನ್ನು ಸಮುದ್ರದಲ್ಲಿ ಮುಳುಗಿಸಿ ತೊಳೆದುಕೊಳ್ಳುತ್ತಾನೆ. ಆಗ ತಾನೇ ಪಕ್ಷಿಗಳು ಚಿಲಿಪಿಲಿ ಎಂದು ಶಬ್ದವನ್ನು ಪ್ರಾರಂಭಿಸಿರುತ್ತವೆ. ಆದರೆ ಶ್ರೀಯೋಗೀಂದ್ರತೀರ್ಥರು ಇದಕ್ಕೂ ಮುಂಚೆಯೇ ನಿದ್ರೆಯಿಂದ ಎಚ್ಚತ್ತು ಶುದ್ಧವಾದ ನೀರಿನಿಂದ ತಮ್ಮ ಮುಖಪಾದಾದಿಗಳ ಪ್ರಕ್ಷಾಲನೆಯನ್ನು ಮಾಡಿ ಪ್ರಾತರ್ವಿಧಿಗಳನ್ನು ಪೂರೈಸಿಕೊಂಡು ಪಾಠಪ್ರವಚನದ ನಿತ್ಯಕರ್ಮಗಳಿಗೆ ಸಿದ್ಧರಾಗಿ ಬಿಡುತ್ತಾರೆ. ಸೂರ್ಯನು ತನ್ನ ಕಿರಣಗಳಿಂದ ಹೊರಗಿನ ಕತ್ತಲೆಯನ್ನು ಮಾತ್ರ ಹೋಗಲಾಡಿಸುತ್ತಾನೆ. ಪ್ರಾತಃಕಾಲದಲ್ಲಿ ಶಿಷ್ಯರು ಏಳುತ್ತಲೇ ತಮ್ಮ ಗುರುಗಳ ನಾಮೋಚ್ಚಾರಣೆ ಮಾಡುತ್ತಾರೆ ಮತ್ತು ಹರಿ ಎಂಬ ಶಬ್ದ ನಾಮೋಚ್ಚಾರಣೆ ಮಾಡುತ್ತಿರುವಾಗಲೇ ಶ್ರೀಯೋಗೀಂದ್ರತೀರ್ಥರ ಅನುಗ್ರಹದಿಂದ ಶಿಷ್ಯರ ಆಂತರಿಕತಮಸ್ಸು ಅಂದರೆ ಅಜ್ಞಾನವೆಲ್ಲ ನಾಶವಾಗುತ್ತದೆ. ಅದಲ್ಲದೇ ಶ್ರೀಯೋಗೀಂದ್ರತೀರ್ಥರು ಪ್ರಾತಃಕಾಲದಲ್ಲಿ ಮಾಡುವ ತತ್ತ್ವೋಪದೇಶದಿಂದಾಗಿ ಶಿಷ್ಯರ ಅಜ್ಞಾನವು ಹೊಡೆದೋಡಿ ಸುಜ್ಞಾನದ ಬೆಳಕು ಅವರ ಹೃದಯವನ್ನು ಆವರಿಸುತ್ತದೆ. ಆದ್ದರಿಂದ ಶ್ರೀಯೋಗೀಂದ್ರತೀರ್ಥರು ಸೂರ್ಯನನ್ನೂ ಮೀರಿಸಿದ್ದಾರೆ ಎಂದು ತಾತ್ಪರ್ಯ.

ಸಂಸಾರತಾರಕವಾದ ತತ್ತ್ವಗಳು ಈ ಕೆಳಗಿನಂತೆ ಪ್ರತಿಪಾದಿತವಾಗಿವೆ. 1) ನಿತ್ಯನೈಮಿತ್ತಿಕ ಕರ್ಮಗಳು ಹಾಗೂ ಸದಾಚಾರವು ಸಾಧನಮಾರ್ಗದಲ್ಲಿ ಅವಶ್ಯವಾಗಿವೆ.

2) ಗುರುಗಳಲ್ಲಿ ಶ್ರದ್ಧೆಯಿಂದ ಗುರೂಪದೇಶವನ್ನು ಪಡೆದರೆ ಹೃದಯದ ಕತ್ತಲೆಯು ನಾಶವಾಗುತ್ತದೆ. ಅಂದರೆ ಅಜ್ಞಾನ, ವಿಪರೀತ ಜ್ಞಾನಗಳು ನಿವಾರಿತವಾಗಿ ಸುಜ್ಞಾನದ ಬೆಳಕು ಹೃದಯವನ್ನು ಬೆಳಗುತ್ತದೆ. ''ಸರ್ವೇಪಿ ಪುರುಷಾರ್ಥಾಃ ಸ್ಯುಃ ಜ್ಞಾನಾದೇವ ನ ಸಂಶಯಃ । ನ ಲಿಪ್ಯತೇ ಜ್ಞಾನವಾಂಶ್ಚ ಸರ್ವದೋಷೈರಪಿ ಕ್ವಚಿತ್'' ಎಂದು ಶ್ರೀಮಧ್ವಾಚಾರ್ಯರು ತಮ್ಮ ಶ್ರೀಬ್ರಹ್ಮಸೂತ್ರ ಅಣುಭಾಷ್ಯದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಅದರಂತೆ ಜ್ಞಾನಮಾರ್ಗದಿಂದ ಸಾಧನೆ ಮಾಡಿದರೆ

Rarest Archiver

ಉತ್ತಮವಾದ ಫಲವು ಪ್ರಾಪ್ತವಾಗುತ್ತದೆ. ಇದಕ್ಕೆಲ್ಲ ಗುರ್ವನುಗ್ರಹವು ಅವಶ್ಯ ವಾಗಿ ಬೇಕು.

ವಿಗ್ರಹವಾಕ್ಯಗಳು- ಅನಿಸ್ವಾನಪಕ್ಷ - ಅನಿಸ್ವಾನಾಃ ಪಕ್ಷಯಃ ಯಥಾ ಸ್ಯಾತ್ ತಥಾ.

ಕೋಶಗಳು- ಪಾದಾಃ - ''ಪಾದೋ ಬುಧ್ನೇ ತುರಿಯಾಂಶೇ ಶೈಲೇ ಪ್ರತ್ಯಂತಪ ರ್ವತೇ । ಚರಣೇ ಚ ಮಯೂಖೇ ಚ'' ಇತಿ ಮೇದಿನೀ (75/9-10). ನಿಸ್ವಾನಃ - ''ಸ್ವಾನ ನಿರ್ಘೋಷನಿರ್ಹ್ರಾದನಾದನಿಸ್ವಾನನಿಸ್ವನಾಃ । ಆರಾವಾರಾವಸಂರಾ ವವಿರಾವಾಃ'' ಇತ್ಯಮರಃ (1-6-23). ತಮಃ - ''ಅಂಧಕಾರೋಸ್ತ್ರಿಯಾಂ ಧ್ವಾಂತಂ ತಮಿಸ್ರಂ ತಿಮಿರಂ ತಮಃ'' ಇತ್ಯಮರಃ (1-8-3). ಕರಾಃ - ''ಕರೋವ ರ್ಷೋಪಲೇ ರಶ್ಮೌ ಪಾಣೌ ಪ್ರತ್ಯಾಯ ಕುಂಡಯೋಃ'' ಇತಿ ಮೇದಿನೀ. ಪರಿ ವ್ರಾಟ್ - ''ಭಿಕ್ಷುಃ ಪರಿವ್ರಾಟ್ ಕರ್ಮಂದೀ ಪಾರಾಶರ್ಯಪಿ ಮಸ್ಕರೀ'' ಇತ್ಯಮರಃ.

ವ್ಯಾಕರಣ ವಿಚಾರಗಳು- ನೇನೇಕ್ತಿ - ''ಣಿಜಿರ್'' ಶೌಚಪೋಷಣಯೋಃ. ಜುಹೋತ್ಯಾದಿಗಣ (3ನೇಯ ಗಣ) ಉಭಯಪದೀ ಅನಿಟ್, ವರ್ತಮಾನಕಾಲ ಪ್ರ.ಪು.ಏ.ವ. ನೇನೇಕ್ತಿ ನೇನಿಕ್ತಃ ನೇನಿಜತಿ. ನೇನೇಕ್ಷಿ ನೇನಿಕ್ಥಃ ನೇನಿಕ್ಥ । ನೇನೇಜ್ಮಿ ನೇನಿಜ್ವಃ ನೇನಿಜ್ಮಃ ॥ ಕ್ಷಿಪ್ನುಃ - ಕ್ಷಿಪ್ - ಪ್ರೇರಣೇ, 6ನೇಯ(ತುದಾದಿ) ಗಣ, ಉಭಯಪದೀ, ಸಕ. ಅನಿಟ್, ತಚ್ಛೀಲಾದಿಷು ''ಕ್ನುಃ'' (3-2-140). ನೇನಜತ್ - ಣಿಜಿರ್ ಶೌಚಪೋಷಣಯೋಃ, 3ನೇಯ ಗಣ ಉಭಯಪದೀ ಅನಿಟ್, ಶತೃಂತ. ಧುವತಿ - ಧೂ - ಕಂಪನೇ ವಿಧೂನನೇ 1ನೇಯ ಗಣ ಹಾಗೂ 9ನೇಯ ಗಣ, ವ.ಕಾಲ.ಪ್ರ.ಪು.ಏ.ವ. ಹರತೇ - ಹೃ - ಹರಣೇ 1ನೇಯ ಗಣ ಉ.ಪದೀ ಹರತಿ - ಹರತೇ.

ಶ್ರುತ್ಯುದ್ಗ್ರಾಹಂ ಪ್ರವಾಹೇ ಸನಿಯಮವಿಹಿತಾ-
ಪ್ಲಾವನಃ ಪಾವನೋ ನೋ ।
ಹೃದ್ಯಾದೃತ್ಯ ತ್ರಯೀ ಸಂಗತ ಉಪನಿದಧತ್

Rarest Archiver

ಪ್ರೌಢಭಾಃ ಕೈಟಭಾರಿಂ ।।
ಪ್ರಾಗ್ರ್ಯ್ಯಷಾಢಾಂಕಪಾಣಿಂ ಬಲಿರಿಪುಮಪಿ
ದೋರ್ಮಂಡನಂ ದಂಡಮಗ್ರ್ಯಂ ।
ಶುಭ್ರಂ ಬಿಭ್ರತ್ಸ್ವಯೋಗಿಪ್ರವರ ಉಪದಧತ್(ಗುರುವರೋ)
ಯೋಗಬಂಧೇ ಸಮಿಂಧೇ ।। 20।।

ಅನ್ವಯಾರ್ಥಃ - ಶ್ರುತ್ಯುದ್ಗ್ರಾಹಂ - ಎರಡೂ ಕರ್ಣಗಳನ್ನು ಬಿಗಿಯಾಗಿ ಮುಚ್ಚಿಕೊಂಡು, **ಪ್ರವಾಹೇ** - ನದಿಯ ಪ್ರವಾಹದಲ್ಲಿ, **ಸನಿಯಮವಿಹಿತಾಪ್ಲಾವನಃ - ಸನಿಯಮ** - ಶಾಸ್ತ್ರದಲ್ಲಿ ಹೇಳಲ್ಪಟ್ಟ ನದೀಸ್ನಾನದ ನಿಯಮಗಳಿಗೆ ಅನುಗುಣ ವಾಗಿ, **ವಿಹಿತ** - ಆಚರಿಸಲ್ಪಟ್ಟ, **ಪ್ಲಾವನಃ** - ಸ್ನಾನವುಳ್ಳವರಾದ, **ಪಾವನಃ** - ಶುದ್ಧರಾದ, **ಸಃ** - ಆ ಶ್ರೀಯೋಗೀಂದ್ರತೀರ್ಥರು, ತಮ್ಮ, **ತ್ರಯೀಸಂಗತಂ** - ವೇದಗಳಲ್ಲಿ, ಪ್ರತಿಪಾದ್ಯತ್ವೇನ - ಸಂಬಂಧವುಳ್ಳವನಾದ, **ಕೈಟಭಾರಿಂ** - ಕೈಟಭ ನಾಮಕದೈತ್ಯನೇ ಅರಿಯಾಗಿಯುಳ್ಳ ಶ್ರೀಕೃಷ್ಣನನ್ನು, **ನಃ** - ನಮ್ಮಗಳ, **ಹೃದಿ** - ಹೃದಯದಲ್ಲಿ, **ಆದೃತ್ಯ** - ಆದರದಿಂದ, **ಉಪನಿದಧತ್** - ಸ್ಥಾಪನೆಮಾಡುತ್ತ ಅಂದರೆ ನಮಗೆಲ್ಲ ಸ್ಮರಣೆಯನ್ನು ತಂದುಕೊಡುತ್ತ, **ದೋರ್ಮಂಡನಂ -ದೋಃ** - ತನ್ನ ಕರಕ್ಕೆ, **ಮಂಡನಂ** - ಅಲಂಕಾರಪ್ರಾಯವಾದ, **ಅಗ್ರ್ಯಂ** - ಶ್ರೇಷ್ಠವಾಗಿರುವ, **ಶುಭ್ರಂ** - ಶುಭ್ರವರ್ಣದಿಂದ ಪ್ರಜ್ವಲಿಸುತ್ತಿರುವ, **ದಂಡಂ** - ದಂಡವನ್ನು, **ಬಿಭ್ರತ್** - ಹಿಡಿದುಕೊಂಡವರಾಗಿ, (ಬಿಭ್ರತ್), **ಪ್ರಾಗ್ರ್ಯ್ಯಷಾಢಾಂಕಪಾಣಿಂ - ಪ್ರಾಗ್ರ್ಯ್ಯ ಷಾಢ** - ಶ್ರೇಷ್ಠವಾದ ಪಲಾಶ ವೃಕ್ಷದ ದಂಡವೇ, **ಅಂಕ** - ಅಂದರೆ ಚಿಹ್ನವಾಗಿ ಯುಳ್ಳ, **ಪಾಣಿಂ** - ಕರವುಳ್ಳವನಾದ, **ಬಲಿರಿಪುಂ** - ಬಲಿಚಕ್ರವರ್ತಿಯೇ ರಿಪುವಾಗಿ ರುವ ವಾಮನ ಮೂರ್ತಿಯನ್ನು ನಮ್ಮ ಹೃದಯದಲ್ಲಿ, **ಉಪದಧತ್** - ಸ್ಥಾಪನೆ ಮಾಡುತ್ತ,ವಾಮನ ಮೂರ್ತಿಯ ಸ್ಮರಣೆಯನ್ನು ತಂದುಕೊಡುತ್ತ, **ಪ್ರೌಢಭಾಃ** - ಪ್ರೌಢವಾದ ವರ್ಚಸ್ಸುಳ್ಳವರಾದ, **ಯೋಗಿಪ್ರವರಃ** - ಶ್ರೀಯೋಗೀಂದ್ರತೀರ್ಥರು, **ಯೋಗಬಂಧೇ** - ಯೋಗಾಸನದ ಬಂಧದಲ್ಲಿ, **ಸಮಿಂಧೇ** - ಪ್ರಕಾಶಿಸುತ್ತಾರೆ.

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರು ವಿಧಿಪ್ರಕಾರ ತಮ್ಮ ಶ್ರುತಿಗ ಳನ್ನು ಅಂದರೆ ಕರ್ಣಗಳನ್ನು ಬಿಗಿಯಾಗಿ ಹಿಡಿದುಕೊಂಡು ಅವಗಾಹನ ಸ್ನಾನವನ್ನು ಮಾಡಿಕೊಂಡು ವೇದಪಠನ ಮಾಡುತ್ತ ಮೇಲೆ ಬಂದು ತಮ್ಮ ಕರಗಳಿಂದ ಶ್ರೇಷ್ಠ

Rarest Archiver

ವಾದ ದಂಡವನ್ನು ಹಿಡಿದುಕೊಂಡು ತಮ್ಮ ಪೀಠಕ್ಕೆ ಬಂದು ಅಲ್ಲಿ ಯೋಗಾಸನದಲ್ಲಿ ಮಂಡಿತರಾಗಿ ತಮ್ಮ ನಿತ್ಯಾಹ್ನಿಕಗಳನ್ನು ಆಚರಿಸಲು ಉದ್ಯುಕ್ತರಾಗುತ್ತಾರೆ. ಅವರು ಶ್ರುತಿಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿರುವ ಪ್ರಸಂಗದಿಂದ ಶ್ರುತಿಗಳಲ್ಲಿ ದೃಢ ವಾಗಿ ಪ್ರತಿಪಾದಿತನಾಗಿರುವ ವಿಷ್ಣುವಿನ ಸ್ಮರಣೆಯುಂಟಾಗುತ್ತದೆ. ಅವರು ದಂಡ ವನ್ನು ಧರಿಸಿರುವುದನ್ನು ಗಮನಿಸಿದರೆ ಕೈಯಲ್ಲಿ ಪಲಾಶಪತ್ರದ ಟೊಂಗೆಯನ್ನು ಹಿಡಿದುಕೊಂಡು ಕೌಪೀನಧಾರಿಯಾಗಿ ಬ್ರಹ್ಮಚಾರಿಯ ವೇಷದಲ್ಲಿರುವ ವಾಮನ ಮೂರ್ತಿಯ ಸ್ಮರಣೆಯು ಬರುತ್ತದೆ. ಶ್ರೀಯೋಗೀಂದ್ರತೀರ್ಥರ ದಿನಚರ್ಯೆಯು ಭಗವಂತನ ಪೂಜಾ ರೂಪವಾದುದರಿಂದ ಯಾವಾಗಲೂ ಭಗವಂತನ ಭಿನ್ನ ಭಿನ್ನ ರೂಪಗಳನ್ನು ಜ್ಞಾಪಕಕ್ಕೆ ತಂದುಕೊಟ್ಟು ಸಾಧನೆಯನ್ನು ಪ್ರಚೋದಿಸುತ್ತಿರುತ್ತದೆ ಎಂದು ತಾತ್ಪರ್ಯಾರ್ಥ.

ಇಲ್ಲಿ ಈ ಕೆಳಗಿನ ಸಂಸಾರತಾರಕಗಳಾದ ಪ್ರಮೇಯಗಳು ಪ್ರತಿಪಾದತವಾ ಗಿವೆ.

1) ಸಾಧಕನು ಸಕಾಲದಲ್ಲಿ ಸ್ನಾನ ನಿತ್ಯಾಹ್ನಿಕಕರ್ಮ, ಧ್ಯಾನ, ಯೋಗ ಸ್ವವರ್ಣಾಶ್ರಮವಿಹಿತಧರ್ಮಗಳು ಇತ್ಯಾದಿಗಳಲ್ಲಿ ರತನಾಗಿರಬೇಕು.

2) ಸಂಸಾರವೆಂಬ ಜಲಪ್ರವಾಹದಲ್ಲಿ ಈಜಿ ದಾಟಿ ಬೇರೆ ತಟವನ್ನು ಸೇರಬೇಕಾಗಿದ್ದರೆ ಸದಾಚಾರಗಳ ಆಚರಣೆಗಳಲ್ಲದೇ ವೇದಗಳ ಅಧ್ಯಯನ, ಶ್ರುತಿಗ ಳಲ್ಲಿ ನಾರಾಯಣನೇ ಪ್ರತಿಪಾದಿತನಾಗಿದ್ದಾನೆ ಎಂಬ ಜ್ಞಾನ, ಶ್ರುತಿಪ್ರತಿಪಾದ್ಯನಾದ ನಾರಾಯಣನ ಅನೇಕ ರೂಪಗಳ ಸದಾ ಚಿಂತನೆ, ಆತ್ಮಸಂಯಮರೂಪವಾದ ಯೋಗ ಇತ್ಯಾದಿಗಳು ಅವಶ್ಯವಾಗಿವೆ.

ವಿಗ್ರಹವಾಕ್ಯಗಳು– ಶ್ರುತ್ಯುದ್ಗ್ರಾಹಂ – ಶ್ರುತ್ಯೋಃ (ಕರ್ಣಯೋಃ) ಉದ್ಗ್ರ ಹಣಂ ಯಥಾ ಸ್ಯಾತ್ತಥಾ. **ಸನಿಯಮವಿಹಿತಾಪ್ಲಾವನಃ** – ನಿಯಮೇನ ಸಹಿತಂ ಸನಿಯಮಂ ವಿಹಿತಂ ಆಪ್ಲಾವನಂ ಏನ ಸಃ. **ತ್ರಯೀಸಂಗತಂ** – ತ್ರಯೀಷು ಸಂಗತಃ ತಮ್. **ಕೈಟಭಾರಿಂ** – ಕೆಟಭಃ ಅರಿಃ ಯಸ್ಯ ಕೈಟಭಾರಿಃ ತಮ್. **ಪ್ರೌಢಭಾಃ** – **ಪ್ರೌಢಃ** ಭಾಃ ಯಸ್ಯ ಸಃ. **ಪ್ರಾಗ್ರ್ಯಾಷಾಢಾಂಕಪಾಣಿಂ** – ಪ್ರಾಗ್ರ್ಯಶ್ಚಾಸೌ

Rarest Archiver

ಆಷಾಢಶ್ಚ, ಪ್ರಾಗ್ರ್ಯಾಷಾಢಃ ಸ ಏವ ಅಂಕಃ ಯಸ್ಯ ಸಃ ಪ್ರಾಗ್ರ್ಯಾಷಾಢಾಂಕಃ ಪಾಣಿಃ ಯಸ್ಯ ಸಃ ತಮ್. **ಬಲಿರಿಪುಂ** - ಬಲಿಃ ರಿಪುಃ ಯಸ್ಯ ಸಃ. **ದೋರ್ಮಂಡನಂ - ದೋಷಃ (ದೋರ್** - ಶಬ್ದದ ಷಷ್ಠೀ ಏಕವಚನ **ದೋಷಃ = ಕರಸ್ಯ), ಮಂಡನಂ. ಯೋಗಿಪ್ರವರಃ** - ಯೋಗಿಷು ಪ್ರವರಃ.

ಕೋಶಗಳು- ಶ್ರುತಿಃ - ''ಶ್ರುತಿಃ ಸ್ತ್ರೀ ವೇದ ಆಮ್ನಾಯಸ್ತ್ರಯೀ'' ಇತ್ಯಮರಃ ಭಾಃ - ಸ್ಯುಃ ಪ್ರಭಾರುಗ್ರುಚಿಸ್ತ್ವಿಡ್ ಭಾ ಭಾಶ ಏದ್ಯುತಿ ದೀಪ್ತಯಃ'' ಇತ್ಯಮರಃ(1-4-36). ಕೈಟಭಾರಿಃ - ''ವಿಶ್ವಂಭರಃ ಕೈಟಭಜಿದ್ವಿಧುಃ ಶ್ರೀವತ್ಸಲಾಂಛನಃ'' ಇತ್ಯಮರಃ (1-1-22). ಆಷಾಢಃ - ''ಆಷಾಢೋ ವ್ರತೀನಾಂ ದಂಡೇ ಮಾಸೇ ಮಲಯಪರ್ವತೇ । ಸ್ತ್ರೀ ಪೂರ್ಣಿಮಾಯಾಂ' ಇತಿ ಮೇದಿನೀ (44-6-7). ಪಾಲಾಶೋ ದಂಡ ಆಷಾಢೋ ವ್ರತೇ (2-7-45). ಪಾಣಿಃ ಮತ್ತು ದೋಃ - ''ದೋರ್ದೋಷಾ ಚ ಭುಜೋ ಬಾಹುಃ ಪಾಣಿರ್ಹಸ್ತಃ ಕರಸ್ತಥಾ,'' ಇತಿ ಧನಂಜಯಃ.

ವ್ಯಾಕರಣ ವಿಚಾರಗಳು- ಶ್ರುತ್ಯುದ್ಗ್ರಾಹಂ - ಶ್ರುತೀ ಉದ್ಗೃಹೀತ್ವಾ. ತ್ವಾ ಎಂಬ ಅರ್ಥದಲ್ಲಿ ಅಮ್ ಪ್ರತ್ಯಯವು ಬರುತ್ತದೆ. ಉಪದಧತ್ - ಉಪ + ಧಾ, ಡುಧಾಞ ಧಾರಣಪೋಷಣಯೋರ್ದಾನೇ ಚ. 3ನೇಯ ಗಣ, ಉಭಯಪದೀ ಶತೃಂತ. ಸಮಿಂಧೇ - ಸಮ್ ಉಪಸರ್ಗಪೂರ್ವಕ ಇಂಧ್ ಧಾತು, ವ.ಕಾಲ. ಪ್ರ.ಪು.ಏ.ವ. ಇಂಧ್ - ದೀಪ್ತೌ ರುಧಾದಿಗಣ(7ನೇಯ ಗಣ) ಆ.ಪದ, ಇಂಧೇ ಇಂಧಾತೇ ಇಂಧತೇ । ಇನ್ತ್ಸೇ ಇಂಧಾತೇ ಇಂಧ್ವೇ । ಇಂಧೇ ಇಂಧ್ವಹೇ ಇಂಧ್ಮಹೇ.

ಇಲ್ಲಿ ಸ್ಮೃತಿಮದ್ ಎಂಬ ಅಲಂಕಾರ ಹಾಗೂ ಮುದ್ರಾ ಎಂಬ ಅಲಂಕಾರ ಇವೆ. ಸ್ಮೃತಿಮದ್ ಅಲಂಕಾರದ ಲಕ್ಷಣವು ಹೀಗಿದೆ. ವರ್ಣೇನ್ಯಸಾಮಾನ್ಯನಿಷ್ಪತ್ತೇ ರುಪಮಾವ್ಯರ್ಥಭಾವತಃ । ಸ್ಮೃತಿಸ್ಮೃತೌ ಸ್ಮರಾಮ್ಯದ್ರೇ ಧೈರ್ಯಂ ದೃಷ್ಟ್ವಾವ ಜಯೀಂದ್ರ ತೇ ॥ (ಅಲಂಕಾರಮಂಜರೀ).

ಪೀಠೀಮಾಢೌಕಮಾನೋ ರವಿರಿವ
ವರಖರ್ಜೂರಗೌರಾಂಶುಕಃ ಪ್ರಾಗ್ ।

Rarest Archiver

ಭೂಭೃನ್ ಮೌಲಿಂ ಸಮೌಕಂ ಮನುಮನುಜಪಿತಾ
ಶ್ರೀಬದರ್ಯಾಂ ಸದಾರ್ಯಃ ||
ವ್ಯಾಸೋ ವಾಸೌ ಸಯೋಗಿಪ್ರಭುಮುನಿ-
ರುಪಚಾರೋತ್ತರಾಂ ದುಸ್ತರಾಂಹ-
ಸ್ತೂಲಾಷಾಢಾನಿಲಾಲಿಂ ವಿರಚಯತಿ
ಹರೇರ್ವ್ಯಾನಮಸ್ಯಾಂ ನಮಸ್ಯಾಂ ||21||

ಅನ್ವಯಾರ್ಥಃ – ಅಸೌ – ಈ, **ಸಃ** – ಪ್ರಸಿದ್ಧರಾಗಿರುವ, **ಯೋಗಿಪ್ರಭುಮುನಿಃ** – ಯೋಗಿಗಳಲ್ಲಿ ಶ್ರೇಷ್ಠರಾದ ಯೋಗೀಂದ್ರತೀರ್ಥರು, **ವರಖರ್ಜೂರಗೌರಾಂಶುಕಃ** – **ವರ** – ಶ್ರೇಷ್ಠವಾದ, **ಖರ್ಜೂರ** – ಖರ್ಜೂರದಂತೆ, **ಗೌರ** – ಅರುಣವರ್ಣದ, **ಅಂಶುಕಃ** – ವಸ್ತ್ರವನ್ನು ಧಾರಣಮಾಡಿರುವವರಾಗಿ, **ರವಿಃ** – ಸೂರ್ಯನು, **ಪ್ರಾಗ್ ಭೂಭೃನ್ ಮೌಲಿಂ ಇವ** – **ಪ್ರಾಕ್** – ಪೂರ್ವದಿಕ್ಕಿನ, **ಭೂಭೃತ್** – ಪರ್ವತದ, **ಮೌಲಿಂ ಇವ** – ಶಿಖರವನ್ನು ಆಶ್ರಯಿಸುವಂತೆ, **ಪೀಠೀಂ** – ಆಸನವನ್ನು, **ಅಧ್ಯೌಕಮಾನಃ** – ಆಶ್ರಯಿಸುವವರಾಗಿ, **ಶ್ರೀಬದರ್ಯಾಂ** – ಶ್ರೀಬದರೀಕ್ಷೇತ್ರದಲ್ಲಿ, **ಸಮೌನಂ** – ಮೌನದಿಂದ ಸಹಿತವಾಗಿ, **ಮನುಂ** – ಮಂತ್ರವನ್ನು, **ಅನುಜಪಿತಾ** – ಕ್ರಮಪ್ರಕಾರವಾಗಿ ಜಪಿಸುತ್ತಿರುವ, **ಸದಾರ್ಯಃ** – **ಸತ್** – ಸಜ್ಜನರಿಗೆ, **ಆರ್ಯಃ** – ಸ್ವಾಮಿಯಾಗಿರುವ, **ವ್ಯಾಸಃ ವಾ** – ಶ್ರೀವೇದವ್ಯಾಸಮುನಿಯಂತೆ, ಮೌನದಿಂದ ಮಂತ್ರಗಳನ್ನು ಕ್ರಮಪ್ರಕಾರವಾಗಿ ಪಠನ ಮಾಡುತ್ತ ಶ್ರೀಯೋಗೀಂದ್ರತೀರ್ಥರು, **ಉಪಚಾರೋತ್ತರಾಂ** – ಉಪಚಾರದಿಂದ ಶ್ರೇಷ್ಠವಾಗಿರುವ, **ದುಸ್ತರಾಂಹಸ್ತೂಲಾಷಾಢಾನಿಲಾಲಿಂ** – **ದುಸ್ತರ** – ದುಸ್ತರವಾಗಿರುವ, **ಅಂಹಃ** – ಪಾಪಗಳೆಂಬ, **ತೂಲ** – ಹತ್ತಿಯ ಹಂಜಿಗೆ, **ಆಷಾಢಾನಿಲಾಲಿಂ** – ಆಷಾಢಮಾಸದ ಗಾಳಿಯ ಪಂಕ್ತಿಯಂತೆ ಇರುವ, **ಹರೇಃ** – ಪರಮಾತ್ಮನ, **ವ್ಯಾನಮಸ್ಯಾಃ** – ಸ್ವಾರಸಿಕವಾದ, **ನಮಸ್ಯಾಂ** – ಪೂಜೆಯನ್ನು, **ವಿರಚಯತಿ** – ಮಾಡುತ್ತಾರೆ.

ತಾತ್ಪರ್ಯಾರ್ಥ : ಶ್ರೀಯೋಗೀಂದ್ರತೀರ್ಥರು ಸನ್ಯಾಸಾಶ್ರಮದ ನಿಮಿತ್ತ ರಕ್ತವರ್ಣದ ವಸ್ತ್ರವನ್ನು ಧಾರಣ ಮಾಡಿ ಉನ್ನತವಾದ ಭದ್ರಾಸನದಲ್ಲಿ ಮಂಡಿಸಿ ಮೌನದಿಂದ ಇದ್ದು ಮಂತ್ರಗಳನ್ನು ಕ್ರಮಪ್ರಕಾರ ಅರ್ಥಪೂರ್ವಕವಾಗಿ ಮನನ ಮಾಡುತ್ತ ಪರಮಾತ್ಮನ ಪೂಜೆಯನ್ನು ಮಾಡುತ್ತಿರುತ್ತಾರೆ. ಪರಮಾತ್ಮನ ಪೂಜೆ

Rarest Archiver

ಯಿಂದ ಎಲ್ಲ ಪಾಪಗಳು, ಆಷಾಢದ ಬೀಸುಗಾಳಿಯಿಂದ ಹತ್ತಿಯ ಹಂಜಿಗಳು ದಿಕ್ಕುಪಾಲಾಗಿ ಹಾರಿಹೋಗುವಂತೆ ಹಾರಿಹೋಗುತ್ತವೆ. ಈ ವಿಷಯವನ್ನು ಆಲಂಕಾರಿಕವಾಗಿ ವರ್ಣಿಸಲಾಗಿದೆ. ಉದಯದ ಸೂರ್ಯನು ತನ್ನ ರಕ್ತವರ್ಣದ ಕಿರಣಗಳೊಡನೆ ಅರುಣೋದಯದ ಕಾಲದಲ್ಲಿ ಪೂರ್ವದಿಕ್ಕಿನ ಪರ್ವತದ ಶಿಖರದ ತುದಿಯಲ್ಲಿ ಮಂಡಿಸುತ್ತಾನೆ. ರಕ್ತವರ್ಣದ ವಸ್ತ್ರಗಳನ್ನು ಧರಿಸುವ ಶ್ರೀಯೋಗೀಂದ್ರತೀರ್ಥರು ಉದಯಕಾಲದ ಸೂರ್ಯನಂತೆ ತೇಜಸ್ವಿಯಾಗಿ ವಿರಾಜಿಸುತ್ತಾರೆ. ಅವರು ಮೌನದಿಂದ ಮಂತ್ರಗಳನ್ನು ಮನನ ಮಾಡುತ್ತ ಧ್ಯಾನಾಸಕ್ತರಾಗಿರುವಾಗ ಶ್ರೀಬದರೀಕ್ಷೇತ್ರದಲ್ಲಿ ಧ್ಯಾನಮಗ್ನರಾಗಿರುವ ಶ್ರೀವೇದವ್ಯಾಸರಂತೆ ಕಂಗೊಳಿಸುತ್ತಾರೆ.

ಈ ಶ್ಲೋಕದಲ್ಲಿ ಅನೇಕ ಸಂಸಾರತಾರಕವಾದ ತತ್ವಗಳು ಪ್ರತಿಪಾದಿತವಾಗಿವೆ. ಸಾಧಕನು ಗಾಯತ್ರಿಮಂತ್ರವನ್ನು ಜಪಿಸುತ್ತ ಪರಮಾತ್ಮನ ಪೂಜೆಯನ್ನು ಆಚರಿಸಬೇಕು. ಗಾಯತ್ರೀ ಮಂತ್ರದ ಧ್ಯಾನ ಶ್ಲೋಕದಲ್ಲಿ ಪ್ರತಿಪಾದಿತವಾದ ಸವಿತೃಮಂಡಲವರ್ತಿಯಾದ ನಾರಾಯಣನ ವರ್ಣನೆಯು ಈ ಶ್ಲೋಕದಲ್ಲಿ ಇದೆ.

ಸೂರ್ಯಮಂಡಲದ ಮಧ್ಯದಲ್ಲಿ ನಾರಾಯಣನು ಕಮಲಾಸನದಲ್ಲಿ ಅಂದರೆ ಯೋಗಾಸನದಲ್ಲಿ ವಿರಾಜಮಾನನಾಗಿದ್ದಾನೆ. ಅವನ ದೇಹವು ಶುದ್ಧವಾದ ಸುವರ್ಣದ ಕಾಂತಿಯಿಂದ ಶೋಭಿಸುತ್ತದೆ. ಅದೇ ಉದಯಿಸುತ್ತಿರುವ ಸೂರ್ಯನ ಅರುಣವರ್ಣದಿಂದ ರಂಜಿಸುತ್ತಿರುವ, ಶಂಖಚಕ್ರಗದಾಪದ್ಮಧಾರಿಯಾಗಿರುವ, ಭುಜಕಿರೀಟ, ಮಕರಕುಂಡಲ, ರತ್ನಹಾರ ಇತ್ಯಾದಿಗಳಿಂದ ಭೂಷಿತವಾಗಿರುವ ನಾರಾಯಣನ ಮೂರ್ತಿಯನ್ನು ಸದಾ ಧ್ಯಾನ ಮಾಡಬೇಕು ಎಂದು ಧ್ಯಾನ ಶ್ಲೋಕದಲ್ಲಿ ಸ್ತುತಿಸಲ್ಪಟ್ಟಿದೆ. ಈ ಧ್ಯಾನಶ್ಲೋಕದ ಅರ್ಥವೇ ಇಲ್ಲಿ ಸಂಗೃಹೀತವಾಗಿದೆ.

ಶ್ರೀವೇದವ್ಯಾಸದೇವರ ಉಲ್ಲೇಖವಿರುವುದರಿಂದ ಸಾಧಕನಿಗೆ ಜ್ಞಾನಮಾರ್ಗವೂ ಅವಶ್ಯವಾಗಿದ್ದು ಶಮದಮಾದಿಗಳಿಂದ ಅಧಿಕಾರ ಪ್ರಾಪ್ತಿಯಾದ ನಂತರ ಶ್ರೀವೇದವ್ಯಾಸರ ಬ್ರಹ್ಮಸೂತ್ರಗಳು, ಭಾಗವತಾದಿ ಪುರಾಣಗಳನ್ನು ಗುರುಮುಖೇನ ಅಧ್ಯಯನ ಮಾಡಬೇಕು. ಜ್ಞಾನಮಾರ್ಗವನ್ನು ಆಶ್ರಯಿಸಿದ ಸಾಧಕನೂ ಕೂಡ ಜಪತಪಾದಿಗಳನ್ನೂ ಹರಿಪೂಜಾದಿಕರ್ಮಗಳನ್ನೂ ಮಾಡುತ್ತಿರಬೇಕು. ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗಗಳು ಪರಸ್ಪರವಾಗಿ ಪೋಷಕವಾಗಿ

Rarest Archiver

ರುವ ಸಾಧನಮಾರ್ಗಗಳಾಗಿವೆ. ಪೂಜಾದಿಕರ್ಮಗಳಿಂದ ಪಾಪರಾಶಿಯನ್ನು ಹೊಡೆದೋಡಿಸಬೇಕು ಎಂದು ಹೇಳಿರುವುದರಿಂದ, ಪ್ರಾರಬ್ಧಕರ್ಮದ ಫಲವನ್ನು ಉಪಭೋಗಿಸಿ ತೀರಿಸಿ ಆಗಾಮಿ ಸಂಚಿತಾದಿಗಳನ್ನು ಜ್ಞಾನಸಂಪಾದನೆಯಿಂದ ಕ್ಷೀಣಿಸಬಹುದೆಂಬ ಪ್ರಮೇಯವು ಪ್ರತಿಪಾದಿತವಾಗಿದೆ. ಇಲ್ಲಿ ''ಪ್ರಾರಬ್ಧಕರ್ಮಣೋನ್ಯಸ್ಯ ಜ್ಞಾನಾದೇವ ಪರಿಕ್ಷಯಃ'' ಎಂಬ ಶ್ರೀಮಧ್ವಾಚಾರ್ಯರ ಅಣುಭಾಷ್ಯದ ಪಂಕ್ತಿಯನ್ನು ಸ್ಮರಣೆಗೆ ತಂದುಕೊಡಲಾಗಿದೆ.

ವಿಗ್ರಹವಾಕ್ಯಗಳು– ವರಖರ್ಜೂರಗೌರಾಂಶುಕಃ - ವರಂ ಚಾಸೌ ಖರ್ಜೂರಂ ಚ, ವರಖರ್ಜೂರವತ್ ಗೌರಂ ಅಂಶುಕಂ ಯಸ್ಯ ಸಃ. **ಪ್ರಾಗ್ಭೂಭೃನ್ಮೌಲಿಂ** - ಪ್ರಾಚಿ(ಪೂರ್ವದಿಶಿ) ಸ್ಥಿತಃ ಭೂಭೃತ್, ತಸ್ಯ ಮೌಲಿಂ ಇವ. **ಉಪಚಾರೋತ್ತರಾಂ** - ಉಪಚಾರೇಣ ಉತ್ತರಾಂ. **ದುಸ್ತರಾಂಹಸ್ತೂಲಾಷಾಢಾನಿಲಾಲಿಂ** - ದುಸ್ತರಾಣಿ ತಾನಿ ಅಂಹಾಸಿ, ತಾನ್ಯೇನ ತೂಲಾನಿ, ತೇಷಾಂ. **ಆಷಾಢಾನಿಲಾಲಿಂ** - ಆಷಾಢೇ ಸ್ಥಿತಾಃ ಅನಿಲಾಃ ತೇಷಾಂ ಅಲಿಃ ತಮ್ ಇವ.

ಕೋಶಗಳು– ಖರ್ಜೂರಂ - ''ಖರ್ಜೂರಂ ರೂಪ್ಯಫಲಯೋಃ ಖರ್ಜೂರಃ ಕೀಟವೃಕ್ಷಯೋಃ'' ಇತಿ ಹೈಮಃ(3-582). ಅಂಶುಕಂ - ''ಅಂಶುಕಂ ಶ್ಲಕ್ಷ್ಣವಸ್ತ್ರೇ ಸ್ಯಾದ್ವಸ್ತ್ರಮಾತ್ರೋತ್ತರೀಯಯೋಃ'' ಇತಿ ಮೇದಿನೀ(4-43). 'ಭೂಭೃತ್ - ಭೂಭೃತ್ ಭೂಮಿಧರೇ ನೃಪೇ' ಇತ್ಯಮರಃ(3-3-61). ಅಂಹಃ - ''ಕಲುಷಂ ವೃಜಿನೈನೋಘಮಂಹೋ ದುರಿತದುಷ್ಕೃತಮ್'' ಇತ್ಯಮರಃ (1-4-26). ನಮಸ್ಯಾ - ''ಪೂಜಾ ನಮಸ್ಯಾ ಅಪಚಿತಿಃ ಸಪರ್ಯಾರ್ಚಾರ್ಹಣಾಃ ಸಮಾಃ'' ಇತ್ಯಮರಃ(2-7-34).

ನಮ್ರಾನ್ಸದ್ವೃಂದಸಮ್ರಾಟ್ಕಮಲರುಚಿಭಿದೋದಗ್ರಪಾದಾಗ್ರಸೇವೋ-
ತ್ತೃಷ್ಣಾನ್ವಿಷ್ಣೋಃ ಪದೋತ್ಥೈಸ್ಸುರುಚಿಭಿರಮೃತೈರುತ್ಕ್ಷಿಪನ್
ಸದ್ವಿಜಾನ್ ಸಃ ।।
ಧಿನ್ವನ್ ಧೂನ್ವನ್ನಮೀಷಾಮಘಮಮಲಕಲಾಜಾಲಸಾಕಲ್ಯಕಲ್ಯಃ ।
ಶ್ರೀಯೋಗೀಂದ್ರವ್ರತೀಂದುಶ್ಶ್ರವಣಮಪಿ ಗತಃ ಕಸ್ಯ
ನ ಸ್ಯಾನ್ಮುದೇಽಸೌ ।।22।।

Rarest Archiver

ಅನ್ವಯಾರ್ಥಃ - **ಸದ್ವೃಂದಸಮ್ರಾಟ್** - ಸದ್ ಸಾತ್ವಿಕವಾದ ಸಾಧುಜನರ, **ವೃಂದ** - ಸಮೂಹದ, **ಸಮ್ರಾಟ್** - ಅಧಿಪತಿಯಾಗಿರುವ, **ಸಃ** - ಆ ಪ್ರಸಿದ್ಧರಾದ, **ಯೋಗೀಂದ್ರವ್ರತೀಂದುಃ** - ಯೋಗೀಂದ್ರಮುನಿಗಳೆಂಬ ಚಂದ್ರನು, **ನಮ್ರಾನ್** - ಭಕ್ತಿವಿನಯಗಳಿಂದ ತಲೆ ಬಾಗಿದ್ದ, **ಕಮಲರುಚಿಭಿದೋದಗ್ರಪಾದಾಗ್ರಸೇವೋತ್ತೃಷ್ಣಾನ್** - **ಕಮಲರುಚಿ** - ಕಮಲಗಳ ಕಾಂತಿಯನ್ನು, **ಭಿದಾ** - ಒಡೆದು ಹಾಕುವುದರಲ್ಲಿ, **ಉದಗ್ರ** - ಪ್ರವೃತ್ತವಾಗಿರುವ ಅಥವಾ ಅತ್ಯಂತವಾಗಿ ಸಮರ್ಥವಾಗಿರುವ, **ಪಾದ** - ಪಾದಗಳ(ಶ್ರೀಯೋಗೀಂದ್ರತೀರ್ಥರ ಚರಣಗಳ), **ಅಗ್ರಸೇವಾ** - ಅಗ್ರಪೂಜೆಯಲ್ಲಿ, **ಉತ್ತೃಷ್ಣಾನ್** - ಬಹು ಉತ್ಕಂಠಿತರಾಗಿರುವ, **ಸದ್ವಿಜಾನ್** - ಯೋಗ್ಯರಾದ ಬ್ರಾಹ್ಮಣರನ್ನು, **ವಿಷ್ಣೋಃ** - ವಿಷ್ಣುವಿನ, **ಪದೋತ್ಥೈಃ** - ಪಾದಗಳಿಂದ ಹೊರಟಿರುವ, **ಸುರುಚಿಭಿಃ** - ಒಳ್ಳೇ ಕಾಂತಿಯುಕ್ತವಾದ ಅಥವಾ ಮನೋಜ್ಞವಾದ, **ಅಮೃತೈಃ** - ಅಮೃತಗಳಿಂದ ಅಥವಾ ಅಮೃತಪ್ರಾಯವಾದ ಕಾಂತಿಗಳಿಂದ, **ಉತ್ಕ್ಷಿಪನ್** - ಚೆನ್ನಾಗಿ ತಿಕ್ಕಿ ತಿಕ್ಕಿ ಲೇಪನ ಮಾಡುತ್ತ ಹಾಗೂ, **ಧಿನ್ವನ್** - ಇದರಿಂದ ಅವರನ್ನು ಸಂತೋಷಪಡಿಸುತ್ತ, **ಅಮೀಷಾಂ** - ಇಂಥ ಬ್ರಾಹ್ಮಣರ, **ಅಘಂ** - ಪಾಪರಾಶಿಯನ್ನು, **ಧುನ್ವನ್** - ಹೊಡೆದೋಡಿಸುತ್ತ, **ಅಮಲಕಲಾಜಾಲಸಾಕಲ್ಯಕಲ್ಯಃ** - **ಅಮಲ** ಪರಿಶುದ್ಧವಾದ, **ಕಲಾಜಾಲ** - ಕಲೆಗಳ(ಲಕ್ಷಣಗಳ), **ಜಾಲ** - ಸಮೂಹದ, **ಸಾಕಲ್ಯ** - ಪೂರ್ಣತೆಯಿಂದ ಕೂಡಿಕೊಂಡು, **ಕಲ್ಯಃ** - ಶುಭಪ್ರದನಾಗಿ, **ಶ್ರವಣಂ ಅಪಿ** - ನಮ್ಮ ಕರ್ಣಗಳಲ್ಲಿಯಾದರೂ, **ಗತಃ** - ಸೇರಿದವರಾದ, ನಮ್ಮ ಶ್ರವಣಕ್ಕೆ ವಿಷಯವಾದಂಥ (ಅರ್ಥಾತ್ ನಾವು ಅವರ ಗುಣರಾಶಿಯನ್ನು ಕೇಳಿದಾಗ), **ಅಸೌ** - ಈ ಯೋಗೀಂದ್ರತೀರ್ಥರು, **ಕಸ್ಯ ಮುದೇ** - ಯಾರ ಸಂತೋಷಕ್ಕೆ ಕಾರಣರು, **ನ ಸ್ಯಾತ್** - ಆಗಲಿಕ್ಕಿಲ್ಲ ? ಎಲ್ಲರಿಗೂ ಅವರ ಮಹಿಮೆಯನ್ನು ಕೇಳಿದಾಗ ಸಂತೋಷವುಂಟಾಗುತ್ತದೆ ಎಂದು ತಾತ್ಪರ್ಯ.

ಈ ಶ್ಲೋಕದಲ್ಲಿಯ ವಿಶೇಷಣಗಳನ್ನು ಚಂದ್ರನಿಗೆ ಅನ್ವಯಿಸುವಂತೆಯೂ ಅರ್ಥವಿಸಬಹುದಾಗಿದೆ.

ಸದ್ವೃಂದಸಮ್ರಾಟ್ -ಸತ್ - ನಕ್ಷತ್ರಗಳ, **ವೃಂದ** - ಸಮೂಹಕ್ಕೆ, **ಸಮ್ರಾಟ್** - ಅಧಿಪತಿಯಾಗಿರುವ, **ಅಮಲಕಲಾಜಾಲಸಾಕಲ್ಯಕಲ್ಯಃ** - ಶುದ್ಧವಾದ ಕಲೆಗಳ (ಕಾಂತಿಯ ಲಕ್ಷಣಗಳ) ಸಮೂಹದ ಪರಿಪೂರ್ಣತೆಯಿಂದ ಅಭಿನಂದನೀಯ

Rarest Archiver

ನಾದ, **ಇಂದುಃ** - ಚಂದ್ರನು, **ಕಮಲರುಚಿಭಿದೋದಗ್ರಪಾದಾಗ್ರಸೇವೋತ್ಕೃಷ್ಣಾನ್** - ಕಮಲದ ಕಾಂತಿಯನ್ನು ಹಿಂದೆ ಹಾಕುವುದರಲ್ಲಿ ಪ್ರಸಿದ್ಧವಾದ ತನ್ನ (ಕಾಂತಿಗಳನ್ನು) ಕಿರಣಗಳನ್ನು ಪೂರ್ಣವಾಗಿ ಸೇವನೆ ಮಾಡುವುದರಲ್ಲಿ ಉತ್ಕಂಠಿತವಾದ, **ಸದ್ವಿಜಾನ್** - ಸುಂದರವಾದ ಚಕೋರ ಪಕ್ಷಿಗಳನ್ನು, **ವಿಷ್ಣೋಃ ಪದೋತ್ಥೈಃ** - ಆಕಾಶದಿಂದ ಹೊರಸೂಸಿದ, **ಸುರುಚಿಭಿಃ ಅಮೃತೈಃ** - ಅಮೃತಪ್ರಾಯವಾದ ಶುಭ್ರವಾದ ಕಾಂತಿಗಳಿಂದ, **ಉತ್ಪಿಷನ್** - ಮೈತುಂಬ ಸವರುತ್ತ, **ಧಿನ್ವನ್** - ಅವುಗಳನ್ನು ಸಂತೋಷಬಡಿಸುತ್ತ, **ಅಮೀಷಾಂ** - ಅವುಗಳ, **ಅಘಂ** - ನ್ಯೂನತೆಯನ್ನು ಅಥವಾ ದುಃಖವನ್ನು **ಧುನ್ವನ್** - ಹೋಗಲಾಡಿಸುತ್ತ, **ಶ್ರವಣಂ ಅಪಿ ಗತಃ** - ಶ್ರವಣೇಂದ್ರಿಯಕ್ಕೆ ವಿಷಯನಾದರೂ, **ಕಸ್ಯ ಮುದೇ ನ ಸ್ಯಾತ್** - ಯಾರ ಸಂತೋಷಕ್ಕೆ ಕಾರಣನಾಗುವುದಿಲ್ಲ ? ಎಲ್ಲರಿಗೂ ಸಂತೋಷವನ್ನುಂಟು ಮಾಡುತ್ತಾನೆ.

ತಾತ್ಪರ್ಯಾರ್ಥ : ಈ ಶ್ಲೋಕದಲ್ಲಿ ಶ್ರವಣ ಮನನ ನಿಧಿಧ್ಯಾಸನ ಇತ್ಯಾದಿ ಸಾಧನಕಲಾಪಗಳ ಹಾಗೂ ಶ್ರವಣಂ, ಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ ಎಂಬ ನವವಿಧ ಭಕ್ತಿಯ ಉಲ್ಲೇಖವು ಸೂಚಿತವಾಗಿದೆ. ಸಜ್ಜನರ ಸಂಗ, ಸಜ್ಜನರ ಪಾದಸೇವೆ, ಭಗವದ್ಭಕ್ತರ ಪಾದೋದಕದ ಸೇವನೆ ಇತ್ಯಾದಿಗಳಿಂದ ಸಕಲ ಪಾಪರಾಶಿಯು ನಷ್ಟವಾಗಿ ಇಂದ್ರಿಯ ದೋಷಗಳೆಲ್ಲ ದೂರವಾಗಿ ವಿಷ್ಣುವಿನ ಅಮೃತಪ್ರಾಯವಾದ ಅನುಗ್ರಹದಿಂದ ಶಾಶ್ವತವಾದ ಆನಂದವು ಅವಶ್ಯವಾಗಿ ದೊರೆಯುವುದು ಎಂಬ ಪ್ರಮೇಯವು ಇಲ್ಲಿ ಪ್ರತಿಪಾದಿತವಾಗಿದೆ.

ಈ ಶ್ಲೋಕದಲ್ಲಿ ಶ್ರವಣ ನಕ್ಷತ್ರದ ಉಲ್ಲೇಖವಿರುವುದರಿಂದ ಮುದ್ರಾಲಂಕಾರವಿದೆ.

ವಿಗ್ರಹವಾಕ್ಯಗಳು– ಸದ್ವೃಂದಸಮ್ರಾಟ್ - ಸತಾಂ ವೃಂದಂ ತಸ್ಯ ಸಮ್ರಾಟ್, **ಕಮಲರುಚಿಭಿದೋದಗ್ರಪಾದಾಗ್ರಸೇವೋತ್ಕೃಷ್ಣಾನ್** - ಕಮಲಸ್ಯ ರುಚಿಃ ತಸ್ಯಾಃ ಭಿದಾ, ಕಮಲರುಚಿಭಿದಾಯಾಂ ಉದಗ್ರೌ ಚ ತೌ ಪಾದೌ ಚ, ತಯೋಃ ಅಗ್ರಸೇವಾಯಾಂ ಉತ್ಕೃಷ್ಣಾನ್. **ಅಮಲಕಲಾಜಾಲಸಾಕಲ್ಯಕಲ್ಯಃ** - ಅಮಲಾಶ್ಚ ತಾಃ

Rarest Archiver

ಕಲಾಶ್ಚ, ಅಮಲಕಲಾನಾಂ ಜಾಲಂ, ತಸ್ಯ ಸಾಕಲ್ಯಂ ತೇನ ಕಲ್ಯಃ. **ಶ್ರೀಯೋಗೀಂದ್ರವ್ರತೀಂದುಃ** - ಶ್ರಿಯಾ ಯುತಃ ಯೋಗೀಂದ್ರಃ, ಶ್ರೀಯೋಗೀಂದ್ರ ಇತಿ ವ್ರತೀ ಸ ಏವ ಇಂದುಃ.

ಕೋಶಗಳು- ಸತ್ - ''ಸನ್ಸಾಧೌ ದೀರಶಸ್ತಯೋಃ । ಮಾನ್ಯೇ ಸತ್ಯೇ ವಿದ್ಯಮಾನೇ ತ್ರಿಷು ಸಾಧ್ವ್ಯಮಯೋಃ ಸ್ತ್ರಿಯಾಮ್'' ಇತಿ ಮೇದಿನೀ(59/68-69). ಪಾದಃ - ''ಪಾದೋ ಮೂಲೋಸ್ರತುರ್ಯಾಂಶಾಂಘ್ರಿಷು ಪ್ರತ್ಯಂತಪರ್ವತೇ '' ಇತಿ ಹೈಮಃ (2-223). ಅಘಂ - ''ಅಘಂ ದುಃಖೇ ವ್ಯಸನೈನಸೋಃ'' ಇತಿ ಹೈಮಃ(2-53). ಕಲ್ಯಂ - ''ಕಲ್ಯಂ ಪ್ರಭಾತೇ ಕ್ಲೀಬಂ ಸ್ಯಾತ್ ಕಲ್ಯೋ ವಾಕ್‌ಶ್ರುತಿವರ್ಜಿತೇ । ಸಜ್ಜನೀರೋಗದಕ್ಷೇಷು ಕಲ್ಯಾಣವಚನೇಪಿ ಚ । ಉಪಾಯವಚನೇಪಿ ಸ್ಯಾತ್ ತ್ರಿಷು ಮದ್ಯೇ ತು ಯೋಷಿತಿ ।।'' ಇತಿ ಮೇದಿನೀ(113/8-9). ದ್ವಿಜ - ''ದ್ವಿಜಃ ಸ್ಯಾದ್ಬ್ರಾಹ್ಮಣಕ್ಷತ್ರವೈಶ್ಯದಂತಾಂಡಜೇಷು ನಾ । ದ್ವಿಜಾ ಭಾರ್ಯಾಹರೇಣೌ ಚ'' ಇತಿ ಮೇದಿನೀ(30/9-10).

ವ್ಯಾಕರಣ ವಿಚಾರಗಳು- ಉತ್ಪಿಷನ್ - ಉತ್ + ಪಿಷ್ - ಸಂಚೂರ್ಣನೇ ಪಿನಷ್ಟಿ, 7ನೇಯ ಗಣ ಪ.ಪ. ಶತ್ರಂತರೂಪ. ಧಿನ್ವನ್ - ಧಿನ್ವ ಪ್ರೀಣನೇ 1ನೇಯ ಗಣ ಪ.ಪ. ಧಿನೋತಿ, ಶತ್ರಂತರೂಪ. ಧೂನ್ವನ್ - ಧೂ ಕಂಪನೇ 5ನೇಯ ಗಣ ಹಾಗೂ 9ನೇಯ ಗಣ ಉ.ಪ. ಧುನೋತಿ ಧುನುತೇ; ಧುನಾತಿ ಧುನೀತೇ, ಶತ್ರಂತರೂಪ.

ಆನಂದಾವಂಧ್ಯಸಂಧ್ಯಾನಟನಪಟುಜಟಾಟೀರಕೋಟೀರಧಾಟೀ- ।
ರಿಂಖದ್ಗಂಗಾತರಂಗಾವಲಿಜವಪಟುತಾಖಂಡನೋದ್ದಂಡವೇಗೈಃ ।।
ಸ್ವೈರಸ್ವೈರೋಕ್ತಿಗುಂಭೈಃ ಪ್ರವಚನಕೃತನಿರ್ಬಾಧಸದ್ಬೋಧನಿಷ್ಠಾನ್ ।
ಭ್ರಾತ್ರಾನಚ್ಛೋದ್ಯ ಯೋಗಿಪ್ರಭುಮುನಿರತುಲೋ
ಭಾತಿ ಸಾಭಾತಿರೇಕಃ ।।23।।

ಅನ್ವಯಾರ್ಥಃ - ಸಾಭಾತಿರೇಕಃ - ಆಭಾ - ಪ್ರತಿಭೆಯ, ಅತಿರೇಕ - ಅತಿಶಯದಿಂದ, ಸಃ - ಸಹಿತರಾಗಿರುವ, ಅತುಲಃ - ಅಸದೃಶರಾಗಿರುವ, **ಯೋಗಿಪ್ರ**

Rarest Archiver

ಭುಮುನಿಃ - ಯೋಗೀಂದ್ರಮುನಿಗಳು, **ಆನಂದಾವಂಧ್ಯಸಂಧ್ಯಾನಟನಪಟುಜಟಾಟೀರಕೋಟೀರಧಾಟೀ ರಿಂಖದ್ಗಂಗಾತರಂಗಾವಲಿಜವಪಟುತಾಖಂಡನೋದ್ದಂಡವೇಗೈಃ** - **ಆನಂದ** ಆನಂದದಿಂದ, **ಅವಂಧ್ಯ** - ಅಮೋಘವಾಗಿರುವ, **ಸಂಧ್ಯಾನಟನಂ** - ಸಾಯಂಕಾಲದಲ್ಲಿಯ ತಾಂಡವ ನಾಟ್ಯದಲ್ಲಿ, **ಪಟು** - ಅತಿಕುಶಲನಾದ, **ಜಟಾಟೀರ** - ಈಶ್ವರನ, **ಕೋಟೀರ** - ಜಟಾಸಮೂಹದಲ್ಲಿ, **ಧಾಟೀ** - ಜೋರಾಗಿ ಓಡುತ್ತ, ಅಂದರೆ ಪ್ರವಹಿಸುತ್ತ, **ರಿಂಖತ್** - ಹೋಗುತ್ತಿರುವ, **ಗಂಗಾ** - ಗಂಗಾನದಿಯ, **ತರಂಗಾವಲಿ** - ತರಂಗಗಳ ಪಂಕ್ತಿಯ, **ಜವ** - ವೇಗದ, **ಪಟುತಾ** - ನಿಪುಣತೆಯನ್ನು, **ಖಂಡನ** - ಖಂಡಿಸುವುದರಲ್ಲಿ ಅಂದರೆ ಅದನ್ನು ಹಿಂದೆ ಹಾಕುವುದರಲ್ಲಿ, **ಉದ್ದಂಡ** - ಸಮರ್ಥವಾದ, ಆತುರವಾಗಿರುವ, **ವೇಗ** - ವೇಗವನ್ನು ಅಂದರೆ ಗತಿಯನ್ನು ಪಡೆದಿರುವ, **ಸ್ವೈಃ** - ತಮ್ಮ, **ಅಸ್ವೈರೋಕ್ತಿಗುಂಭೈಃ** - **ಅಸ್ವೈರ** - ಶಾಸ್ತ್ರಮರ್ಯಾದೆಗೆ ದೂರವಾಗದಿರುವ ಅಂದರೆ ಶಾಸ್ತ್ರಬದ್ಧವಾಗಿರುವ, **ಉಕ್ತಿ** - ಪ್ರಮೇಯ ವಿಚಾರಗಳನ್ನು ಪ್ರತಿಪಾದಿಸುವ ಉಕ್ತಿಗಳ, **ಗುಂಭೈಃ** - ಸಮೂಹಗಳಿಂದ ಮಾಡಲ್ಪಡುವ, **ಪ್ರವಚನಕೃತನಿರ್ಬಾಧಸದ್ಬೋಧನಿಷ್ಠಾನ್** - **ಪ್ರವಚನ** - ಶಾಸ್ತ್ರಗ್ರಂಥಗಳ ಪ್ರವಚನದಲ್ಲಿ, **ಕೃತ** - ಉಪದೇಶ ಮಾಡಲ್ಪಟ್ಟಿರುವ, **ನಿರ್ಬಾಧ** - ಸಂಶಯ ವಿಪರ್ಯಾಸ ಇತ್ಯಾದಿ ಯಾವ ಬಾಧೆಗಳಿಗೂ ಒಳಗಾಗದ, **ಸದ್ಬೋಧ** - ಉತ್ತಮವಾದ ಜ್ಞಾನದಲ್ಲಿ, **ನಿಷ್ಠಾನ್** - ಪರಿಣತಿಯನ್ನು ಶ್ರದ್ಧೆಯನ್ನು ಪಡೆದಿರುವ, **ಛಾತ್ರಾನ್** - ಶಿಷ್ಯರುಗಳ(ನ್ನು), **ಅಚ್ಛೋದ್ಯ** - ಅಭಿಮುಖದಲ್ಲಿ ಉಪದೇಶ ಮಾಡುತ್ತ, **ಭಾತಿ** - ಕಾಂತಿಯಿಂದ ಚೆನ್ನಾಗಿ ಶೋಭಿಸುತ್ತಾರೆ.

ತಾತ್ಪರ್ಯಾರ್ಥ : ಈ ಶ್ಲೋಕದಲ್ಲಿ ಶ್ರೀಯೋಗೀಂದ್ರತೀರ್ಥರ ಪ್ರವಚನ ಚಾತುರ್ಯವನ್ನು ಹಾಗೂ ಅವರ ಶಿಷ್ಯಪರಿವಾರದ ಗರಿಮೆಯನ್ನು ವರ್ಣಿಸಲಾಗಿದೆ. ಪ್ರವಚನದ ವಾಕ್‌ಪ್ರವಾಹವನ್ನು ಗಂಗೆಯ ರಭಸದ ಪ್ರವಾಹಕ್ಕೆ ಹೋಲಿಸಲಾಗಿದೆ. ಈಶ್ವರನು ಸಂಧ್ಯಾಕಾಲದಲ್ಲಿ ಆನಂದಾತಿರೇಕದಿಂದ ತಾಲಬದ್ಧವಾಗಿ ನರ್ತನ ಮಾಡುತ್ತಿರುವಾಗ ಅವನ ಜಟೆಯು ಅತ್ತ ಇತ್ತ ಅಪ್ಪಳಿಸುತ್ತಿರುತ್ತದೆ. ಆ ಜಟೆಯ ದಟ್ಟವಾದ ಕೂದಲುಗಳ ಮಧ್ಯದಲ್ಲಿ ಪ್ರವಹಿಸುತ್ತಿರುವ ಗಂಗಾ ಪ್ರವಾಹವು ರಭಸದಿಂದ ಭೋರ್ಗರೆಯುತ್ತ ಧಾವಿಸುತ್ತಿರುತ್ತದೆ. ಸಾಮಾನ್ಯವಾಗಿಯೇ ಗಂಗಾಪ್ರವಾಹದ ವೇಗದಲ್ಲಿ ರಭಸವಿರುತ್ತದೆ. ನರ್ತನ ಕಾಲದಲ್ಲಿ ಜಟೆಗಳ ಮಧ್ಯದಲ್ಲಿ ಪ್ರವಹಿ

Rarest Archiver

ಸುವ ಗಂಗೆಯ ಉಲ್ಲೇಖದಿಂದ ಪ್ರವಾಹದ ರಭಸದ ಒಂದು ವೈಶಿಷ್ಟ್ಯವನ್ನು ಸೂಚಿಸಲಾಗಿದೆ. ಪಾಣಿನಿಯ ವ್ಯಾಕರಣ ಶಾಸ್ತ್ರಕ್ಕೆ ಮೂಲಾಧಾರವಾದ 'ಅಇಉಣ್ ಋಲೃಕ್', ಇತ್ಯಾದಿ ಸೂತ್ರಗಳು ಮಹೇಶ್ವರನ ಡಮರುವಿನಿಂದ ತಾಂಡವನಟನದ ಸಮಯದಲ್ಲಿ ಹೊರಟ ಶಬ್ದಗಳು ಎಂದು ಪ್ರಸಿದ್ಧವಾಗಿವೆ. ಇದರಿಂದ ಶ್ರೀಯೋಗೀಂದ್ರತೀರ್ಥರ ಪ್ರವಚನದಲ್ಲಿಯ ವಾಕ್ ಸರಣಿಯು ವ್ಯಾಕರಣಶಾಸ್ತ್ರದ ಪ್ರಮಾಣಗಳಿಂದ ಬದ್ಧವಾಗಿ ಪ್ರಗಲ್ಭವಾಗಿತ್ತು ಎಂದೂ ಸೂಚಿತವಾಗುತ್ತದೆ. ಈ ವಿಷಯದಲ್ಲಿ ಶ್ರೀರಾಘವೇಂದ್ರತೀರ್ಥರು ಪೂರ್ವಾಶ್ರಮದಲ್ಲಿಯೇ ''ಮಹಾಭಾಷ್ಯವೆಂಕಣ್ಣಭಟ್ಟ'' ಎಂಬ ಬಿರುದನ್ನು ಪಡೆದು ವ್ಯಾಕರಣಶಾಸ್ತ್ರದಲ್ಲಿ ಮಹತ್ಪರಿಣತಿಯನ್ನು ಪಡೆದವರಾಗಿದ್ದರು ಹಾಗೂ ಅವರ ಗ್ರಂಥಗಳಲ್ಲಿ ವ್ಯಾಕರಣ ವಿಚಾರಗಳು ಬಹಳ ಪ್ರಗಲ್ಭವಾದ ರೀತಿಯಲ್ಲಿ ಚರ್ಚಿಸಲ್ಪಡುತ್ತವೆ ಎಂಬುದನ್ನು ಗಮನಿಸಬೇಕು. ಶ್ರೀರಾಘವೇಂದ್ರಸ್ವಾಮಿಗಳಿಗೆ ಸಾಕ್ಷಾತ್ ಶಿಷ್ಯರಾದ ಶ್ರೀಯೋಗೀಂದ್ರತೀರ್ಥರೂ ವ್ಯಾಕರಣ ಶಾಸ್ತ್ರದಲ್ಲಿ ಮಹಾಪಂಡಿತರಾಗಿದ್ದರು ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ. ಇವರ ಪ್ರವಚನದಲ್ಲಿ ಮೋಕ್ಷೋಪಯೋಗಿಯಾಗಿ ಜ್ಞಾನದ ಉಪದೇಶವಿದೆ. ಆನಂದಪ್ರದವಾದ ಜ್ಞಾನದ ಬೋಧನೆಯನ್ನು ಯೋಗಿಗಳಾದ ಗುರುಗಳ ಮುಖದಿಂದ ಪಡೆಯಬೇಕು ಎಂಬ ಪ್ರಮೇಯವು ಇಲ್ಲಿ ಸೂಚಿತವಾಗಿದೆ. ಶ್ರದ್ಧೆಯಿಂದ ಶ್ರವಣಕ್ಕೆ ಸನ್ನದ್ಧರಾಗಿರುವ ಶಿಷ್ಯರು, ನಿಶ್ಚಿತ ಜ್ಞಾನಿಗಳಾದ ಗುರುಗಳ ಸನ್ನಿಧಾನದಲ್ಲಿ, ''ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ'' ಎಂದು ಶರಣಾಗತರಾಗಿ ಶ್ರದ್ಧೆಯಿಂದ ಜ್ಞಾನೋಪದೇಶವನ್ನು ಪಡೆಯಬೇಕು. ಇದರಿಂದಲೇನೇ ಮುಕುಂದನಲ್ಲಿ ಭಕ್ತಿಯುಂಟಾಗಿ ನಂತರ ಅಪರೋಕ್ಷ ಜ್ಞಾನ, ಭಗತ್ಪ್ರಸಾದ, ಅಮೋಘವಾದ ಆನಂದ ಎಂಬ ಫಲಗಳು ದೊರೆಯುವವು ಎಂಬ ಪ್ರಮೇಯವು ಇಲ್ಲಿ ಪ್ರತಿಪಾದಿತವಾಗಿದೆ.

ವಿಗ್ರಹವಾಕ್ಯಗಳು- ಆನಂದಾವಂಧ್ಯಸಂಧ್ಯಾನಟನಪಟುಜಟಾಟೀರಕೋಟೀರಧಾಟೀರಿಂಖದ್ಗಂಗಾತರಂಗಾವಲಿಜವಪಟುತಾಖಂಡನೋದ್ದಂಡವೇಗೈಃ - ಆನಂದೇನ ಅವಂಧ್ಯಂ ಸಂಧ್ಯಾಯಾಂ ನಟನಂ, ಆನಂದಾವಂಧ್ಯಂ ಚ ತತ್ ಸಂಧ್ಯಾನಟನಂ ಆನಂದಾವಂಧ್ಯಸಂಧ್ಯಾನಟನೇ ಪಟುಶ್ಚಾಸೌ ಜಟಾಟೀರಶ್ಚ, ತಸ್ಯ ಕೋಟೀರಂ ತಸ್ಮಿನ್ ಧಾಟೀ, ತಯಾ ರಿಂಖತೀ ಚಾಸೌ ಗಂಗಾ ಚ, ತರಂಗಾನಾಂ ಆವಲಿಃ

Rarest Archiver

ತಾದೃಶಗಂಗಾಯಾಃ ತರಂಗಾವಲಿಃ ಗಂಗಾತರಂಗಾವಲೇಃ ಜವಃ ತಸರ್ಯ ಪಟುತಾ, ಗಂಗಾತರಂಗಾವಲಿಜವಪಟುತಾಯಾಃ ಖಂಡನಂ ತಸ್ಮಿನ್, ಉದ್ದಂಡಃ ವೇಗಃ ಏಷಾಂ ತೈಃ. **ಪ್ರವಚನಕೃತನಿರ್ಬಾಧಸದ್ಬೋಧನಿಷ್ಠಾನ್**, ನಿರ್ಬಾಧಶ್ಚಾಸೌ ಸದ್ಬೋಧಶ್ಚ ನಿರ್ಬಾಧಸದ್ಬೋಧಃ, ಪ್ರವಚನೇ ಕೃತಶ್ಚಾಸೌ ನಿರ್ಬಾಧಸದ್ಬೋಧಶ್ಚ, ತಸ್ಮಿನ್ ನಿಷ್ಠಾಃ ತಾನ್.

ಕೋಶಗಳು–ಜಟಾಟೀರಃ - ಜಟಾಂ ಅಟತಿ, ಅಟ - ಗತೌ. ಜಟ + ಬಾಹುಲಕಾದೀರನ್, ''ಜಟಾಮಾಲಾ ಶಿಖಾಲೇಖಾ ಧ್ವಜೋ ದಂಡೋ ರಥೋ ಘನಃ । ಅಷ್ಟೌ ವಿಕೃತಯಃ ಪ್ರೋಕ್ತಾಃ ಕ್ರಮಪೂರ್ವಂ ಮಹರ್ಷಿಭಿಃ''. ಕೋಟೀರಂ - ''ಮೌಲಿಃ ಕೋಟೀರ ಉಷ್ಣೀಷಂ ಕಿರೀಟಂ ಮುಕುಟೋಸ್ತ್ರಿಯಾಂ'' ಇತಿ ವೈಜಯಂತೀ(135). ಗುಂಭಃ - ''ಶ್ರಂಥನಂ ಗ್ರಂಥನಂ ಗುಂಭಃ ಸಂದರ್ಭೋ ರಚನಾ ನ ನಾ । ಅಮರಕೋಶದ ಮೇಲೆ ಮಲ್ಲಿನಾಥನ ವ್ಯಾಖ್ಯೆ ''ಪಾರಿಜಾತ''. ಗುಂಫಃ - ''ಗುಂಫಃ ಸ್ಯಾದ್ ಗುಂಫನೇ ಬಾಹೋರಲಂಕಾರೇ ಚ ಕೀರ್ತಿತಃ'' ಇತ್ಯಮರಃ. ಛಾತ್ರಾಃ - ''ಛಾತ್ರಾಂತೇವಾಸಿನೌ ಶಿಷ್ಯೇ ಶೈಕ್ಷಾಃ ಪ್ರಾಥಮಕಲ್ಪಿಕಾಃ'' ಇತ್ಯಮರಃ (2-7-11).

ವ್ಯಾಕರಣ ವಿಚಾರಗಳು– ರಿಂಖತ್ - ರಿಂಖ - ಗತೌ. ರಿಂಖತಿ ಪ್ರಥಮ ಗಣ ಪ.ಪದ ಶತೃಂತ, ಅಚ್ಛೋದ್ಯ - ಅವ್ಯಯ - ಅಚ್ಛಂ ಅಭಿಮುಖಂ ಉದಿತ್ವಾ, ಅಚ್ಛ + ವದ (ವ್ಯಕ್ತಾಯಾಂ ವಾಚಿ) ಕ್ತ್ವಾ, ಲ್ಯಪ್ ಪ್ರತ್ಯಯಾಂತ ಅವ್ಯಯ. ಭಾತಿ -ಭಾ - ದೀಪ್ತೌ 2ನೇಯ ಗಣ ಪರಸ್ಮೈಪದ ಭಾತಿ. ವ. ಕಾಲ. ಪ್ರ.ಪು. ಏ.ವ.

ಇಲ್ಲಿ ಉಪಮಾಲಂಕಾರ ಹಾಗೂ ಧನಿಷ್ಠಾ ಶಬ್ದದಿಂದ ಧನಿಷ್ಠಾ ನಕ್ಷತ್ರವನ್ನು ಸೂಚಿಸಿರುವುದರಿಂದ ಮುದ್ರಾ ಎಂಬ ಅಲಂಕಾರವೂ ಇದೆ.

ಮಾಯಾವಾದಾದಿನಾನಾಕುಮತಿಬುಧಮತಧ್ವಾಂತವಿಧ್ವಂಸಭಾಸ್ವನ್ ।
ಮಧ್ವೋಕ್ತಂ ಜ್ಯಾಯುರಾಯುಷ್ಕರಮುಪದಿಶತೇ
ತತ್ವಬೋಧಸ್ಯ ಸಾಧೋಃ ।।
ಸಂತಸ್ತಸ್ಯಾಂತಿಕಂ ವೋ ವಿಶತಿ ಭಿಷಗಿವ ದ್ವೇಷ್ಯಸಂತಾನಹಂತಾ ।

Rarest Archiver

ಯೋಗೀಂದ್ರೋ ಅಯಂ ಗುರುಸ್ಸನ್ನಿತಿ ಪರಿರಮತೇ
ಸ್ವೈರಿಸತ್ಸೂರಿವೃಂದಮ್ ।।24।।

ಅನ್ವಯಾರ್ಥಃ – ಹೇ ಸಂತಃ – ಭೋ ಸಜ್ಜನರೇ, **ಅಯಂ** – ಈ ಪ್ರಸಿದ್ಧರಾದ, **ಯೋಗೀಂದ್ರಃ** – ಶ್ರೀಯೋಗೀಂದ್ರ ಮುನಿಗಳು, **ಗುರುಃ ಸನ್** – ತತ್ತ್ವೋಪದೇಶಕರಾದ ಗುರುವಾಗಿದ್ದುಕೊಂಡು, **ಮಾಯಾವಾದಾದಿನಾನಾಕುಮತಿಬುಧಮತಧ್ವಾಂತವಿಧ್ವಂಸಭಾಸ್ವನ್ಮಧ್ವೋಕ್ತಂ** – **ಮಾಯಾವಾದಾದಿ** – ಮಾಯಾವಾದವೇ ಇತ್ಯಾದಿ, **ನಾನಾಕುಮತಿಬುಧಮತ** – **ನಾನಾ** – ನಾನಾ ವಿಧವಾದ, **ಕುಮತಿ** – ದುಷ್ಟಬುದ್ಧಿಯುಳ್ಳ, **ಬುಧ** – ಪಂಡಿತರ, **ಮತ** – ಮತವೆಂಬ, **ಧ್ವಾಂತ** – ಕಗ್ಗತ್ತಲೆಯ, **ವಿಧ್ವಂಸ** – ನಾಶ ಮಾಡುವುದರಲ್ಲಿ, **ಭಾಸ್ವನ್** – ಸೂರ್ಯನಂತಿರುವ, **ಮಧ್ವ** – ಮಧ್ವಾಚಾರ್ಯರಿಂದ, **ಉಕ್ತಂ** – ಪ್ರತಿಪಾದಿಸಲ್ಪಟ್ಟಿರುವ ಶಾಸ್ತ್ರವನ್ನು, **ಸಾಧೋಃ** – ಮೋಕ್ಷಪ್ರದವಾಗಿರುವುದರಿಂದ ಸಮೀಚೀನವಾಗಿರುವ, **ತತ್ವಬೋಧಸ್ಯ** – ತತ್ವಜ್ಞಾನಕ್ಕೆ, **ಆಯುಷ್ಕರಂ** – ಪ್ರವೃದ್ಧಿಯನ್ನು ತಂದು ಕೊಡುವ, **ಜ್ಯಾಯುಃ** – ಔಷಧವನ್ನು, **ಭಿಷಗ್ ಇವ** – ವೈದ್ಯನು ಔಷಧವನ್ನು ಕೊಡುವಂತೆ, **ದ್ವೇಷ್ಯಸಂತಾನಹಂತಾ** – **ದ್ವೇಷ್ಯಸಂತಾನ** – ಅಹಂಕಾರಿಗಳಾದ ದುಷ್ಟಜನರ ಪರಂಪರೆಯ, **ಹಂತಾ ಸನ್** – ನಾಶಕರಾಗಿ, **ವಃ** – ನಿಮಗೆಲ್ಲ, **ಉಪದಿಶತೇ** – ಉಪದೇಶ ಮಾಡುತ್ತಾರೆ, **ಸತ್ಸೂರಿವೃಂದಂ** – **ಸತ್** – ಸಾತ್ವಿಕವಾದ, **ಸೂರಿ** – ಪಂಡಿತರ, **ವೃಂದಂ** – ಸಮೂಹವು, **ತಸ್ಯ ಅಂತಿಕಂ** – ಶ್ರೀಯೋಗೀಂದ್ರರ ಸಮೀಪದಲ್ಲಿ, **ವಿಶತಿ** – ಇರುತ್ತದೆ ಎಂದು ಅಂದರೆ ಸಮೀಪದಲ್ಲಿ ಇರುವ ಕಾರಣದಿಂದಾಗಿ, **ಸ್ವೈರಿ** – ಸ್ವಚ್ಛಂದವಾಗಿ ಅತಿಶಯವಾಗಿ, **ಪರಿರಮತೇ** – ಸಂತೋಷಪಡುತ್ತದೆ.

ತಾತ್ಪರ್ಯಾರ್ಥ : ವೈದ್ಯನು ರೋಗಿಗೆ ಒಳ್ಳೆಯ ಆರೋಗ್ಯವು ಉಂಟಾಗಿ ದೇಹಪುಷ್ಟಿಯು ಬರುವ ರೀತಿಯಲ್ಲಿ ಔಷಧವನ್ನು ಕೊಡುತ್ತಾನೆ. ಅಜ್ಞಾನ ವಿಪರೀತ ಜ್ಞಾನಗಳೆಂಬ ರೋಗದಿಂದ ಗ್ರಸ್ತರಾದ ಸಜ್ಜನರಿಗೆ ನಿಜವಾದ ತತ್ವಜ್ಞಾನದ ಉಪದೇಶವೆಂಬ ಔಷಧವು ಅವಶ್ಯವಾಗಿದೆ. ಇಂಥ ಔಷಧವನ್ನು ಗುರುಗಳಾದ ಶ್ರೀಯೋಗೀಂದ್ರತೀರ್ಥರು ಶ್ರೀಮಧ್ವಾಚಾರ್ಯರ ಸಿದ್ಧಾಂತದ ಉಪದೇಶದ ರೂಪದಲ್ಲಿ ದಯಪಾಲಿಸುತ್ತಿದ್ದಾರೆ. ಇಂಥ ತತ್ವೋಪದೇಶದಿಂದ ಬುದ್ಧಿದೋಷಗಳು, ಕಾಮ, ಕ್ರೋಧ, ದ್ವೇಷ ಆದಿ ಮನೋದೋಷಗಳು ದೂರವಾಗಿ ಜ್ಞಾನ ಭಕ್ತಿಗಳ ಅಭಿವೃ

Rarest Archiver

ದ್ಧಿಯು ಉಂಟಾಗುತ್ತದೆ. ಮಧ್ವ ಅಂದರೆ ಮಧು. ಜೇನುತುಪ್ಪ ಸಿಹಿಯಾಗಿದ್ದು ಆನಂದಪ್ರದವಾಗಿರುವ ಮೋಕ್ಷಸಾಧನವನ್ನು ವಾತಿ - ತಂದುಕೊಡುತ್ತಾರೆ, ಎಂಬ ಪದವ್ಯುತ್ಪತ್ತಿಯಿಂದ ಮಧ್ವಶಾಸ್ತ್ರದ ಜ್ಞಾನದಿಂದ ಸ್ವರೂಪಾನಂದಾವಿರ್ಭಾವ ರೂಪ ವಾದ ಮೋಕ್ಷವೆಂಬ ಫಲವು ದೊರೆಯುತ್ತದೆ ಎಂಬ ಪ್ರಮೇಯವು ಇಲ್ಲಿ ಸೂಚಿತ ವಾಗಿದೆ.

ಇಲ್ಲಿ ಶ್ರೀಮಧ್ವಾಚಾರ್ಯರು ಸೂರ್ಯನು ಎಂದು ಹೇಳಿರುವುದರಿಂದ ಹಾಗೂ ಶ್ರೀಯೋಗೀಂದ್ರರು ವೈದ್ಯರು ಎಂದು ಹೇಳಿರುವುದರಿಂದ, ತತ್ತ್ವೋಪದೇಶವೇ ಔಷಧವು ಎಂದು ಹೇಳಿರುವುದರಿಂದ ರೂಪಕಾಲಂಕಾರವಿದೆ. ''ಶತ ಭಿಷಕ್'' ಎಂಬ ನಕ್ಷತ್ರದ ಉಲ್ಲೇಖದಿಂದ ಮುದ್ರಾಲಂಕಾರವಿದೆ.

ವಿಗ್ರಹವಾಕ್ಯಗಳು- ಮಾಯಾವಾದಾದಿನಾನಾಕುಮತಿಬುಧಮತಧ್ವಾಂತವಿಧ್ವಂಸ ಭಾಸ್ವನ್ಮಧ್ವೋಕ್ತಂ - ಮಾಯಾವಾದಃ ಏವ ಆದಿಃ ಯಾಸಾಂ ತಾಃ, ಮಾಯಾವಾದಾದಯಶ್ಚ ತಾಃ ನಾನಾವಿಧಾಶ್ಚ, ತಾದೃಶಾಃ ಕುಮತಯಃ ಏಷಾಂ ತೇ ತಾದೃಶಾಶ್ಚ ತೇ ಬುಧಾಶ್ಚ ತೇಷಾಂ ಮತಂ ತದೇವ ಧ್ವಾಂತಮಿವ, ತಸ್ಯ ವಿಧ್ವಂಸೇ ಭಾಸ್ವಾನ್ ಇವ ಸ್ಥಿತಶ್ಚಾಸೌ ಮಧ್ವಶ್ಚ, ತೇನ ಉಕ್ತಂ. **ದ್ವೇಷ್ಯಸಂತಾನಹಂತಾ** - ದ್ವೇಷ್ಟುಂ ಯೋಗ್ಯಾಃ ದ್ವೇಷ್ಯಾಃ (ಅಹಂಕಾರಾದಿ ದೋಷಸಹಿತಾಃ ದುರ್ವಾದಿನಃ) ತೇಷಾಂ ಸಂತಾನಂ ತಸ್ಯ ಹಂತಾ.

ಕೋಶಗಳು- ಧ್ವಾಂತಂ - ''ಅಂಧಕಾರೋಸ್ತ್ರಿಯಾಂ ಧ್ವಾಂತಂ ತಮಿಸ್ರಂ ತಿಮಿರಂ ತಮಃ'' ಇತ್ಯಮರಃ?. ಧನ್ವಂತ್ಯತ್ರ ಮಾರ್ಗಮಪಶ್ಯಂತ ಇತಿ (ಧ್ವನ - ಶಬ್ದೇ) ಧ್ವಾಂತಮ್ (1-9-3). ಅಂತಿಕಂ - ''ಅಂತಿಕಂ ನಿಕಟೇ ವಾಚ್ಯಲಿಂಗಂ ಸ್ತ್ರೀ ಶೋಭನೌಷಧೌ'' ಇತಿ ಮೇದಿನಿ. ಭಿಷಕ್ - ''ರೋಗಹಾರ್ಹಗದಂಕಾರೋ ಭಿಷಗ್ವೈದ್ಯೌ ಚಿಕಿತ್ಸಕೇ'' ಇತ್ಯಮರಃ (2-6-57). ಸೂರಿಃ - ''ಧೀಮಾನ್ ಸೂರಿಃ ಕೃತೀ ಕೃಷ್ಟಿರ್ಲಬ್ಧವರ್ಣೋ ವಿಚಕ್ಷಣಃ । ದೂರದರ್ಶೀ ದೀರ್ಘದರ್ಶೀ'' ಇತ್ಯಮರಃ (2-7-5), ಸ್ವೈರಿನ್ - ''ಸ್ವತಂತ್ರೋಪಾವೃತಃ ಸ್ವೈರೀ ಸ್ವಚ್ಛಂದೋ ನಿರವಗ್ರಹಃ'' ಇತ್ಯಮರಃ(3-1-15).

Rarest Archiver

ವ್ಯಾಕರಣ ವಿಚಾರಗಳು- ಉಪದಿಶತೇ - ಉಪ + ದಿಶ್ - ಅತಿಸರ್ಜನೇ 6ನೇಯ ಗಣ ಉ.ಪದೀ, ಪ್ರ.ಪು.ಏ.ವ. ಪರಿರಮತೇ - ಪರಿ + ರಮ್ - ಕ್ರೀಡಾಯಾಂ 1ನೇಯ ಗಣ ಆ. ಪದ. ಪ್ರ.ಪು.ಏ.ವ.

ಅಹ್ನಾಂ ಪತ್ಯುರಲಂ ದ್ರುತಂ ಕರಪರಾಹತ್ಯಾ ನಿಜಾಸ್ಯೇಂದುತಃ ।
ಪ್ರೋದ್ಯಂತ್ಯಾ ಸುಧಯಾ ಭೃಶಂ ಶಿಶಿರಯನ್
ಮಾಧ್ಯಾಹ್ನಮಹ್ನಾಯ ಸಃ ।।
ಸದ್ವಿಪ್ರೋಷ್ಠಪದಾಭಿಸಂಕ್ರಮವಿನಿಷ್ಕ್ರಾಂತಿಕ್ರಮೋದ್ವೇಲಯಾ ।
ಶ್ರೀಯೋಗೀಂದ್ರಮುನಿರ್ವಿರಾಜತಿ ಸದಾ ಸಂಸಾಧ್ಯ
ಮಾಧ್ಯಾಹ್ನಿಕೀಂ ।।25।।

ಅನ್ವಯಾರ್ಥ: -**ಸಃ ಶ್ರೀಯೋಗೀಂದ್ರಮುನಿಃ** - ಆ ಶ್ರೇಷ್ಠರಾದ ಶ್ರೀಯೋಗೀಂದ್ರಮುನಿಗಳು, **ಸದ್‌ವಿಪ್ರೋಷ್ಠಪದಾಭಿಸಂಕ್ರಮವಿನಿಷ್ಕ್ರಾಂತಿಕ್ರಮೋದ್ವೇಲಯಾ** - **ಸತ್** - ಸಾತ್ವಿಕರಾದ ಸಾಧುಪ್ರವೃತ್ತಿಯುಳ್ಳವರಾದ, **ವಿಪ್ರಃ** - ಬ್ರಹ್ಮಜ್ಞಾನೇಚ್ಛುಗಳಾದ ಸಜ್ಜನರ, **ಓಷ್ಠಪದ** - ತುಟಿಗಳಲ್ಲಿ, **ಅಭಿಸಂಕ್ರಮ** - ಪ್ರವೇಶ ಹಾಗೂ, **ವಿನಿಷ್ಕ್ರಾಂತಿ** - ನಿರ್ಗಮ ಇವುಗಳಿಂದ, **ಕ್ರಮ** - ಕ್ರಮಶಃ, **ಉದ್ವೇಲಯಾ** - ಉಕ್ಕೇರಿ ಪ್ರವೃದ್ಧವಾಗಿರುವ, **ನಿಜಾಸ್ಯೇಂದುತಃ** - **ನಿಜ** - ತಮ್ಮ, **ಆಸ್ಯ** - ಮುಖವೆಂಬ, **ಇಂದುತಃ** - ಚಂದ್ರನಿಂದ, **ಪ್ರೋದ್ಯಂತ್ಯಾ** - ಹೊರಹೊಮ್ಮುತ್ತಿರುವ, **ಸುಧಯಾ** - ಪ್ರವಚನರೂಪೀ ಅಮೃತದಿಂದ - **ಅಹ್ನಾಂಪತ್ಯುಃ** - ದಿನಗಳ ಸ್ವಾಮಿಯಾದ ಸೂರ್ಯನ, **ಕರಪರಾಹತ್ಯಾ** - ಕಿರಣಗಳ ಪ್ರಘಾತದಿಂದ, **ಅಲಂ** - ಚೆನ್ನಾಗಿ, **ದ್ರುತಂ** - ತಪ್ತವಾಗಿರುವ, **ಮಧ್ಯಾಹ್ನಂ** - ಮಧ್ಯಾಹ್ನದ ಸಮಯವನ್ನು, **ಶಿಶಿರಯನ್** - ಶಿಶಿರಋತುವಿನಂತೆ ಶೀತಲವನ್ನಾಗಿ ಮಾಡುತ್ತಾ, **ಅಹ್ನಾಯ** - ಶೀಘ್ರವಾಗಿ, **ಮಾಧ್ಯಾಹ್ನಿಕೀಂ** - ಮಧ್ಯಾಹ್ನಕಾಲದಲ್ಲಿ ಮಾಡಲು ಯೋಗ್ಯವಾದ ಸಂಧ್ಯಾವಂದನ, ಪೂಜಾನೈವೇದ್ಯಾದಿ ಕ್ರಿಯೆಗಳನ್ನು, **ಸಂಸಾಧ್ಯ** - ಪೂರೈಸಿ, **ಸದಾ** - ಸದಾ ಕಾಲದಲ್ಲಿಯೂ, **ವಿರಾಜತಿ** - ಶೋಭಾಯಮಾನವಾಗಿ ಗೋಚರಿಸುತ್ತಾರೆ.

ತಾತ್ಪರ್ಯಾರ್ಥ : ಮಧ್ಯಾಹ್ನಕಾಲವು ಸಮೀಪದಲ್ಲಿರುವಾಗ ನಿತ್ಯವೂ ಶ್ರೀಯೋಗೀಂದ್ರತೀರ್ಥರು ತಮ್ಮ ಶಿಷ್ಯಮಂಡಲಿಗೆ ಶಾಸ್ತ್ರಗ್ರಂಥಗಳ ಪಾಠಪ್ರವಚ

Rarest Archiver

ನವನ್ನು ಮಾಡುತ್ತಿರುತ್ತಾರೆ. ಆಗ ಅವರ ಮುಖ(ಚಂದ್ರ)ದಿಂದ ಹೊರಟ ಪ್ರವಚನದ ವಾಕ್ಯಗಳು ಚಂದ್ರನಿಂದ ಹೊರಟ ಕಿರಣಗಳಂತೆ ಅಮೃತದಂತೆ ತಂಪಾಗಿ ಆಹ್ಲಾದಕರವಾಗಿರುತ್ತವೆ. ಈ ತಂಪಿನಿಂದಾಗಿ ಮಧ್ಯಾಹ್ನದ ಬಿಸಿಲಿನ ತಾಪವು ದೂರವಾಗಿ ಶಿಶಿರಋತುವಿನ ತಂಪಿನ ಅನುಭವವಾಗುತ್ತದೆ. ಅಂದರೆ ಅವರ ಪ್ರವಚನವನ್ನು ಶ್ರದ್ಧೆಯಿಂದ ಕೇಳಿ ನಿಜವಾದ ಸಿದ್ಧಾಂತದ ಜ್ಞಾನವನ್ನು ಪಡೆಯುತ್ತಿರುವ ಶಿಷ್ಯವೃಂದಕ್ಕೆ ಒಂದು ವಿಲಕ್ಷಣವಾದ ಸುಖದ ಅನುಭವವಾಗುತ್ತದೆ ಎಂದು ತಾತ್ಪರ್ಯ. ಶ್ರೀಯೋಗೀಂದ್ರತೀರ್ಥರ ಪ್ರವಚನವು ನಡೆದಾಗ ಶಿಷ್ಯರು ಅವರು ಹೇಳಿದ್ದನ್ನು ಪುನರುಚ್ಚಾರ ಮಾಡುತ್ತಿದ್ದರು. ಶ್ರೀಯೋಗೀಂದ್ರತೀರ್ಥರ ಮುಖದಿಂದ ಹೊರಟ ವಾಕ್ಯಗಳೆಂಬ ಅಮೃತವು ಶಿಷ್ಯರ ತುಟಿಗಳಲ್ಲಿ ಪ್ರವೇಶ ಮಾಡಿ ಹೊರಗೆ ಬರುತ್ತಿತ್ತು. ಅಂದರೆ ಉಕ್ಕೇರಿ ಎಲ್ಲೆಡೆ ಪಸರಿಸುತ್ತಿತ್ತು ಎಂದು ಕಲ್ಪಿಸಲಾಗಿದೆ. ಹೀಗೆ ಶಿಷ್ಯರ ತುಟಿಗಳಲ್ಲಿ ಬರುವುದು ಹೋಗುವುದು ಆಗುವುದರಿಂದ, ಶ್ರೀಯೋಗೀಂದ್ರತೀರ್ಥರ ಪ್ರವಚನಸಮುದ್ರವು ಉಕ್ಕೇರಿ ಅವರ ವಾಕ್ ಎಂಬ ಅಮೃತವು ಎಲ್ಲೆಡೆ ಪಸರಿಸಿ ಮಧ್ಯಾಹ್ನದ ತಾಪವನ್ನು ಹೋಗಲಾಡಿಸಿತ್ತು ಎಂದು ತಾತ್ಪರ್ಯ.

ಇಲ್ಲಿ ವಿಶೇಷವಾದ ಶಾಸ್ತ್ರ ಪ್ರಮೇಯದ ಪ್ರತಿಪಾದನೆಯು ಅಡಕವಾಗಿದೆ. ''ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ । ಆಗಮಾಪಾಯಿನೋ ನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥'' ಎಂಬ ಗೀತಾಶ್ಲೋಕದ ಸಾರವು ಇಲ್ಲಿ ಸೂಚಿತವಾಗಿದೆ. ಇಂದ್ರಿಯ ಹಾಗೂ ವಿಷಯಗಳ ಸಂಬಂಧ ಮಾತ್ರದಿಂದ ಸುಖದುಃಖಾದಿಗಳು ಉಂಟಾಗುವುದಿಲ್ಲ. ಶೀತ ಉಷ್ಣ ಇತ್ಯಾದಿ ಅನುಭವಗಳುಂಟಾಗಬಹುದು. ಆದರೆ ಆ ಅನುಭವಗಳಿಂದ ಸುಖದುಃಖಾದಿಗಳು ಉಂಟಾಗಬೇಕಾಗಿದ್ದರೆ ಅಭಿಮಾನವು ಕಾರಣವಾಗಿ ಇರಬೇಕಾಗುತ್ತದೆ. ಸಾಧಕನು ''ನಾನು ನನ್ನದು'' ಎಂಬ ಅಭಿಮಾನವನ್ನು, ವಿಷಯರಾಗವನ್ನು ತ್ಯಜಿಸಬೇಕು. ಅಭಿಮಾನರಹಿತನಾದ ವ್ಯಕ್ತಿಗೆ ಮಧ್ಯಾಹ್ನದ ಬಿಸಿಲೂ ಕೂಡ ತಂಪಾಗಿ ಪರಿಣಮಿಸುತ್ತದೆ. ಅಂದರೆ ಜನಸಾಮಾನ್ಯರಿಗೆ ಉಂಟಾಗುವ ಅನುಭವಗಳು ಅದರಿಂದುಂಟಾಗುವ ಸುಖದುಃಖಾದಿಗಳು ಅಭಿಮಾನವನ್ನು ತ್ಯಜಿಸಿದ ಸಾಧಕನಿಗೆ ಉಂಟಾಗುವುದಿಲ್ಲ. ಈ ರೀತಿಯಾಗಿ ವಿಷಯರಾಗದಿಂದ ದೂರವಿರುವ ಸಾಮರ್ಥ್ಯವು ತತ್ವಜ್ಞಾನದಿಂದ ಉಂಟಾಗುತ್ತದೆ.

Rarest Archiver

ತತ್ವಜ್ಞಾನವು ಶ್ರೀಯೋಗೀಂದ್ರತೀರ್ಥರ ಪ್ರವಚನಗಳಿಂದ, ಉಪದೇಶಗಳಿಂದ ಪ್ರಾಪ್ತವಾಗುತ್ತದೆ. ಜ್ಞಾನವನ್ನು ಪಡೆದು, ವಿಷಯರಾಗವನ್ನು ತ್ಯಜಿಸಿ, ಸದಾಚಾರ ಶೀಲನಾಗಿ ಇದ್ದುಕೊಂಡು ಪರಮಾತ್ಮನಲ್ಲಿ ಭಕ್ತಿಮಾಡುವುದೇ ಸಾಧನೆಯ ಮೂಲ ಸ್ವರೂಪವಾಗಿದೆ ಎಂಬ ಪ್ರಮೇಯವು ಇಲ್ಲಿ ಉದಿತವಾಗಿದೆ. ಮಧ್ಯಾಹ್ನದ ಸೂರ್ಯನ ಬಿಸಿಲಿನ ಉಷ್ಣತೆ, ಶಿಶಿರದ ಶೀತ, ಇವುಗಳ ಉಲ್ಲೇಖದಿಂದ ''ಶೀತೋಷ್ಣಸುಖದುಃಖದಾಃ'' ಎಂಬ ಶಬ್ದವೂ ಅಭಿಸಂಕ್ರಮ ವಿನಿಷ್ಕ್ರಾಂತಿ ಈ ಪದಗಳಿಂದ ''ಆಗಮಾಪಾಯಿನೋ'' ಎಂಬ ಪದವೂ ಸೂಚಿತವಾಗಿ, ಮೇಲೆ ಹೇಳಿದ ಗೀತಾ ಶ್ಲೋಕವೇ ಇಲ್ಲಿ ಸೂಚಿತವಾದಂತಿದೆ.

ವಿಗ್ರಹವಾಕ್ಯಗಳು– ಕರಪರಾಹತ್ಯಾ - ಪರಾ ಚ ಸಾ ಆಹತಿಶ್ಚ ಕರಾಣಾಂ ಪರಾಹತಿಃ ಕರಪರಾಹತಿಃ ತಯಾ. **ನಿಜಾಸ್ಯೇಂದುತಃ** – ನಿಜಂ ಚ ತತ್ ಆಸ್ಯಂ ಚ ನಿಜಾಸ್ಯಮೇವ ಇಂದುಶ್ಚ ನಿಜಾಸ್ಯೇಂದುಃ ತಸ್ಮಾತ್. **ಸದ್ ವಿಪ್ರೋಷ್ಠಪದಾಭಿಸಂಕ್ರಮ ವಿನಿಷ್ಕ್ರಾಂತಿಕ್ರಮೋದ್ವೇಲಯಾ** – ಸಂತಶ್ಚತೇ ವಿಪ್ರಾಶ್ಚ, ಸದ್ ವಿಪ್ರಾಣಾಂ ಓಷ್ಠಪದಾನಿ, ತೇಷು ಅಭಿಸಂಕ್ರಮಶ್ಚ ವಿನಿಷ್ಕ್ರಾಂತಿಶ್ಚ, ತಯೋಃ ಕ್ರಮೇಣ ಉದ್ವೇಲಾ ಚ ಸಾ ಉದ್ಗತಾ ವೇಲಾ ಯಸ್ಯಾಃ ಸಾ.

ಕೋಶಗಳು– ಕರಃ - ''ಕರೋ ವರ್ಷೋಪಲೇ ರಶ್ಮೌ ಪಾಣೌ ಪ್ರತ್ಯಾಯಶುಂಡಯೋಃ'' ಇತಿ ಮೇದಿನೀ(123/12). ಅಹ್ನಾಯ - ''ಸ್ರಾಗ್‌ಝಟಿತ್ಯಂಜಸಾಹ್ನಾಯಜದ್ರಾಜಮಂಕ್ಷುಸಪದಿದ್ರುತೇ'' ಇತ್ಯಮರಃ(3-4-2). ಓಷ್ಠ - ''ಓಷ್ಠಾಧರೌ ತು ರದನಛದೌ ದಶನವಾಸಸೀ'' ಇತ್ಯಮರಃ (2-6-90).

ವ್ಯಾಕರಣ ವಿಚಾರಗಳು– ಪ್ರೋದ್ಯಂತ್ಯಾ - ಪ್ರ+ಉತ್+ಯನ್ಂ(ತೀ), ಇ-ಗತೌ 2ನೇಯ ಗಣ ಪ.ಪದ ಏತಿ, ಸ್ತ್ರೀಲಿಂಗ ಶತ್ರಂತ ರೂಪ, ತೃ.ವಿ.ಏ.ವ. ಶಿಶಿರಯನ್ - ಶಿಶಿರವತ್ ಆಚರತಿ ಶಿಶಿರಯತಿ, ಶಿಶಿರ +ಕ್ಯಜ. ವಿರಾಜತಿ - ವಿ+ರಾಜ್ - ದೀಪ್ತೌ, 1ನೇಯ ಗಣ ಉಭಯಪದೀ, ರಾಜತಿ, ರಾಜತೇ ಸಂಸಾಧ್ಯ - ಸಂ +ಸಾಧ್ - ಸಂಸಿಧ್ದೌ, ಸಾಧ್ನೋತಿ 5ನೇಯ ಗಣ ಪ.ಪದ, ಲ್ಯಪ್ ಪ್ರತ್ಯಯಾಂತ ಅವ್ಯಯ.

Rarest Archiver

ವಿಜ್ಞೋ ಯಜ್ಞಭುಜೇ ನಿವೇದ್ಯ ಮಹಸೇ ಶ್ರೀರಾಮಚಂದ್ರಾತ್ಮನೇ ।
ಹವ್ಯಂ ಪ್ರಾಗಮೃತೇನ ತೇನ ವಿಬುಧಾನ್ ಧಿನ್ವನ್ನಮೂನನ್ವಹಮ್ ।।
ಶೃಣ್ವನ್ ಭದ್ರಪದಾವಲೀರಪಿ ಗಿರಸ್ತೇಷಾಮಥಾರ್ಥಾಪಯನ್ ।
ಶ್ರೀಯೋಗೀಂದ್ರಮುನಿರ್ವಿರಾಜತಿ ತದಾ
ಪಾದಾಬ್ಜಯಜ್ವಾ ಹರೇಃ ।।26।।

ಅನ್ವಯಾರ್ಥಃ - ಶ್ರೀಯೋಗೀಂದ್ರಮುನಿಃ - ಶ್ರೀಯೋಗೀಂದ್ರಮುನಿಗಳು, **ವಿಜ್ಞಃ** - ವಿಶೇಷವಾದ ಜ್ಞಾನವನ್ನು ಪಡೆದವರಾಗಿ, **ಯಜ್ಞಭುಜೇ** - ಯಜ್ಞದಲ್ಲಿಯ ಆಹುತಿಗಳನ್ನು ಭುಂಜಿಸುವ, **ಶ್ರೀರಾಮಚಂದ್ರಾತ್ಮನೇ** - ಶ್ರೀರಾಮಚಂದ್ರನೆಂಬ ರೂಪದ, **ಮಹಸೇ** - ತೇಜಸ್ಸಿಗೆ, ಯಜ್ಞದ ಅಗ್ನಿಗೆ, **ಹವ್ಯಂ** - ದೈವವಾದ ಅನ್ನವನ್ನು ಹವಿಸ್ಸನ್ನು, **ಪ್ರಾಕ್**- ಮೊಟ್ಟಮೊದಲು, **ನಿವೇದ್ಯ** - ಸ್ವೀಕರಿಸಲು ನಿವೇದಿಸಿ ಅರ್ಪಣೆ ಮಾಡಿ ಅನಂತರ, **ತೇನ ಅಮೃತೇನ** - ಆ ಯಜ್ಞಶೇಷವಾದ ಹವಿಸ್ಸಿನಿಂದ, **ಅಮೂನ್** - ಈ ಯೋಗ್ಯರಾದ, **ವಿಬುಧಾನ್** - ಪಂಡಿತರಾದ ಬ್ರಾಹ್ಮಣರನ್ನು, **ಧಿನ್ವನ್** - ಅವರಿಗೆ ಕೊಟ್ಟು, ಸಂತೋಷಪಡಿಸುತ್ತ, **ಅನ್ವಹಂ** - ತದನಂತರ, **ತೇಷಾಂ** - ಆ ಬ್ರಾಹ್ಮಣರ, **ಭದ್ರಪದಾವಲೀಃ** - ಮಂಗಳಕರವಾದ ಪದಗಳ ಪಂಕ್ತಿಗಳುಳ್ಳಂಥ, **ಗಿರಃ** - ಮಾತುಗಳನ್ನು, **ಶೃಣ್ವನ್** - ಶ್ರವಣಮಾಡುತ್ತಾ, **ಅಥ** - ಅನಂತರದಲ್ಲಿ, **ಅರ್ಥಾಪಯನ್** - ಆ ಮಾತುಗಳ ಅರ್ಥಗಳನ್ನು ಚರ್ಚಿಸಿ ವಿವರಣೆ ಮಾಡುತ್ತ, **ಹರೇಃ** - ಸರ್ವೋತ್ತಮನಾದ ವಿಷ್ಣುವಿನ, **ಪಾದಾಬ್ಜಯಜ್ವಾ** - ಪಾದಕಮಲಗಳ ಪೂಜಕರಾಗಿ, **ತದಾ** - ಆ ಸಮಯದಲ್ಲಿ, **ವಿರಾಜತಿ** - ಅತ್ಯಂತವಾಗಿ ಶೋಭಿಸುತ್ತಾರೆ.

ತಾತ್ಪರ್ಯಾರ್ಥ : ಇಲ್ಲಿ ಶ್ರೀಯೋಗೀಂದ್ರತೀರ್ಥರ ಸದಾಚಾರ ಯುಕ್ತವಾದ ದಿನಚರ್ಯೆಯ ವರ್ಣನೆಯ ನಿಮಿತ್ತದಿಂದ ಕೆಲವು ಸೂಕ್ತ ಪ್ರಮೇಯಗಳನ್ನು ಪ್ರತಿಪಾದಿಸಲಾಗಿದೆ. ಶ್ರೀಯೋಗೀಂದ್ರತೀರ್ಥರು ಹಿಂದಿನ ಶ್ಲೋಕದಲ್ಲಿ ಹೇಳಿದಂತೆ, ಮಧ್ಯಾಹ್ನದವರೆಗೆ ಶಿಷ್ಯರುಗಳಿಗೆ ಪಾಠಪ್ರವಚನ ಮಾಡುತ್ತ ನಂತರ ತಮ್ಮ ಮಧ್ಯಾಹ್ನದ ಸಂಧ್ಯಾವಂದನೆ ಪೂಜೆಯನ್ನು ಪೂರೈಸುತ್ತಾರೆ. ಪೂಜೆಯ ಅಂಗವಾಗಿ ಅನ್ನವನ್ನು ಶ್ರೀಮನ್ ಮೂಲರಾಮಚಂದ್ರದೇವರಿಗೆ ನೈವೇದ್ಯ ಮಾಡಿ ಹುತಶೇಷವನ್ನು ಪಂಡಿತರಾದ ಬ್ರಾಹ್ಮಣರಿಗೆಲ್ಲ ಭೋಜನ ಮಾಡಿಸಿ ತಾವೂ ಭೋಜನ

Rarest Archiver

ಮಾಡುತ್ತಿದ್ದರು. ಭೋಜನಕಾಲದಲ್ಲಿ ಸಂಪ್ರದಾಯದ ಪ್ರಕಾರ ಶಾಸ್ತ್ರಾರ್ಥವಿಚಾರ ವನ್ನು ಮಾಡುತ್ತಿದ್ದರು. ಪಂಡಿತರಾದ ಶಿಷ್ಯರು ಯಾವುದೇ ಶಾಸ್ತ್ರಾರ್ಥದ ವಿಚಾರ ವನ್ನು ಭೋಜನಕಾಲದಲ್ಲಿ ಮಂಡಿಸಿದರೆ ಅದನ್ನು ಬಹಳ ಆದರದಿಂದ ಕೇಳುತ್ತಿದ್ದರು. ಮಧ್ಯೇ ಮಧ್ಯೇ ಅರ್ಥದ ವಿವರಣೆಯು ಅಪೂರ್ಣವಾಗಿದ್ದರೆ ಅಥವಾ ಅಸಮರ್ಪಕವಾಗಿದ್ದರೆ ಕೂಡಲೇ ತಾವೇ ಸೂಕ್ತವಾದ ವಿವರಣೆಯನ್ನು ಕೊಟ್ಟು ಎಲ್ಲರನ್ನು ಸಂತೋಷಪಡಿಸುತ್ತಿದ್ದರು. ತಮ್ಮ ಕಾರ್ಯಗಳೆಲ್ಲವೂ ಹರಿಪಾದಪೂಜಾ ರೂಪವೆಂದು ಭಾವಿಸಿ ಹರಿಪಾದಕಮಲಗಳಲ್ಲಿ ಸಮರ್ಪಿಸುತ್ತಿದ್ದರು.

ಇಲ್ಲಿ ಶ್ರೀಮಧ್ವಾಚಾರ್ಯರು ರಚಿಸಿದ ಶ್ರೀಸದಾಚಾರಸ್ಮೃತಿಯ ಸಾರವೂ ಶ್ರೀಭಗವದ್‌ಗೀತೆಯಲ್ಲಿ ಉಕ್ತವಾದ ನಿಷ್ಕಾಮಕರ್ಮದ ವಿಚಾರವೂ ಪ್ರತಿಪಾದಿಸಲ್ಪಟ್ಟಿವೆ. ಸರ್ವವನ್ನು ಪರಮಾತ್ಮನಿಗೆ ಸಮರ್ಪಿಸಬೇಕು ಎಂದು ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ ಹೇಳಿದ್ದಾರೆ. ''ವೈಶ್ವದೇವಂ ಬಲಿಂ ಚೈವ ಕುರ್ಯಾನ್ನಿತ್ಯಂ ತದರ್ಪಣಮ್ । ಇಷ್ಟಂ ದತ್ತಂ ಹುತಂ ಜಪ್ತಂ ಪೂರ್ತಂ ಯಚ್ಚಾತ್ಮನಃ ಪ್ರಿಯಮ್ ॥ ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯೇತ್ । ಭುಕ್ತಶೇಷಂ ಭಗವತೋ ಭೃತ್ಯಾತಿಥಿಪುರಸ್ಸರಃ ॥ ಭುಂಜೀತ ಹೃದ್ಗತಂ ವಿಷ್ಣುಂ ಸ್ಮರಂಸ್ತದ್ಗತಮಾನಸಃ । ಆಚಮ್ಯ ಮೂಲಮಂತ್ರೇಣ ಕೋಷ್ಠಂ ಸಮಭಿಮಂತ್ರಯೇತ್ ॥ ವೇದಶಾಸ್ತ್ರವಿನೋದೇನ ಪ್ರೀಣಯನ್ ಪುರುಷೋತ್ತಮಂ । ಅಹಃಶೇಷಂ ನಯೇತ್''.

ತನಗೆ ಇಷ್ಟವಾದುದನ್ನು ಹೆಂಡರು ಮಕ್ಕಳು ಪ್ರಿಯರನ್ನು ಪ್ರಾಣಗಳನ್ನು ಪರಮಾತ್ಮನಿಗೆ ಅರ್ಪಿಸಬೇಕು. ಪರಮಾತ್ಮನಿಗೆ ನೈವೇದ್ಯ ಮಾಡಿ ಉಳಿದುದನ್ನು ತನ್ನ ಅತಿಥಿಗಳು, ಭೃತ್ಯರು ಇವರಿಂದ ಸಹಿತನಾಗಿ ತಾನು ಭುಂಜಿಸಬೇಕು. ಈ ಎಲ್ಲ ಕಾರ್ಯಗಳನ್ನು ಮಾಡುವಾಗ ವಿಷ್ಣುವಿನಲ್ಲಿಯೇ ಮನಸ್ಸನ್ನು ಇಟ್ಟು ಅವನನ್ನೇ ಸ್ಮರಣೆ ಮಾಡುತ್ತ ಇರಬೇಕು. ದಿನದ ಉಳಿದ ಭಾಗವನ್ನು ವೇದಶಾಸ್ತ್ರಗಳ ಪಾಠ ಚರ್ಚೆಗಳಲ್ಲಿ ವಿನಿಯೋಗಿಸಬೇಕು,'' ಎಂದು ಸದಾಚಾರಸ್ಮೃತಿಯಲ್ಲಿ ಹೇಳಲಾಗಿದೆ. ಗೀತಾವಿವೃತಿಯಲ್ಲಿ ಶ್ರೀರಾಯರು ''ಯೋಗಃ ಕರ್ಮಸು ಕೌಶಲಂ'' (2-50) ಎಂಬ ಗೀತಾವಾಕ್ಯವನ್ನು ವಿವರಿಸುವಾಗ ''ಕರ್ಮಸು ಮಧ್ಯೇ ಭಗವದ್‌ಜ್ಞಾನಪೂರ್ವಂ ಫಲಸ್ನೇಹರಹಿತಂ ಭಗವದರ್ಥತ್ವೇನ ಕ್ರಿಯಮಾಣಂ, ಕರ್ಮ ಕೌಶಲಮು

Rarest Archiver

ಚ್ಯತೇ ಸ ಏವ ಯೋಗೋನಾಮ'' ಎಂದು ಯೋಗದ ವ್ಯಾಖ್ಯೆಯನ್ನು ಕೊಟ್ಟಿದ್ದಾರೆ. ಕರ್ಮಗಳ ಮಧ್ಯದಲ್ಲಿ ಭಗವಂತನ ಜ್ಞಾನವನ್ನು ಪಡೆದು ಕರ್ಮದ ಫಲದಲ್ಲಿ ಸ್ನೇಹವನ್ನು ಇಟ್ಟುಕೊಳ್ಳದಲೇನೇ ಭಗವಂತನ ಪೂಜಾರೂಪವಾಗಿ ಮಾಡುವ ಕರ್ಮವು ಕೌಶಲವೆಂದು ಕರೆಯಲ್ಪಡುತ್ತದೆ. ಇಂಥ ಕೌಶಲಕ್ಕೆ ಯೋಗವೆಂದು ಕರೆಯುತ್ತಾರೆ. ಇಂಥ ಯೋಗವನ್ನು ನಿತ್ಯವೂ ಆಚರಿಸುವ ಶ್ರೀಯೋಗೀಂದ್ರರು ನಿಜವಾಗಿಯೂ ವಿಶೇಷವಾಗಿ ಶೋಭಿಸುತ್ತಾರೆ ಎಂದು ತಾತ್ಪರ್ಯ. ಸ್ವ ಸ್ವವಿಹಿತ ಕರ್ಮಗಳನ್ನು ಭಗವದಾರಾಧನ ರೂಪವಾಗಿ ಭಕ್ತಿಯಿಂದ ಆಚರಿಸುವುದೇ ಪರ ಧರ್ಮ - ''ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ । ತದ್ವಿರುದ್ಧಃ ಸರ್ವೋಽಪ್ಯಧರ್ಮಃ'' ಎಂಬ ಪ್ರಮೇಯವನ್ನೂ ಇಲ್ಲಿ ಪ್ರತಿಪಾದಿಸ ಲಾಗಿದೆ.

ಇಲ್ಲಿ ರೂಪಕಾಲಂಕಾರ ಹಾಗೂ ಮುದ್ರಾಲಂಕಾರಗಳು ಇವೆ.

ವಿಗ್ರಹವಾಕ್ಯಗಳು– ಯಜ್ಞಭುಜೇ - ಯಜ್ಞಂ ಭುನಕ್ತಿ ಇತಿ ಯಜ್ಞಭುಕ್ ತಸ್ಮೈ. **ಶ್ರೀರಾಮಚಂದ್ರಾತ್ಮನೇ** - ಶ್ರೀರಾಮಚಂದ್ರ ಏವ ಆತ್ಮಾ ಸ್ವರೂಪಂ ಯಸ್ಯ ತತ್, ತಸ್ಮೈ **ಭದ್ರಪದಾವಲೀಃ** - ಭದ್ರಾಣಿ ಚ ತಾನಿ ಪದಾನಿ ಭದ್ರಪದಾನಿ, ತೇಷಾಂ ಆವಲೀಃ. ಪಾದಾಬ್ಜಯಜ್ವಾ ಪಾದೌ ಅಬ್ಜೇ ಇವ ಪಾದಾಬ್ಜೇ, ತಯೋಃ ಯಜ್ವಾ.

ಕೋಶಗಳು– ಮಹಃ - ''ಮಹಸ್ತೂತ್ಸವತೇಜಸೋಃ'' ಇತ್ಯಮರಃ(3-3-231). ಹವ್ಯಂ - ''ಹವ್ಯಕವ್ಯೇ ದೈವಪೈತ್ರೇ ಅನ್ನೇ'' ಇತ್ಯಮರಃ (2-7-24). ಅಮೃತಂ - ''ಅಮೃತಂ ಯಜ್ಞಶೇಷೇ ಸ್ಯಾತ್ಪೀಯೂಷೇ ಸಲಿಲೇ ಘೃತೇ । ಅಯಾಚಿತೇ ಚ ಮೋಕ್ಷೇ ಚ ನಾ ಧನ್ವಂತರಿದೇವಯೋಃ ॥'' ಇತಿ ಮೇದಿನೀ(59/77). ಭದ್ರಂ - ''ಶ್ವಃ ಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಂ'' ಇತ್ಯಮರಃ(1-4-25). ಗೀಃ - ''ಬ್ರಾಹ್ಮೀ ತು ಭಾರತೀ ಭಾಷಾ ಗೀರ್ವಾಗ್ ವಾಣೀ ಸರಸ್ವತೀ'' ಇತ್ಯಮರಃ (1-6-1). ಅಬ್ಜಂ - ''ಅಬ್ಜೋಽಸ್ತ್ರೀಶಂಖೇ ನಾ ನಿಚುಲೇ ಧನ್ವಂತರೌ ಚ ಹಿಮಕಿರಣೇ । ಕ್ಲೀಬಂ ಪದ್ಮೇ'' ಇತಿ ಮೇದಿನೀ (3-30). ಯಜ್ವಾ - ''ಯಷ್ವಾ ಚ ಯಜಮಾನಶ್ಚ ಸ ಸೋಮವತಿ ದೀಕ್ಷಿತಃ - ಇಜ್ಯಾಶೀಲೋ ಯಾಯಜೂಕಃ ಯಜ್ವಾ ತು ವಿಧಿನೇಷ್ಟವಾನ್'', ಇತ್ಯಮರಃ (2-7-8).

Rarest Archiver

ವ್ಯಾಕರಣ ವಿಚಾರಗಳು– ಧಿನ್ವನ್ - ಧಿನ್ವ - ಪ್ರೀಣನೇ - ಧಿನೋತಿ 1ನೇಯ ಗಣ ಪ.ಪ. ಶತ್ರಂತರೂಪ, ಶೃಣ್ವನ್ - ಶ್ರು -ಶ್ರವಣೇ ಶೃಣೋತಿ 1ನೇಯ ಗಣ ಪ.ಪ. ಶತ್ರಂತರೂಪ. ಅರ್ಥಾಪಯನ್ - ಅರ್ಥ ಶಬ್ದದಿಂದ ನಾಮಧಾತು, ಣಿಚ್, ಅರ್ಥಾಪಯತಿ ಶತ್ರಂತರೂಪ.

ಶಾಸ್ತ್ರಂ ಸತ್ ಫಣಿಭಾಣಿಕಾಮುಖಮಹಃಶೇಷಂ ಬುಧಾನ್ ಪಾಠಯನ್ ।
ಕ್ಲೃಪ್ತಾರಾತ್ರಿಕಮಂಗಲೋ ನಿಶಿ ರಮಾಗೋಪಾಯ ದೀಪಾಲಿಭಿಃ ।।
ಶ್ರೀಯೋಗೀಂದ್ರಮುನಿರ್ನ ಶಾಸ್ತ್ರಜಲಧೇಃ ಪಾರೇ ಅವತೀರ್ಣಃ ಪರಂ ।
ಕಿಂತ್ವೇವಂ ಭವವಾರಿಧೇರಪಿ ಕೃಪಾತರ್ಯಾಪಿ
ಭೂರ್ಯಾ ಗುರೋಃ ।।27।।

ಅನ್ವಯಾರ್ಥಃ – **ಶ್ರೀಯೋಗೀಂದ್ರಮುನಿಃ** - ಶ್ರೀಯೋಗೀಂದ್ರ ಮುನಿಗಳು, **ಅಹಃಶೇಷಂ** – ದಿನದ ಉಳಿದ ಭಾಗವನ್ನೆಲ್ಲ, **ಫಣಿಭಾಣಿಕಾಮುಖಂ** – ಫಣೀ - ಶೇಷನ ಅಂಶವುಳ್ಳ ಪತಂಜಲಿಋಷಿಯ, **ಭಾಣಿಕಾ** – ಉಕ್ತಿ ಎಂದರೆ ಪಾತಂಜಲಿಭಾಷ್ಯವೆಂಬ ವ್ಯಾಕರಣಶಾಸ್ತ್ರದ ಗ್ರಂಥ, **ಮುಖ** – ಇದೇ ಮುಖ್ಯವಾಗಿಯುಳ್ಳ, **ಸತ್‌ಶಾಸ್ತ್ರಂ** - ಪ್ರಶಸ್ತವಾದ ಯೋಗ್ಯವಾದ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಮೀಮಾಂಸಾ, ವೇದಾಂತ ಇತ್ಯಾದಿ ಸಕಲ ಶಾಸ್ತ್ರಗಳನ್ನು, **ಬುಧಾನ್** – ಸಜ್ಜನರಾದ ಪಂಡಿತರುಗಳಿಗೆ, **ಪಾಠಯನ್** - ಪಾಠ ಹೇಳುತ್ತ, **ನಿಶಿ** – ರಾತ್ರಿಯಲ್ಲಿ, ರಾತ್ರಿಯ ಪ್ರಥಮಯಾಮದಲ್ಲಿ, **ರಮಾಗೋಪಾಯ** – ರಮಾದೇವಿಯ ರಕ್ಷಕನಾದ ಅಂದರೆ ಸ್ವಾಮಿಯಾದ ಶ್ರೀನಾರಾಯಣನಿಗೆ, **ದೀಪಾಲಿಭೀಃ** – **ದೀಪ** – ದೀಪಗಳ, **ಆಲಿಭಿಃ** - ಪಂಕ್ತಿಗಳಿಂದ, **ಕ್ಲೃಪ್ತಾರಾರ್ತಿಕಮಂಗಲಃ** – ಕ್ಲೃಪ್ತ - ಮಾಡಲ್ಪಟ್ಟಂಥ, **ಆರಾರ್ತಿಕ ಮಂಗಲಃ** – ಮಂಗಳಕರವಾದ ಆರತಿಯುಳ್ಳಂಥವರಾಗಿ, **ಪರಂ** – ಕೇವಲ, **ಶಾಸ್ತ್ರಜಲಧೇಃ** - ಸಮಸ್ತ ಶಾಸ್ತ್ರಗಳೆಂಬ ಮಹಾಸಾಗರದ, **ಪರೇ** – ಆಚೆಯ ದಡದಲ್ಲಿ, **ನ** – **ಅವತೀರ್ಣಃ** – ದಾಟಿದವರು ಆಗಲಿಲ್ಲ, **ಕಿಂತು** – ಆದರೆ, **ಏವಂ** – ಈ ಪ್ರಕಾರವಾಗಿ, ಶಾಸ್ತ್ರಾಧ್ಯಯನ - ಅಧ್ಯಾಪನಾದಿಗಳಿಂದ, **ಭೂರ್ಯಾ** – ಬಹು ದೊಡ್ಡದಾದ, **ಗುರೋಃ** – **ಕೃಪಾತರ್ಯಾ** – ಗುರುಗಳ ದಯೆಯೆಂಬ ನಾವಿನಿಂದ, **ಅಪಿ** – ಕೂಡ, **ಭವವಾರಿಧೇಃ** – ಸಂಸಾರವೆಂಬ ಸಾಗರದ್ದೂ, **ಅಪಿ** – ಕೂಡ, **ಪಾರೇ ಅವತೀರ್ಣಃ** – ಆಚೆಿನ ದಡವನ್ನು ದಾಟಿದರು, ಸಂಸಾರದ ಬಂಧದಿಂದ

Rarest Archiver

ಮುಕ್ತರಾದರು ಎಂದು ತಾತ್ಪರ್ಯ.

ಈ ಕೊನೆಯ ಶ್ಲೋಕದಲ್ಲಿ ಸಾಧನ ಮಾರ್ಗದ ಫಲವನ್ನು ನಿರೂಪಿಸಲಾಗಿದೆ. ಈ ಹಿಂದಿನ ಶ್ಲೋಕಗಳಲ್ಲಿ ಸಾಧನಮಾರ್ಗದ ಅನೇಕ ಅಂಗಗಳು ಉಕ್ತವಾಗಿವೆ. ಶಾಸ್ತ್ರಾರ್ಥ ವಿಚಾರ, ಅದರಿಂದುಂಟಾಗುವ ಜ್ಞಾನ, ಹಾಗೂ ಸಾಧನೆಯ ಕರ್ಮಗಳನ್ನೆಲ್ಲ ಮಂಗಳಮಯನಾದ ಪರಮಾತ್ಮನಲ್ಲಿ ಅರ್ಪಿಸುವುದು ಇವೇ ಸಂಸಾರತಾರಕವಾದ ಮುಖ್ಯ ಉಪಾಯಗಳು. ಈ ರೀತಿಯಾಗಿ ಸಾಧನಮಾರ್ಗವನ್ನು ಅನುಸರಿಸಿದ ಸಾಧಕನಿಗೆ ತನ್ನ ವಿದ್ಯಾಗುರುಗಳ ಹಾಗೂ ಸಕಲ ಪ್ರಪಂಚಕ್ಕೆ ಗುರುವಾಗಿರುವ ನಾರಾಯಣನ ಅನುಗ್ರಹವು ದೊರೆತಾಗ ಖಂಡಿತವಾಗಿಯೂ ಸಂಸಾರಬಂಧದಿಂದ ಮುಕ್ತಿ ಎಂಬ ಫಲವು ದೊರೆಯುತ್ತದೆ. ಈ ಸಿದ್ಧಾಂತದ ವಿಚಾರವು ಇಲ್ಲಿ ಪ್ರತಿಪಾದಿತವಾಗಿದೆ.

ಇಲ್ಲಿ ಶಾಸ್ತ್ರವೇ ಜಲಧಿ, ಸಂಸಾರವೇ ವಾರಿಧಿ, ಕೃಪೆಯೇ ಹಡಗ, ಎಂದು ಹೇಳಿರುವುದರಿಂದ ರೂಪಾಲಂಕಾರವಿದೆ. ರೇವತೀ ಶಬ್ದದ ಉಲ್ಲೇಖದಿಂದಾಗಿ ಮುದ್ರಾಲಂಕಾರವೂ ಇದೆ.

ವಿಗ್ರಹವಾಕ್ಯಗಳು- ಫಣಿಭಾಣಿಕಾಮುಖಂ - ಫಣಿನಃ ಭಾಣಿಕಾ, ಸಾ ಏವ ಮುಖಂ ಯಸ್ಯ ತತ್, **ಅಹಶ್ಶೇಷಂ** - ಅಹ್ನಃ ಶೇಷಂ, **ಕ್ಲೃಪ್ತಾರಾರ್ತಿಕಮಂಗಲಃ** - ಕ್ಲೃಪ್ತಂ ಆರಾರ್ತಿಕಂ ಏವ ಮಂಗಲಂ ಏನ ಸಃ, **ರಮಾಗೋಪಾಯ** - ರಮಾಂ ಗೋಪ್ಯತಿ - ಇತಿ ರಮಾಗೋಪಃ ತಸ್ಮೈ, **ಶಾಸ್ತ್ರಜಲಧೇಃ** - ಶಾಸ್ತ್ರಂ ಏವ ಜಲಧಿಃ ತಸ್ಯ. **ಭವವಾರಿಧೇಃ** - ಭವ ಏವ ವಾರಿಧಿಃ ತಸ್ಯ. **ಕೃಪಾತರ್ಯಾ** -ಕೃಪಾ ಏವ ತರೀ ತಯಾ.

ಕೋಶಗಳು- ಫಣಿ - ''ಫಣಿಭಾಷಿತಭಾಷ್ಯಫಕ್ಕಿಕಾ'' ಎಂದು ನೈಷಧೀಯ ಚರಿತ್ರದಲ್ಲಿ(2-95). ಫಣೀ ಶಬ್ದವನ್ನು ಪತಂಜಲಮಹರ್ಷಿ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಅಹಃ - ''ಘಸ್ರೋ ದಿನಾಹನೀ ವಾತು ಕ್ಲೀಬೇ ದಿವಸವಾಸರೌ'' ಇತ್ಯಮರಃ(1-4-2). ತರಿ - ''ಸ್ತ್ರಿಯಾಂ ನೌಸ್ತರಣಿಸ್ತರಿಃ'' ಇತ್ಯಮರಃ(1-10-10).

Rarest Archiver

ವ್ಯಾಕರಣ ವಿಚಾರಗಳು– ಪಾತಯನ್ - ಪತ ಪತತಿ 1ನೇಯ ಗಣ, ಣಿ ಚ್ ಪಾತಯತಿ ಶತೃಂತರೂಪ.

ತಾರಾವಲೀಯಂ ಯೋಗೀಂದ್ರಯಮಿಣೇ ಹರಿಕಾಮಿಣೇ ।
ತದಂತರ್ಯಾಮಿಣೇ ಶ್ರೀಕಾಮಿಣೇ ಚ ಮಮ ರೋಚತಾಂ ।।
(ತದಂತರ್ಯಾಮಿಣೇ ಚ ಶ್ರೀಕಾಮಿಣೇ ಮಮ ರೋಚತಾಂ) ।।28।।

ಅನ್ವಯಾರ್ಥಃ - ಮಮ ಇಯಂ - ನಮ್ಮಿಂದ ರಚಿತವಾಗಿದ್ದ ಇದುವರೆಗೆ ಹೇಳಲ್ಪಟ್ಟ ಇಪ್ಪತ್ತೇಳು ಶ್ಲೋಕಗಳುಳ್ಳ, **ತಾರಾವಲೀ** - ಅಶ್ವಿನೀ, ಭರಣೀ, ಇತ್ಯಾದಿ 27 ನಕ್ಷತ್ರಗಳ ಉಲ್ಲೇಖಗಳಿಂದ ಕೂಡಿದ ಪದ್ಯಮಾಲಿಕೆಯೆಂಬ ಈ ಚಾಟು ಪ್ರಬಂಧವು, **ಹರಿಕಾಮಿಣೇ** - ಪರಮಾತ್ಮನ ಅನುಗ್ರಹವನ್ನೂ ಅವನ ಸಾಮೀಪ್ಯ, ಸಾಯುಜ್ಯ, ಸಾಲೋಕ್ಯ ರೂಪವಾದ ಮುಕ್ತಿಯನ್ನೂ ಇಚ್ಛಿಸುವಂಥ, **ಶ್ರೀಯೋಗೀಂದ್ರಯಮಿಣೇ** - ಶ್ರೀಯೋಗೀಂದ್ರತೀರ್ಥರಿಗೆ ಪ್ರೇರಕನಾಗಿ ಅಂತರ್ಯಾಮಿಯಾಗಿರುವ, **ಶ್ರೀಕಾಮಿಣೇ** - ಲಕ್ಷ್ಮೀಪತಿಯಾದ ನಾರಾಯಣನಿಗೆ ಕೂಡ, **ರೋಚತಾಮ್** - ಪ್ರೀತಿಕರವಾಗಲಿ, ಇದರಿಂದ ಶ್ರೀಯೋಗೀಂದ್ರತೀರ್ಥರು ಹಾಗೂ ಅವರ ಅಂತರ್ಯಾಮಿಯಾದ ಪರಮಾತ್ಮನೂ ಸಂತುಷ್ಟನಾಗಲಿ.

ಇಲ್ಲಿ ಉಪಸಂಹಾರರೂಪವಾದ ಶ್ಲೋಕದಲ್ಲಿ ಕವಿಗಳಾದ ಶ್ರೀಸುಮತೀಂದ್ರತೀರ್ಥರು ಈ ಪದ್ಯಮಾಲಿಕೆಯನ್ನು ಪರಮಗುರುಗಳಾದ ಶ್ರೀಯೋಗೀಂದ್ರತೀರ್ಥರಲ್ಲಿ ಹಾಗೂ ಅವರ ದ್ವಾರಾ ಅವರ ಅಂತರ್ಯಾಮಿಯಾದ ಪರಮಾತ್ಮನಲ್ಲಿ ಭಕ್ತಿಯಿಂದ ಸಮರ್ಪಿಸಿ, ಅವರು ಸಂತುಷ್ಟರಾಗಿ ಅನುಗ್ರಹಮಾಡಲಿ ಎಂದು ಪ್ರಾರ್ಥಿಸುತ್ತಿದ್ದಾರೆ. ಸಕಲ ಕಾರ್ಯಗಳನ್ನೂ ಗುರುಗಳಲ್ಲಿ ಹಾಗೂ ಗುರ್ವಂತರ್ಗತನಾದ ಪರಮಾತ್ಮನಲ್ಲಿ ಭಕ್ತಿಯಿಂದ ಸಮರ್ಪಿಸಿ ಅವರ ಅನುಗ್ರಹಕ್ಕಾಗಿ ಪ್ರಾರ್ಥಿಸಬೇಕು ಎಂಬ ತತ್ತ್ವವನ್ನು ಶ್ರೀಸುಮತೀಂದ್ರತೀರ್ಥರು ತಮ್ಮ ಆಚರಣೆಯಿಂದಲೇ ತೋರಿಸಿಕೊಟ್ಟಿದ್ದಾರೆ.

Rarest Archiver

।। ಇತಿ ಶ್ರೀಮತ್ಸರ್ವತಂತ್ರಸ್ವತಂತ್ರ, ಕವಿಕುಲತಿಲಕ ಕವಿಕಂಠೀರವ ಶ್ರೀಮತ್ಸುಮತೀಂದ್ರತೀರ್ಥ ಪೂಜ್ಯಪಾದ ವಿರಚಿತಾ ಸವ್ಯಾಖ್ಯಾ ಶ್ರೀಮದ್ಯೋಗೀಂದ್ರತಾರಾವಲೀ ಸಂಪೂರ್ಣಾ ।।

ಇತಿ ಶ್ರೀಮತ್ಸರ್ವತಂತ್ರಕವಿಕುಲತಿಲಕ, ಕವಿಕಂಠೀರವ ಇತ್ಯಾದಿ ಬಿರುದಾಂಕಿತರಾದ ಶ್ರೀಸುಮತೀಂದ್ರತೀರ್ಥಪೂಜ್ಯಪಾದರಿಂದ ರಚಿತವಾದ ಸ್ವವ್ಯಾಖ್ಯೆಯಿಂದ ಸಹಿತವಾದ ''ಶ್ರೀಯೋಗೀಂದ್ರತಾರಾವಲೀ''ಯು ಸಂಪೂರ್ಣವಾಯಿತು.

ಶ್ರೀಯೋಗೀಂದ್ರತಾರಾವಲೀ ಗ್ರಂಥದ ಕನ್ನಡ ಅನುವಾದ, ತಾತ್ಪರ್ಯ ವಿವರಣೆ, ವಿಶೇಷ ವಿಚಾರಗಳ ವಿಮರ್ಶೆಯಿಂದ ಕೂಡಿದ ''ಶ್ರೀಯೋಗೀಂದ್ರತಾರಾವಲೀ ಪ್ರಕಾಶವು'' ಸಮಾಪ್ತವಾಯಿತು. ಶ್ರೀಸುಮತೀಂದ್ರತೀರ್ಥರು, ಶ್ರೀಯೋಗೀಂದ್ರತೀರ್ಥರು ಶ್ರೀರಾಘವೇಂದ್ರಗುರುಗಳು ಹಾಗೂ ತದಂತರ್ಯಾಮಿಯಾದ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮನ್ನಾರಾಯಣನು ಅನುಗ್ರಹ ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

।। ಶ್ರೀಕೃಷ್ಣಾರ್ಪಣಮಸ್ತು ।।

--0--

Rarest Archiver

Rarest Archiver